# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 24.10.2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಜಂಟಿ ಆಯುಕ್ತರು (ಆರೋಗ್ಯ ಮತ್ತು ಕಲ್ಯಾಣ), |
| ಲತಾ. ಕೆ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಭೂಸ್ವಾಧೀನ), |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು–ಕೆರೆಗಳು), |
| ವಿ. ವಾಗಿಶ್ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| ಮಂಜುನಾಥ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ ರಸ್ತೆ–ಮೂಲಭೂತಸೌಕರ್ಯ), (ಕೆರೆಗಳು), |
| ಎಲ್. ನಾಗರತ್ನ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ರಸ್ತೆ–ಮೂಲಭೂತಸೌಕರ್ಯ–ಪಶ್ಚಿಮ), |
| ವರಲಕ್ಷ್ಮಿ. ಜೆ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಹೊಂಬೇಗೌಡ ನಗರ) |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಗೈರುಹಾಜರಾದ ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *<u>01]. ವಿಷಯದ ಸಂಖ್ಯೆ :–ತೆಆಸ್ಥಾಸ/173/2011–12</u>*

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ಬೊಮ್ಮನಹಳ್ಳಿ ವಲಯದ ಹೆಚ್.ಎಸ್.ಆರ್ ಬಡಾವಣೆಯ 14ನೇ ಮುಖ್ಯರಸ್ತೆಯ 17ನೇ ಅಡ್ಡರಸ್ತೆಯಿಂದ 27ನೇ ಅಡ್ಡರಸ್ತೆವರೆಗೆ 775.00ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ 170.00 ಲಕ್ಷಗಳಿಗೆ 2009–10ರ PWD SR ಸೂಚಿಯಂತೆ ತಯಾರಿಸಿ ಕಾಮಗಾರಿಯ ಸಂಖ್ಯೆ : 000-10N-P-R-E-AS-046 ರಲ್ಲಿ (000-10-N-P-R-E-AS-075) ಕಂಡಿಕೆ (9) ರಲ್ಲಿ ಹಾಗೂ (44) ಆಯುಕ್ತರ ಅನುಮೋದನೆ ಪಡೆಯಲಾಗಿದ್ದು, ಅದರಂತೆ ಗುತ್ತಿಗೆ ಕರೆದು ಗುತ್ತಿಗೆದಾರರಾದ ಶ್ರೀ ಆರ್. ಲೋಕೇಶ್ ರವರಿಗೆ ಕಾಮಗಾರಿಯನ್ನು ಕೈಗೊಳ್ಳಲು ಕಾಯಾದೇಶವನ್ನು ಕಂಡಿಕೆ (51–52) ರಲ್ಲಿ ನೀಡಲಾಗಿತ್ತು.

ಸದರಿ ಕಾಮಗಾರಿಗೆ ನೀಡಲಾದ work code ನವೀಕರಿಸಲು ನಿಗಧಿತ Revalidation ನಮೂನೆಯಲ್ಲಿ ಭರ್ತಿ ಮಾಡಿ ಕಾಮಗಾರಿ ಸಂಖ್ಯೆಯನ್ನು ನವೀಕರಣಗೊಳಿಸಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಂಡಿಕೆ (93) ರಲ್ಲಿ ಕಡತವನ್ನು ಕಳುಹಿಸಲಾಗಿತ್ತು. ನಮೂನೆಯನ್ನು ಪರಿಶೀಲಿಸಿ job code No: 001802 ನೀಡಿ ಕೈಗೊಳ್ಳುವ ಕಾಮಗಾರಿಗೆ ಟಿವಿಸಿಸಿ ರವರಿಂದ ಕಾಮಗಾರಿಯ ಅಂದಾಜಿಗೆ ಫ್ರೀ ಆಡಿಟ್ ಮಾಡಿಸಿದ ನಂತರ ನವೀಕರಿಸಿದ ಕಾಮಗಾರಿಯ ಸಂಕೇತವನ್ನು ನೀಡಲಾಗುವುದು ಎಂದು ತಿಳಿಸಿ ಕಡತವನ್ನು ಹಿಂದಿರಿಗಿಸಿರುತ್ತಾರೆ. (ಪುಟ ಸಂಖ್ಯೆ : 34)

ದಿನಾಂಕ : 07–05–2011ರ ಮಾನ್ಯ ಬೊಮ್ಮನಹಳ್ಳಿ ಶಾಸಕರ ಪತ್ರ (ಪುಟ ಸಂಖ್ಯೆ 36) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಎಲ್.ರಮೇಶ್ ವಾರ್ಡ್ ಸಂಖ್ಯೆ 187 ಪುಟ್ಟೇನಹಳ್ಳಿ ಪತ್ರದ ಅನುಸಾರವಾಗಿ ಮಾನ್ಯ ಆಯುಕ್ತರು, ಶಾಸಕರು ಹಾಗೂ ಸದಸ್ಯರು ಕೋರಿರುವ ರಸ್ತೆಗೆ ಅಂದಾಜನ್ನು ತಯಾರಿಸಿ, ಮೂಲ ಅಂದಾಜನ್ನು ಸದರಿ ರಸ್ತೆಗೆ ಕಾಮಗಾರಿಯನ್ನು ಸ್ಥಳ ಬದಲಾವಣೆ ಮಾಡಿ ಟೆಂಡರ್ ಕರೆಯಲು ಬರುವುದಿಲ್ಲ.

ಅದರಂತೆ ಈಗ ಜೆ.ಪಿ.ನಗರದ ಪಾಂಡುರಂಗ ಲೇಔಟ್ ರಸ್ತೆಗಳಿಗೆ Side Drain ಅಳವಡಿಸಿ, ವೆಂಕಟಾದ್ರಿ ಲೇಔಟ್ 1ನೇ ಮುಖ್ಯ ಹಾಗೂ ಅಡ್ಡ ರಸ್ತೆಗೆ ಉದ್ದ –90 ಮೀಟರ್‌ಗೆ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜನ್ನು PWD ದರ ಸೂಚಿ 2010–11ರಂತೆ ರೂ.170.00 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ. ಸದರಿ ರಸ್ತೆಯು ಸಬ್–ಆರ್ಟೆರಿಯಲ್ ರಸ್ತೆಯಾಗಿದ್ದು ವಾರ್ಡ್ ವತಿಯಿಂದ ಕೈಗೊಳ್ಳಲು ಬರುವುದಿಲ್ಲ.

ಸದರಿ ಅಂದಾಜನ್ನು ಟಿವಿಸಿಸಿ ರವರಿಂದ ದಿನಾಂಕ : 15–06–2011 ರಂದು ಸ್ಥಳ ಪರಿಶೀಲನೆ ಮಾಡಲಾಗಿದೆ. ಪ್ರಸ್ತುತ ರಸ್ತೆಯು ಬನ್ನೇರುಘಟ್ಟ ರಸ್ತೆಗೆ ಮುಖ್ಯ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ವಾಹನ ಸಂಚಾರ ದಟ್ಟಣೆಯು ಅತ್ಯಂತ ಹೆಚ್ಚಾಗಿದ್ದು, ಪಾದಚಾರಿಗಳು ಚಲಿಸುವುದು ಬಹಳ ಕಷ್ಟಕರವಾಗಿರುತ್ತದೆ. ಈಗಿರುವ BS slab Drain ಶಿಥಿಲಗೊಂಡು, depleted ಸ್ಥಿತಿಯಲ್ಲಿದ್ದು, ಪೂರ್ಣ ಪ್ರಮಾಣದ ಹೂಳು ತುಂಬಿದ್ದು Drain ಆಳವು ಸುಮಾರು 1.00 ಮೀಟರ್ ನಿಂದ 1.10 ಇರುತ್ತದೆ. ಇದರಿಂದ ಪಾದಚಾರಿಗಳು Drain ನಲ್ಲಿ ಬೀಳುವ ಸಂಭವವಿರುತ್ತದೆ. ಆದ್ದರಿಂದ ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ.ಎಲ್. ರಮೇಶ್ ರವರು (ವಾರ್ಡ್ 187, ಪುಟ್ಟೇನಹಳ್ಳಿ ವಾರ್ಡ್) ಸ್ಥಳ ಪರಿಶೀಲನೆ ನಡೆಸಿ ರಸ್ತೆ ಮೂಲಭೂತ ಸೌಕರ್ಯ ರವರಿಂದ ಸಮಗ್ರವಾಗಿ ಹೊಸದಾಗಿ RCC drain ನ್ನು ಹಾಗೂ Cover slab ಅಳವಡಿಸಿ ಪಾಡುರಂಗ ಹಾಗೂ ವೆಂಕಟಾದ್ರಿ ಲೇಔಟ್ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುವ ಪತ್ರವನ್ನು ಮಾನ್ಯ ಬೊಮ್ಮನಹಳ್ಳಿ ಶಾಸಕರಿಗೆ ಪತ್ರ ಬರೆದಿರುತ್ತಾರೆ. ಮಾನ್ಯ ಶಾಸಕರು ರವರ ಪತ್ರದಲ್ಲಿ ಪಾಂಡುರಂಗ ಲೇಔಟ್ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಮಾನ್ಯ ಆಯುಕ್ತರಿಗೆ ಕೋರಿದ್ದು, ಮಾನ್ಯ ಆಯುಕ್ತರ ಟಿಪ್ಪಣಿ ಅನ್ವಯ ಮೂಲ ಅಂದಾಜನ್ನು ಬದಲಾವಣೆ ಮಾಡಿ ಮರು ಟೆಂಡರ್ ಕರೆಯಲು ಸೂಚಿಸಿದ್ದಾರೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಹಾಲಿ ನೀಡಲಾದ work code ಬಳಸಿಕೊಂಡು ಸದರಿ ಕಾಮಗಾರಿಗೆ ಮರು ಟೆಂಡರ್ ಕರೆಯಲು ಪ್ರಸ್ತಾಪಿಸಲಾಗಿದೆ. ಈಗಾಗಲೇ ನೀಡಿರುವ ಗುತ್ತಿಗೆ ಕರಾರನ್ನು ರದ್ದುಪಡಿಸಿ ಮರು ಟೆಂಡರ್‌ನ್ನು ಕರೆಯಲಾಗುವುದು ಆದ್ದರಿಂದ ಈ ಕೆಳಕಂಡ ಅಂಶಗಳಿಗೆ

- ಬದಲಾವಣೆ ಮಾಡಿರುವ ಸ್ಥಳದ ಕಾಮಗಾರಿಯ ಅಂದಾಜು ರೂ.170.00 ಲಕ್ಷಗಳಿಗೆ ಅನುಮೋದನೆ
- ಮರುಟೆಂಡರ್ ಕರೆಯಲು ಅನುಮೋದನೆ ಕೋರಿ ಕಡತವನ್ನು ಮಂಡಿಸಲಾಗಿತ್ತು.

ಮುಂದುವರೆದು ಕಂಡಿಕೆ (134) ಮಾನ್ಯ ಆಯುಕ್ತರವರು ಸದರಿ ಕಾಮಗಾರಿಯ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ.ಎಸ್.ಸತೀಶ್ ರೆಡ್ಡಿ (ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರ) ಹಾಗೂ ಶ್ರೀ ಎಲ್.ರಮೇಶ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು (ವಾರ್ಡ್ ಸಂಖ್ಯೆ : 187 ಪುಟ್ಟೇನಹಳ್ಳಿ) ರವರು ಸಹ ಮಾನ್ಯ ಆಯುಕ್ತರಿಗೆ ಸದರಿ ಕಾಮಗಾರಿ ಕೈಗೊಳ್ಳಲು ಮನವಿ ಮಾಡಿರುತ್ತಾರೆ.

ಆದ್ದರಿಂದ ಸದರಿ ಕಾಮಗಾರಿಗೆ 2011–12 ಸಾಲಿನ ಆಯವ್ಯಯದಲ್ಲಿ ರೂ.170.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುದಾನ ಒದಗಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***02]. ವಿಷಯದ ಸಂಖ್ಯೆ :–ತೆಆಸ್ಥಾಸ/226/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ (ಯೋಜನೆ) ರವರು ಕಡತದ ಕಂಡಿಕೆ ಸಂಖ್ಯೆ 19 ರಲ್ಲಿ ನಮೂದಿಸಿರುವ 6 ಕಾಮಗಾರಿಗಳ ಒಟ್ಟು ಮೊತ್ತ ರೂ.599.41 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಂಡಿಕೆ ಸಂಖ್ಯೆ 24 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ, ಲೆಕ್ಕ ಶೀರ್ಷಿಕೆ ಮೂಲ ಭೂತ ಸೌಕರ್ಯಗಳು ಮುಖ್ಯ ರಸ್ತೆ/ಆರ್ಟೀರಿಯಲ್/ಉಪ ಆರ್ಟೀರಿಯಲ್ ರಸ್ತೆಗಳು ಪಿ.ಸಂಖ್ಯೆ 2019 ರಲ್ಲಿ ಒಟ್ಟು 6 ಕಾಮಗಾರಿಗಳ ಮೊತ್ತ ರೂ.599.41 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/228/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 105ರ ಸದಸ್ಯರು ಹಾಗೂ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ರೂಪದೇವಿ ರವರು ಪತ್ರ ನೀಡಿ 9ನೇ ಕ್ರಾಸ್, ಅಗ್ರಹಾರ ದಾಸರಹಳ್ಳಿ ಜೈಮುನಿರಾವ್ ವೃತ್ತದಿಂದ ಹಾವನೂರು ವೃತ್ತದ ವರೆಗೆ ಡಾಂಬರೀಕರಣ ಮತ್ತು ಒಳಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಗೆ ರೂ.237.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.237.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 03–08–2011ರ ಆಯುಕ್ತರ ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.***

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/229/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 105ರ ಸದಸ್ಯರು ಹಾಗೂ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ರೂಪದೇವಿ ರವರು ಪತ್ರ ನೀಡಿ ಎಂ.ಸಿ.ಲೇಔಟ್ 1ನೇ ಮುಖ್ಯರಸ್ತೆ ಮತ್ತು 8ನೇ ಮುಖ್ಯರಸ್ತೆಗಳಿಗೆ ಡಾಂಬರೀಕರಣ ಮತ್ತು ಒಳಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಗೆ ರೂ.217.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.217.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 03–08–2011ರ ಆಯುಕ್ತರ ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.***

## ***05]. ವಿಷಯದ ಸಂಖ್ಯೆ :–ತೆಆಸ್ಥಾಸ/236/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ ಹನುಮಂತೇಗೌಡ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 72 ಇವರು ಮುದ್ದಯ್ಯನ ಪಾಳ್ಯ ರಿಂಗ್ ರಸ್ತೆಗೆ ಹಾದು ಹೋಗುವ ರಸ್ತೆಯಲ್ಲಿ ಪ್ರತಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.89.00 ಲಕ್ಷಗಳಿಗೆ ಅನುಮೋದನೆ ನೀಡಲು ಕೋರಿದ್ದು, ಕಾರ್ಯಪಾಲಕ ಅಭಿಯಂತರರು – ರಸ್ತೆ ಮೂಲಭೂತ ಸೌಕರ್ಯ ಇವರು ತುರ್ತು ಕಾಮಗಾರಿಗಳ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುತ್ತಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, 2010–11ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡ ಕಾಮಗಾರಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಅಡಿ ಸೂಕ್ತ ಅನುದಾನ ಒದಗಿಸಿಕೊಂಡು ಅನುಷ್ಟಾನಗೊಳಿಸುವುದರ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***06]. ವಿಷಯದ ಸಂಖ್ಯೆ :–ತೆಆಸ್ಥಾಸ/237/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎನ್. ಎಸ್. ನಂದೀಶರೆಡ್ಡಿ ರವರು ಹೆಚ್.ಎ.ಎಲ್. ಏರ್‌ಪೋರ್ಟ್ ವಾರ್ಡ್ 87ರ ಅನ್ನಸಂದ್ರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ರೂ.300.00 ಲಕ್ಷಗಳ ಅನುದಾನವನ್ನು ಮತ್ತು ವಾರ್ಡ್ 87ರ ನೆಲ್ಲೂರುಪುರದಿಂದ ರೆಡ್ಡಿಪಾಳ್ಯ ಎಲ್.ಬಿ.ಶಾಸ್ತ್ರಿನಗರ ಮೂಲಕ ವಿಭೂತಿಪುರ ಕೆರೆವರೆಗೆ ರಾಜಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷ ಒಟ್ಟು ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಅನುದಾನದ ಮೊತ್ತ ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***07]. ವಿಷಯದ ಸಂಖ್ಯೆ :–ತೆಆಸ್ಥಾಸ/240/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/45/06–07, ದಿನಾಂಕ : 24–07–2011ರಲ್ಲಿ ವಿವರಿಸಿರುವಂತೆ, ಶ್ರೀ.ಧರ್ಮಲಿಂಗಂ, ನಿವೃತ್ತ ಸೈನಿಕರು, ದಿನಾಂಕ:04–06–2011 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ ವಾರ್ಡ್ 82ರ ಜೈರಾಜ್‌ನಗರ ಹರಿಜನ ಸೇವಕ ಸಂಸ್ಥೆ ಪಕ್ಕದಲ್ಲಿರುವ 131.25 ಚದರ ಅಡಿಗಳ ನಿವೇಶನವನ್ನು ವಾಸದ ಉದ್ದೇಶಕ್ಕೆ ಹಕ್ಕುಪತ್ರ ಅಥವಾ ಗುತ್ತಿಗೆಗೆ ನೀಡುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ ಬಿಬಿಎಂಪಿ ವಾರ್ಡ್ ನಂ.82ರ ಜೈರಾಜ್‌ನಗರ, ಹರಿಜನ ಸೇವಕ ಸಂಸ್ಥೆ ಪಕ್ಕದಲ್ಲಿರುವ 20+15/2, 8+7/2=131.25 ಚದರ ಅಡಿಗಳ ಜಾಗವನ್ನು ಶ್ರೀ.ಎಂ.ಧರ್ಮಲಿಂಗಂ ಮಾಜಿ ಸೈನಿಕರಿಗೆ ಅಂದಿನ ಮಾರುಕಟ್ಟೆ ದರದಂತೆ ಚದರ ಅಡಿ 1ಕ್ಕೆ ರೂ. 350/– ಗಳಂತೆ ಒಟ್ಟು ಮೌಲ್ಯ ರೂ. 45,955/– ಗಳನ್ನು ನಿಗಧಿಪಡಿಸಿ ಪಾಲಿಕೆ ವಿಷಯದ

ಸಂಖ್ಯೆ:14 (156) ದಿನಾಂಕ;18–02–2006 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಿ, ದಿನಾಂಕ:03–05–2006 ರಂದು ಸರ್ಕಾರದ ಅನುಮೋದನೆ ಕೋರಲಾಗಿತ್ತು.

ಸರ್ಕಾರದ ಅದೇಶ ಸಂಖ್ಯೆ:ನಅಇ 222 ಎಂಎನ್‌ಜಿ 2008, ಬೆಂಗಳೂರು ದಿ:03–09–2009 ರಂದು ನೀಡಿರುವ ಆದೇಶದಲ್ಲಿ ಬಿಬಿಎಂಪಿಗೆ ಸಂಬಂಧಿಸಿದ ಸ್ವತ್ತುಗಳ ಬಗ್ಗೆ ಕ್ರಯಕ್ಕೆ ನೀಡಲು ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸುವ ಪ್ರಸ್ತಾವನೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ಮಂಡಿಸಿ ಸಲಹಾ ಸಮಿತಿಯ ತೀರ್ಮಾನದಂತೆ ಅಗತ್ಯವಾದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ದಿನಾಂಕ:26–10–2010 ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ಶ್ರೀ.ಧರ್ಮಲಿಂಗಂ ರವರು ಕೋರಿರುವ ಜಾಗ ರಸ್ತೆ ಅಗಲೀಕರಣಕ್ಕಾಗಿ ಅವಶ್ಯವಿರುವುದರಿಂದ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಬೇಕೆಂದು ಸೂಚಿಸಲಾದ ಮೇರೆಗೆ ದಿನಾಂಕ:31–05–2011 ರಂದು ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ.

ಆದರೆ ಕ್ರಯಕ್ಕೆ ನೀಡಲು ಕೋರಿರುವ ಜಾಗವನ್ನು ಪುನ: ಹಕ್ಕು ಪತ್ರದ ಮೂಲಕ ಅಥವಾ ಗುತ್ತಿಗೆಗೆ ನೀಡುವಂತೆ ಕೋರಿದ್ದು, ಪ್ರಸಕ್ತ ಮಾರುಕಟ್ಟೆ ದರದಂತೆ ಪ್ರತಿ ಚದರ ಅಡಿ 1ಕ್ಕೆ ರೂ.–1000/– ಗಳಂತೆ 131.25 ಚದರ ಅಡಿಗಳಿಗೆ ಒಟ್ಟು ನಿವೇಶನದ ಮೌಲ್ಯ ರೂ. 1,31,250/– ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಮೌಲ್ಯ ರೂ, 13125/– ಗಳಾಗುತ್ತದೆ ಮಾಸಿಕ ರೂ. 1094/– ಗಳಾಗುತ್ತದೆ.

ಆದರೆ ಸರ್ಕಾರದ ಆದೇಶ ಸಂ. ನಅಇ 129 ಟಿಎಂಡಿ 2002 ಬೆಂಗಳೂರು ದಿ:02–06–2003 ಮಾರ್ಗಸೂಚಿ ಕ್ರಮಸಂಖ್ಯೆ VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು. ಮೇಲ್ಕಾಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದ್ದಲ್ಲ ಎಂದಿದೆ.

ಆದರೆ ಅರ್ಜಿದಾರರು ಗುತ್ತಿಗೆಗೆ ನೀಡಲು ಕೋರಿರುವ ಜಾಗವು ರಸ್ತೆ ಅಗಲೀಕರಣಕ್ಕಾಗಿ ಅವಶ್ಯವಿರುವುದಾಗಿ ಕಡತದಲ್ಲಿ ವರದಿಯಾಗಿರುವುದರಿಂದ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 24–07–2011 ಟಿಪ್ಪಣಿಯನ್ನು ಮಾರ್ಪಡಿಸಿ ಸದರಿ ರಸ್ತೆ ಅಗಲೀಕರಣ ಕಾರ್ಯ ಪ್ರಾರಂಭಿಸಿದಲ್ಲಿ ಸ್ವತ್ತನ್ನು ಪಾಲಿಕೆಗೆ ಹಸ್ತಾಂತರಿಸುವ ಷರತ್ತಿಗೊಳಪಟ್ಟು ಸ್ವತ್ತನ್ನು 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 02–08–2011ರ ನಿರ್ಣಯ.

***<u>ನಿರ್ಣಯ :</u>*** ***<u>ದಿನಾಂಕ : 02–08–2011ರ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದುನೂರು) ಗಳ ಗುತ್ತಿಗೆ ಮೊತ್ತವನ್ನು  ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>08]. ವಿಷಯದ ಸಂಖ್ಯೆ :–ತೆಆಸ್ಥಾಸ/253/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/07/11–12, ದಿನಾಂಕ : 21–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.64 (4), ಮಲ್ಲೇಶ್ವರಂ ರಲ್ಲಿನ ಕಾಡುಮಲ್ಲೇಶ್ವರ 7ನೇ ಮುಖ್ಯರಸ್ತೆಯಲ್ಲಿ 30X65 ಅಡಿ ಅಳತೆಯ ಪಾಲಿಕೆಯ ಖಾಲಿ ನಿವೇಶನವನ್ನು ಶ್ರೀ.ಅಯ್ಯಪ್ಪ ದೇವಸ್ಥಾನ ನಿರ್ಮಿಸಲು ಮೊದಲಿಗೆ ಗುತ್ತಿಗೆಗೆ ನೀಡಿದ್ದು, ಅನಂತರದಲ್ಲಿ 9000 ಚ.ಅಡಿಗಳ ನಿವೇಶನವನ್ನು ವಾರ್ಷಿಕ ಗುತ್ತಿಗೆ ಮೊತ್ತ ರೂ.500/– ಗಳಂತೆ ದಿನಾಂಕ:02–08–1978 ರಿಂದ 01–08–2008ರ ವರೆಗೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿಲಾಗಿದ್ದು, ಇದರ ಅವಧಿಯು ಸಹಾ 01–08–2008ಕ್ಕೆ ಮುಕ್ತಾಯವಾಗಿದ್ದು, ಈಗ ಸದರಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರು 99 ವರ್ಷಗಳ ಅವಧಿಗೆ ಗುತ್ತಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತುತ ಸ್ಥಳವು ರಸ್ತೆ ಅಗಲೀಕರಣಕ್ಕೆ ಅವಶ್ಯವಿದೆಯೆಂದು ಕಂಡು ಬಂದಿದ್ದು, ನಂತರದಲ್ಲಿ ಸದ್ಯಕ್ಕೆ ಅದರ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿ ಒಂದು ವೇಳೆ ಸದರಿ ಸ್ಥಳ ರಸ್ತೆ ಅಗಲೀಕರಣಕ್ಕೆ ಬೇಕಾದಲ್ಲಿ ಇದರಂತೆ ಷರತ್ತು ವಿಧಿಸಿ ಗುತ್ತಿಗೆ ಮುಂದುವರೆಸಲು ಕ್ರಮ ತೆಗೆದುಕೊಳ್ಳಬಹುದೆಂದು ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಕಂಡಿಕೆ 79 ರಲ್ಲಿ ವರದಿ ನೀಡಿರುತ್ತಾರೆ.

ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಲಾಗಿ ಇದು ಒಟ್ಟು 9000 ಚ.ಅಡಿ ಜಾಗವಿದ್ದು, ಸುಮಾರು. 3800.94 ಚದರ ಅಡಿಯಲ್ಲಿ ದೇವಸ್ಥಾನ ನಿರ್ಮಾಣ ಮಾಡಿದ್ದು, 1817.78 ಚ.ಅಡಿ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆದಿದ್ದು, ಈಗ ಸ್ಥಗಿತಗೊಂಡಿದ್ದು ಇನ್ನು 359.25 ಚದರ ಅಡಿ ಜಾಗದಲ್ಲಿ ದೇವಸ್ಥಾನದ ಕಛೇರಿ ಕಟ್ಟಡವಿರುವುದಾಗಿ ತಿಳಿದು ಬರುತ್ತದೆ.

ಪ್ರಸ್ತುತ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ:01-08-2008ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.3500/-ಗಳಾಗಿದ್ದು ಇದರಂತೆ 9000 ಚದರ ಅಡಿ ಜಾಗಕ್ಕೆ 3500X9000=3,15,00,000 ರೂ ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ. 31,50,000/-ಗಳಾಗುತ್ತದೆ. ಹಾಗೂ ಮಾಸಿಕ ಗುತ್ತಿಗೆ ದರವು ರೂ.2,62,500/- ಆಗುತ್ತದೆ ಎಂದು ತಿಳಿಸಿ ಗುತ್ತಿಗೆ ಅವಧಿ ನವೀಕರಣಕ್ಕೆ ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮತ್ತು ಕ್ರಯಕ್ಕೆ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ 5 ವರ್ಷದ ಅವಧಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 21-06-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26-07-2011ರ ನಿರ್ಣಯ.

**-ಮುಂದೂಡಿದೆ-**

## ***09]. ವಿಷಯದ ಸಂಖ್ಯೆ :-ತೆಆಸ್ಥಾಸ/256/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 08-08-2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 105ರ ಸದಸ್ಯರು ಹಾಗೂ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ರೂಪದೇವಿ ರವರು ಪತ್ರ ನೀಡಿ ಮಾಗಡಿ ಮುಖ್ಯ ರಸ್ತೆ ಟೋಲ್‌ಗೇಟ್ ವೃತ್ತದಿಂದ ಹೌಸಿಂಗ್ ಬೋರ್ಡ್ ಸಿಗ್ನಲ್ ವರೆಗಿನ ರಸ್ತೆಯನ್ನು ಡಾಂಬರೀಕರಣ ಮತ್ತು ಒಳಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಗೆ ರೂ.378.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011-12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.378.00 ಲಕ್ಷಗಳಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 08-08-2011ರ ಆಯುಕ್ತರ ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.***

## *10]. ವಿಷಯದ ಸಂಖ್ಯೆ :-ತೆಆಸ್ಥಾಸ/258/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 07-06-2011ರಲ್ಲಿ ವಿವರಿಸಿರುವಂತೆ, ಮಹದೇವಪುರ ವಲಯದ, ದೇವಸಂದ್ರ ಕೆರೆಯು ಬಿ.ಬಿ.ಎಂ.ಪಿಗೆ ಒಳಪಟ್ಟ ಕೆರೆಯಾಗಿದ್ದು, ದೇವಸಂದ್ರ ಕೆರೆಯನ್ನು ಅಭಿವೃದ್ಧಿಗೊಳಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಕೋರಿರುತ್ತಾರೆ. ಹಾಗೂ ಸದರಿ ಕೆರೆಯು ಬಿಡಿಎ ಗೆ ಹಸ್ತಾಂತರಿಸಲು ಪ್ರಸ್ತಾಪಿಸಿರುವ ಕೆರೆಗಳ ಪಟ್ಟಿಯಲ್ಲಿ ಸೇರಿಲ್ಲದ ಕಾರಣ ಮಾನ್ಯ ಆಡಳಿತ ಪಕ್ಷದ ನಾಯಕರು ಸದರಿ ಕೆರೆಯನ್ನು ಅಭಿವೃದ್ಧಿ ಪಡಿಸಲು ತುರ್ತು ಕ್ರಮ ವಹಿಸಲು ಸೂಚಿಸಿರುತ್ತಾರೆ.

ಅದರಂತೆ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

- ಕೆರೆಯ ಏರಿಯ ಜಂಗಲ್ ತೆಗೆಯುವ ಕೆಲಸ.
- ಕೆರೆಯ ಅಂಗಳದಲ್ಲಿರುವ ದೊಡ್ಡ ಜೊಂಡನ್ನು ತೆಗೆದು, ಅದರ ಬೇರನ್ನು ತೆಗೆಯಲು 15ಸೆಂ.ಮೀ ಆಳಕ್ಕೆ ಹೂಳನ್ನು ತೆಗೆಯುವ ಕೆಲಸ.
- ಹಾಲಿ ಇರುವ ಏರಿಯನ್ನು ಬಲ ಪಡಿಸುವುದು.
- ಏರಿಯ ಸುತ್ತಲೂ ನೆಡೆದಾಡುವ ಎರಡು ಬದಿ ದಾರಿಗೆ ಕರ್ಬ್ ಅಳವಡಿಸುವುದು.
- ಕೆರೆಯ ಕೋಡಿಯ ಹತ್ತಿರ ಕಾಲುಸೇತುವೆ ನಿರ್ಮಾಣ.
- ಕೊಳಚೆ ನೀರು ತಿರುವು ಕಾಲುವೆ ಮತ್ತು ಎರಡು ಗೆಝುಬೋಗಳು.
- ಕಾವಲುಗಾರರ ಕೊಠಡಿ ಮತ್ತು ಶೌಚಾಲಯ,
- ಕೆರೆಯಲ್ಲಿ ವಿದ್ಯುಧೀಕರಣ ಹಾಗೂ ಅರಣ್ಯೀಕರಣ ಕಾಮಗಾರಿ.

ಮಹದೇವಪುರ ವಲಯದ, ದೇವಸಂದ್ರ ಕೆರೆಯನ್ನು ಅಭಿವೃದ್ದಿಗೊಳಿಸುವ ಕಾಮಗಾರಿಗೆ ತಗುಲುವ ವೆಚ್ಚ ರೂ. 234.25 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ **2011-12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸುವ ಷರತ್ತಿಗೆ ಒಳಪಟ್ಟು, ಜಾಬ್ ನಂಬರ್ ನೀಡಲು ಕೋರಿ** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯ ಮತ್ತು ತೆರಿಗೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :* **ಆಯುಕ್ತರ ದಿನಾಂಕ : 08-08-2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯನ್ನು, 2011-12ನೇ ಸಾಲಿನ ಆಯವ್ಯಯದಲ್ಲಿ 12-ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ – ಕೆರೆಗಳ ನಿರ್ವಹಣೆ – ಹೊಸ ಕೆರೆಗಳ ಅಭಿವೃದ್ಧಿ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ :-ತೆಆಸ್ಥಾಸ/287/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಜಾ)ಪಿಆರ್/2492/10-11, ದಿನಾಂಕ : 02-08-2011ರಲ್ಲಿ ವಿವರಿಸಿರುವಂತೆ, ದಿನಾಂಕ : 02-08-2011ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ದಿನಾಂಕ:08.02.2011ರಂದು ಪೂಜ್ಯ ಮಹಾಪೌರರಿಗೆ ಪತ್ರವನ್ನು ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ 30 ಸ್ಥಳಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ) ದಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಅವಕಾಶ ಕಲ್ಪಿಸಲಾಗುವುದೆಂದು ಇದರ ವಿರುದ್ಧವಾಗಿ 500 ಅಡಿಗಳ ವಾಣಿಜ್ಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಕೋರಿರುತ್ತಾರೆ. ಅದರಂತೆ, ಪೂಜ್ಯ ಮಹಾಪೌರರವರು ನಿಯಾಮಾನುಸಾರ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಉಪ ಆಯುಕ್ತರು (ಜಾಹೀರಾತು)ರವರು ಈ ಕೆಳಕಂಡ ಸ್ಥಳಗಳನ್ನು ಸ್ಥಳ ತನಿಖೆ ಮಾಡಿ ಭಾವಚಿತ್ರದೊಂದಿಗೆ ವರದಿ ಮಾಡಿರುತ್ತಾರೆ. ಸ್ಥಳಗಳ ವಿವರ ಈ ಕೆಳಕಂಡಂತಿದೆ..

| ಕ್ರ. ಸಂ. | ಸ್ಥಳಗಳ ವಿವರ | ಸಂ. |
|---|---|---|
| 1. | ಎಂ.ಜಿ. ರಸ್ತೆ ಶಂಕರ್‌ನಾಗ್ ಥಿಯೇಟರ್ ಎದುರು | 1 |
| 2. | ಟ್ರಿನಿಟಿ ಚರ್ಚ್ ಸರ್ಕಲ್ | 1 |
| 3. | ಕಾಮರಾಜ ರಸ್ತೆ, ಸಿಗ್ನಲ್ ಹತ್ತಿರ | 1 |
| 4. | ರಿಚ್‌ಮಂಡ್ ರಸ್ತೆ, ಕೆ.ಎಸ್.ಆರ್.ಪಿ. ಕಾಂಪೌಂಡ್ | 1 |
| 5. | ರೆಸಿಡೆನ್ಸಿ ರಸ್ತೆ, ಬಿಷಪ್ ಕಾಟನ್ ಸ್ಕೂಲ್ ಕಾಂಪೌಂಡ್ | 1 |
| 6. | ಕೋರಮಂಗಲ ರಿಂಗ್ ರಸ್ತೆ, ಸೋನಿ ವರ್ಲ್ಡ್ ಎದುರು | 1 |
| 7. | ಕೋರಮಂಗಲ ರಿಂಗ್ ರಸ್ತೆ, ಈಜೀಪುರ ಜಂಕ್ಷನ್ | 1 |
| 8. | ಕೋರಮಂಗಲ ರಿಂಗ್ ರಸ್ತೆ, ಡೆಲ್ ನಂತರ | 1 |
| 9. | ಡಿಕೆನ್ಸನ್ ರಸ್ತೆ, ಕಲ್ಯಾಣ್ ಜುವೆಲ್ಲರ್ಸ್ ಎದುರು | 1 |
| 10. | ಸಿದ್ದಾಪುರ ಮುಖ್ಯರಸ್ತೆ ಬಸ್ ಸ್ಟಾಪ್ ಹತ್ತಿರ | 1 |
| 11. | ಜಯನಗರ 4ನೇ ಬ್ಲಾಕ್, ಕೂಲ್ ಜಾಯಿಂಟ್ ಸರ್ಕಲ್ ಹತ್ತಿರ, ವಿಜಯ ಕಾಲೇಜ್ ಕಾಂಪೌಂಡ್ | 1 |
| 12. | ಸಂಜಯ್ ಗಾಂಧಿ ಆಸ್ಪತ್ರೆ ಕಾಂಪೌಂಡ್ ಮುಂದೆ | 1 |
| 13. | ಜಯನಗರ ರಿಂಗ್ ರಸ್ತೆ, ಮಾರೇನಹಳ್ಳಿ ಪೆಟ್ರೋಲ್ ಬಂಕ್ ಪಕ್ಕ | 1 |
| 14. | ರೇಸ್ ಕೋರ್ಸ್ ರಸ್ತೆ | 1 |
| 15. | ಸ್ಯಾಂಕಿ ರಸ್ತೆ, ಮಾರುತಿ ಷೋ ರೂಂ ಪಕ್ಕದಲ್ಲಿ | 1 |
| 16. | ಮೇಖ್ರಿ ಸರ್ಕಲ್ ಏರ್ ಫೋರ್ಸ್ ಸ್ಟೇಷನ್ ಮುಂದೆ | 1 |
| 17. | ಬನ್ನೇರುಘಟ್ಟ ಮುಖ್ಯರಸ್ತೆ, ಜಯದೇವ ಆಸ್ಪತ್ರೆ ಎದುರು | 1 |
| 18. | ಮಲ್ಲೇಶ್ವರಂ ಮಂತ್ರಿ ಸ್ಕ್ವೇರ್ ಪಕ್ಕದಲ್ಲಿ | 1 |
| 19. | ಮಲ್ಲೇಶ್ವರಂ 18ನೇ ಕ್ರಾಸ್, ಬಸ್ ಸ್ಟಾಪ್ ಎದುರು | 1 |
| 20. | ಬಸವೇಶ್ವರನಗರ ಮುಖ್ಯರಸ್ತೆ, ವಲ್‌ಸಲಾ ಟ್ರಾವೆಲ್ಸ್ ಎದುರು | 1 |
| 21. | ಹಳೇ ಏರ್‌ಪೋರ್ಟ್ ರಸ್ತೆ, ಟೋಟಲ್ ಮಾಲ್ ಪಕ್ಕದಲ್ಲಿ: | 1 |
| 22. | ಇಂದಿರಾನಗರ 100 ಅಡಿ ರಸ್ತೆ, ನ್ಯೂ ಹಾರಿಜನ್ ಸ್ಕೂಲ್ ಹತ್ತಿರ | 1 |
| 23. | ಸಿ.ಎಂ.ಹೆಚ್ ರಸ್ತೆ | 1 |
| 24. | ಹಡ್ಸನ್ ಸರ್ಕಲ್, ಕಸ್ತೂರಿಬಾ ರಸ್ತೆ | 1 |
| 25. | ಆರ್.ಟಿ. ನಗರ ಮುಖ್ಯರಸ್ತೆ, ಕೆ.ಎಫ್.ಸಿ. ಪಕ್ಕದಲ್ಲಿ | 1 |
| 26. | ಆಡುಗೋಡಿ ಪೊಲೀಸ್ ವಸತಿ ಗೃಹ | 1 |
| 27. | ಬಳ್ಳಾರಿ ರಸ್ತೆ, ಸಿಬಿಐ ಬಸ್ ಬೇ ಎದುರು: | 1 |
| 28. | ಪ್ಯಾಲೇಸ್ ರಸ್ತೆ, ಮಹೇಂದ್ರ ಷೋರೂಂ ಎದುರು | 1 |
| 29. | ಕೋರಮಂಗಲ, ಪಾಸ್ ಪೋರ್ಟ್ ಆಫೀಸ್ ಎದುರು | 1 |
| 30. | ಜಯನಗರ 1ನೇ ಬ್ಲಾಕ್, ರಾಣಿ ಸರಳಾದೇವಿ ಸ್ಕೂಲ್ ಕಾಂಪೌಂಡ್ | 1 |

ದಿನಾಂಕ:08.02.2011ರ ಪೂಜ್ಯ ಮಹಾಪೌರರ ಪತ್ರದಲ್ಲಿ ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ನಗರದ 54 ವಿವಿಧ ಸ್ಥಳಗಳಲ್ಲಿ ಪಿ.ಪಿ.ಪಿ. ಅಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಕೋರಿದ್ದು, ಇದರ ಬಗ್ಗೆ ನಿಯಾಮಾನುಸಾರ ಕ್ರಮ ವಹಿಸಲು ತಿಳಿಸಿರುತ್ತಾರೆ. ಅದರಂತೆ, ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ ಆಧಾರದ ಮೇಲೆ ನಿರ್ಮಿಸಲು ಕೆ.ಟಿ.ಪಿ.ಪಿ ಕಾಯ್ದೆಯಂತೆ ಟೆಂಡರ್ ಕರೆದು ಟೆಂಡರ್‌ನಲ್ಲಿ ಯಶಸ್ವಿಯಾದ ಬಿಡ್‌ದಾರರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಬಹುದಾಗಿದೆ.

**ಷರತ್ತುಗಳು:**

1. ಪ್ರತಿ ಶೌಚಾಲಯಕ್ಕೆ ವಾರ್ಷಿಕವಾಗಿ ರೂ.50,000/-ಗಳಂತೆ ಲೈಸನ್ಸ್ ಶುಲ್ಕವನ್ನು ಪಾವತಿಸುವುದು.
2. ಪಾಲಿಕೆಯು ನಿಗಧಿಪಡಿಸುವ ಶುಲ್ಕವನ್ನು ಸಾರ್ವಜನಿಕರಿಂದ ವಸೂಲಿ ಮಾಡತಕ್ಕದ್ದು. (Pay and use)
3. ಕೆ.ಟಿ.ಪಿ.ಪಿ ಆಧಾರದ ಟೆಂಡರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಶೌಚಾಲಯಗಳ ಮೇಲೆ ಪಾಲಿಕೆಯು ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ 300 ಚದರ ಅಡಿಗಳಿಗೆ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸುವುದು.
5. ಜಾಹೀರಾತು ಬೈಲಾಗಳು-2006ರಂತೆ ಜಾಹೀರಾತು ತೆರಿಗೆಯನ್ನು ನಿಯಮಾನುಸಾರ ಪಾವತಿಸುವುದು ಮತ್ತು ಬೈಲಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
6. ಶೌಚಾಲಯಗಳನ್ನು ನಿರ್ಮಿಸುವ ಮೊದಲು ಪಾಲಿಕೆಯ ತಾಂತ್ರಿಕ ವಿಭಾಗದಿಂದ ಶೌಚಾಲಯದ ನಕ್ಷೆಯನ್ನು ಸಲ್ಲಿಸಿ ಅನುಮೋದಿಸಿಕೊಳ್ಳುವುದು.
7. ಶೌಚಾಲಯಗಳ ನಿರ್ಮಾಣಗಳ ಸ್ಥಳಗಳಲ್ಲಿ ನೀರಿನ ಸರಬರಾಜಿಗಾಗಿ ಬೋರ್‌ವೇಲ್‌ಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರತಕ್ಕದ್ದು.
8. ಶೌಚಾಲಯಗಳನ್ನು ನಿರ್ಮಿಸುವ ಸ್ಥಳಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ಗುರುತಿಸಿಕೊಂಡು ಇವರ ಉಸ್ತುವಾರಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು.
9. ಅನುಮತಿ ಅವಧಿ ಮುಗಿದ ನಂತರ ನಿರ್ಮಿಸಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.
10. ಟೆಂಡರ್ ಪ್ರಕಟಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

**ದಿನಾಂಕ:31.03.2011ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ವಿಷಯದ ಸಂಖ್ಯೆ:299/2010-11ರಂತೆ "ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ 54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು" ತೀರ್ಮಾನಿಸಲಾಗಿರುತ್ತದೆ.** ಅದರಂತೆ, ಈ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 02-08-2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ.

**-ಮುಂದೂಡಿದೆ-**

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/298/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : CFO/70/Code/2011, ದಿನಾಂಕ : 16–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಿಂದ ಈ ಹಿಂದೆ ನೀಡಿರುವ ಕಾಮಗಾರಿಯ ಸಂಕೇತ ಸಂಖ್ಯೆಯನ್ನು ಪುನರ್ ನವೀಕರಣಕ್ಕಾಗಿ ಒಟ್ಟು 31 ಕಡತಗಳು ರೂ. 891.80 ಲಕ್ಷಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರಗಳು ಈ ಕೆಳಕಂಡಂತಿರುತ್ತದೆ.

ರೂ. ಲಕ್ಷಗಳಲ್ಲಿ

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊಬಲಗು | ಆಯುಕ್ತರ ಅನುಮೋದನೆ | ಲೆಕ್ಕ ಶೀರ್ಷಿಕೆ | ಇದುವರೆಗೆ ಪಾವತಿ | ಪುನರ್ ನವೀಕರಣ ಮೊಬಲಗು | 2011–12ರಲ್ಲಿ ಅನುದಾನ ಲಭ್ಯತೆ ಮುಂದುವರೆದ ಕಾಮಗಾರಿಗಳಿಗೆ |
|---|---|---|---|---|---|---|---|
| 1 | Reprises to drains, cc roads to Cross roading JC Industrial area, | 40.00 | ಕಂಡಿಕೆ 14 ದಿ: 07.07.11 | P0598 | – | 34.93 | ಮುಂದುವರೆದ ಕಾಮಗಾರಿಗಳಿಗೆ ಅನುದಾನ ಲಭ್ಯ ಇರುವುದಿಲ್ಲ. 11–12ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅನುದಾನ ಸೇರಿಸುವ ಷರತ್ತಿನಂತೆ ಪರಿಗಣಿಸಲಾಗುವುದು. |
| 2 | Constructing Culverts, drains and formatting to pipe line road from ring road to Rajyothsavangara in W.N. 185 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1622.00 |
| 3 | Reprises to drains construction of culverts and improvements to the road of Ramaiahnagar in w.N.185 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1578.01 |
| 4 | construction of culverts and improvements to Main road of gowravanagar in w.N.195 | 49.00 | ಕಂಡಿಕೆ 14 ದಿ: 07.07.11 | P0616 | – | 54.90 | 1523.11 |
| 5 | construction of culverts drains improvements to | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1479.12 |

| | | | | | | | |
|---|---|---|---|---|---|---|---|
| | main road of RBI layout in w.No.195 | | | | | | |
| 6 | construction of culverts drains and improvements road of Krishnanagar W.No195 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1435.13 |
| 7 | construction of culverts drains improvements road of RBI layout in W.No.195 | 43.00 | ಕಂಡಿಕೆ 14 ದಿ: 07.07.11 | P0616 | – | 47.30 | 1387.83 |
| 8 | construction of culverts drains Konanakunte near chandranna's house in w.N.195 | 9.50 | ಕಂಡಿಕೆ 14 ದಿ: 07.07.11 | P0625 | – | 10.45 | 1622.00 |
| 9 | Providing chain link fencing of either side of VV vally in Primary & Secondary drain from Sankey tank to vatal nagaraj road | 80.00 | ಕಂಡಿಕೆ 37, ದಿ: 07.09.11 | P0543 | 72.64 | 11.11 | 2259.61 |
| 10 | Constructin of RCC drain including chain link fencing from vinayakanagar temple to Singapura at Ch: 208 to 270 mtr. | 24.00 | ಕಂಡಿಕೆ 162, ದಿ: 11.07.11 | P0625 | – | 26.40 | 1611.55 |
| 11 | Constructing RCC drain including chain link fencing from Vinayakanagar temple to singapura at Ch: 104-208 mtr | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1585.15 |
| 12 | Construction of RCC drain including chain link fencing from vinayaka nagar temple to | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1552.15 |

| | | | | | | | |
|---|---|---|---|---|---|---|---|
| | singapura ch: 0.00 to 104.00 mtr. | | | | | | |
| 13 | Construction of RCC drain from MS playa circle to varadarajanagar-vinayakanagar junction at ch: 495-548 mtrs | 18.50 | ಕಂಡಿಕೆ 162, ದಿ: 11.07.11 | P0625 | – | 20.35 | 1519.15 |
| 14 | Construction of RCC drain from MS playa circle to varadarajanagar-vinayakanagar junction at ch: 330-495 mtrs | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1498.80 |
| 15 | Construction of RCC drain from MS playa circle to varadarajanagar-vinayakanagar junction at ch: 165-330 mtrs | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1465.80 |
| 16 | Construction of RCC drain from MS playa circle to varadarajanagar-vinayakanagar junction at ch: 000-165 mtrs | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1432.80 |
| 17 | Construction of RCC drain at srinidhi layout in Vidyaranyapuram sub division | 24.00 | ಕಂಡಿಕೆ 162, ದಿ: 11.07.11 | P0625 | – | 26.40 | 1399.80 |
| 18 | Formation improvements and asphalting to road MS playa 1st & 2nd cross in Vidyaranyapuram sub division | 25.00 | ಕಂಡಿಕೆ 162, ದಿ: 11.07.11 | P0619 | – | 27.50 | 918.00 |
| 19 | Formation improvements and asphalting to road MS playa 3rd, 4th & 5th cross in Vidyaranyapuram sub division | 19.00 | ಕಂಡಿಕೆ 162, ದಿ: 11.07.11 | P0619 | – | 20.90 | 890.50 |

| | | | | | | | |
|---|---|---|---|---|---|---|---|
| 20 | Formation improvements and asphalting to road MS playa 6th cross in Vidyaranyapuram sub division | 10.00 | ಕಂಡಿಕೆ 162, ದಿ: 11.07.11 | P0619 | – | 11.00 | 879.50 |
| 21 | Formation improvements and asphalting to Vinayakanagar 11th cross in Vidyaranyapuram sub division | 23.50 | ಕಂಡಿಕೆ 162, ದಿ: 11.07.11 | P0619 | – | 25.85 | 868.50 |
| 22 | Formation improvements and asphalting to Vinayakanagar 2nd cross in Vidyaranyapuram sub division | 14.00 | ಕಂಡಿಕೆ 162, ದಿ: 11.07.11 | P0619 | – | 15.40 | 842.65 |
| 23 | Formation improvements and asphalting to Vinayakanagar 3rd cross in Vidyaranyapuram sub division | 14.00 | ಕಂಡಿಕೆ 162, ದಿ: 11.07.11 | P0619 | – | 15.40 | 827.25 |
| 24 | Formation improvements and asphalting to Vinayakanagar 2nd & 3rd main in Vidyaranyapuram sub division | 26.00 | ಕಂಡಿಕೆ 162, ದಿ: 11.07.11 | P0619 | – | 28.60 | 811.85 |
| 25 | Formation improvements and asphalting to Vinayakanagar 4th main in Vidyaranyapuram sub division | 16.00 | ಕಂಡಿಕೆ 162, ದಿ: 11.07.11 | P0619 | – | 17.60 | 783.25 |
| 26 | Formation improvements and asphalting to Vinayakanagar 5th & 6th main in Vidyaranyapuram sub division | 24.50 | ಕಂಡಿಕೆ 162, ದಿ: 11.07.11 | P0619 | – | 26.95 | 765.65 |

| | | | | | | | |
|---|---|---|---|---|---|---|---|
| 27 | Formation improvements and asphalting to Vinayakanagar 3rd cross & 5th main in Vidyaranyapuram sub division | 10.00 | ಕಂಡಿಕೆ 162, ದಿ: 11.07.11 | P0619 | – | 11.00 | 738.70 |
| 28 | Formation improvements and asphalting to Vinayakanagar 7th main in Vidyaranyapuram sub division | 25.00 | ಕಂಡಿಕೆ 162, ದಿ: 11.07.11 | P0619 | – | 27.50 | 727.70 |
| 29 | Improvements and asphalting to road varadarajanagara junction to towards singapura in vidyaranyapura sub division | 34.00 | ಕಂಡಿಕೆ 162, ದಿ: 11.07.11 | P0619 | – | 37.40 | 700.20 |
| 30 | Formation improvements and asphalting to road vinayakanagara 3rd cross, 1st, 2nd, 3rd & 4th main in vidyaranyapura sub division | 24.50 | ಕಂಡಿಕೆ 162, ದಿ: 11.07.11 | P0619 | – | 26.95 | 662.80 |
| 31 | Construction of cement concrete road at vinayakanagara in vidyaranyapura sub division | 24.50 | ಕಂಡಿಕೆ 162, ದಿ: 11.07.11 | P0619 | – | 26.95 | 635.85 |
| | **Total** | 889.00 | | | | 891.80 | |

ಸದರಿ 31 ಕಡತಗಳ ಕಾಮಗಾರಿಗಳಿಗೆ 2011–12 ನೇ ಸಾಲಿನಲ್ಲಿ ಅನುದಾನ ಲಭ್ಯವಿರುತ್ತದೆ. ಅಂತಿಮ ಕಾಲಂನಲ್ಲಿ ಅನುದಾನದ ಲಬ್ಯತೆಯ ಬಗ್ಗೆ ವಿವರಗಳನ್ನು ನಿಡಲಾಗಿದ್ದು, ಕಡತವನ್ನು ಮುಂದಿನ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ದಿನಾಂಕ : 16–09–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ 01 ರಿಂದ 08 ರ ವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಸಂಖ್ಯೆಗಳನ್ನು ಪುನರ್ ನವೀಕರಿಸಬಹುದೆಂದು ಹಾಗೂ ಕ್ರಮಸಂಖ್ಯೆ 09 ರಿಂದ 31 ರ ವರೆಗಿನ ಕಡತಗಳನ್ನು ಪರಿಶೀಲನೆಗೆ ಸಮಿತಿಯ ಗಮನಕ್ಕೆ ತರುವುದೆಂದು ತೀರ್ಮಾನಿಸಿತು.***

## *13]. ವಿಷಯದ ಸಂಖ್ಯೆ :–ತೆಙಸ್ಥಾಸ/304/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(ಸಿ1)ಪಿಆರ್/23/2011–12, ದಿನಾಂಕ : 22–09–2011ರಲ್ಲಿ ವಿವರಿಸಿರುವಂತೆ, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 261 ಮಂದಿ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ ದಿನಾಂಕ : 10–6–2010ರಂದು ನಡೆದ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸಭೆಯಲ್ಲಿ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ 261 ಮಂದಿ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಪಾಲಿಕೆಯು ತೆಗೆದುಕೊಂಡಿರುವ ಕ್ರಮದ ಕುರಿತು ಕೂಡಲೇ ಸರ್ಕಾರಕ್ಕೆ ವಿವರವಾದ ಮಾಹಿತಿಯನ್ನು ಕಳುಹಿಸಿಕೊಡುವಂತೆ ಕೋರಲಾಗಿರುತ್ತದೆ. (ಸರ್ಕಾರದ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.)

ಈ ಹಿನ್ನೆಲೆಯಲ್ಲಿ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ 261 ಮಂದಿ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ, ಸದರಿ ವಿಷಯವು ಎಲ್ಲಾ ನಗರಪಾಲಿಕೆಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲದೇ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುತ್ತದೆ. ಸ್ಥಳೀಯ ಸಂಸ್ಥೆಗಳು ವಿವಿಧ ಸೇವೆಗಳನ್ನು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಗುತ್ತಿಗೆ ಮೂಲಕ ಸಹ ಪಡೆದು ನೆರವೇರಿಸಿಕೊಳ್ಳುತ್ತಿದ್ದು, ಅಂತಹ ಗುತ್ತಿಗೆದಾರರು ನೇಮಕ ಮಾಡಿಕೊಂಡಿರುವ ನೌಕರರು/ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳ ಸೇವೆಯಲ್ಲಿ ಖಾಯಂಗೊಳಿಸಲು ಬರುವುದಿಲ್ಲ. ಮತ್ತು ಅವಕಾಶ ಇರುವುದಿಲ್ಲವೆಂದು ಸಂಸ್ಥಾಪಕರು ಹಾಗೂ ರಾಜ್ಯಾಧ್ಯಕ್ಷರು, ಕರ್ನಾಟಕ ಗುತ್ತಿಗೆ ಪೌರಕಾರ್ಮಿಕರ ಒಕ್ಕೂಟ, ಬೆಂಗಳೂರು ರವರಿಗೆ ಬರೆದಿರುವ ಸರ್ಕಾರದ ಪತ್ರ ಸಂಖ್ಯೆ: ನಅಇ 08 ಎಂಎನ್‌ವೈ, 2009, ದಿ: 09–11–2009ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಹಾಗೂ ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗರವರು ದಿ:11.7.2007ರ ಪತ್ರದಲ್ಲಿ ಕೋರಿರುವಂತೆ, ಪರಿಶೀಲಿಸಲಾಗಿ, ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ: ನಅಇ 360 ಎಂಎನ್‌ವೈ, 2005, ದಿ: 27–4–2006 ಪತ್ರದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರಡಿ ಸ್ವಚ್ಚತಾ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪೌರಕಾರ್ಮಿಕರನ್ನು ಗುತ್ತಿಗೆದಾರರು ನೇಮಕ ಮಾಡಿಕೊಂಡಿದ್ದು, ನಗರಪಾಲಿಕೆಯು ನೇಮಕ ಮಾಡಿಕೊಂಡಿರುವುದಿಲ್ಲ. ಗುತ್ತಿಗೆದಾರರು ನೇಮಕ ಮಾಡಿಕೊಂಡಿರುವ ಗುತ್ತಿಗೆ ಪೌರಕಾರ್ಮಿಕರನ್ನು ನಗರಪಾಲಿಕೆಯಲ್ಲಿ ಖಾಯಂಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರದೇ ಇದ್ದಾಗ್ಯೂ ಗುತ್ತಿಗೆದಾರರಡಿ ಸುಮಾರು 15 ವರ್ಷಗಳಿಂದ ಸ್ವಚ್ಚತಾ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪೌರಕಾರ್ಮಿಕರ ವಿವರಗಳನ್ನು ಪಡೆದು ಸರ್ಕಾರಕ್ಕೆ ವರದಿ ಮಾಡಲಾಗುವುದೆಂದು ತಿಳಿಸಲಾಗಿದೆ.

ಮುಂದುವರೆದು, ಸರ್ಕಾರವು ಬರೆದಿರುವ ದಿ: 2–7–2005ರ ಪತ್ರದಲ್ಲಿ, ಅರ್ಹತೆ ಇಲ್ಲದ ಕೆಲವರು ಸುಳ್ಳು ದಾಖಲೆಗಳನ್ನು ನೀಡಿ ಸಕ್ರಮಗೊಂಡಿದ್ದಲ್ಲಿ, ಇದರ ಬಗ್ಗೆ ಪಾಲಿಕೆಯ ಒಬ್ಬ ಹಿರಿಯ ಅಧಿಕಾರಿಯಿಂದ ತಪಾಸಣೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕೋರಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿ, ಅರ್ಹತೆ ಇಲ್ಲದ ಕೆಲವರು ಸುಳ್ಳು ದಾಖಲೆಗಳನ್ನು ನೀಡಿ ಸಕ್ರಮಗೊಂಡಿದಲ್ಲಿ, ಇದರ ಬಗ್ಗೆ ಪಾಲಿಕೆಯ ಒಬ್ಬ ಹಿರಿಯ ಅಧಿಕಾರಿಯಿಂದ ತಪಾಸಣೆ ನಡೆಸುವ ಸಂಬಂದ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ವಾರ್ಡ್‌ಗಳಲ್ಲಿ ಖಾಸಗಿ ಗುತ್ತಿಗೆದಾರರು ನೇಮಕ ಮಾಡಿಕೊಂಡಿರುವ ಪೌರಕಾರ್ಮಿಕರನ್ನು ನಗರಪಾಲಿಕೆಯಲ್ಲಿ ಖಾಯಂಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರವುದಿಲ್ಲ. ಅಲ್ಲದೇ ಗುತ್ತಿಗೆದಾರರು ನೇಮಕ ಮಾಡಿಕೊಂಡಿರುವ ಯಾವುದೇ ಪೌರಕಾರ್ಮಿಕರು ನಗರಪಾಲಿಕೆಯ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಅರ್ಹತೆ ಇಲ್ಲದ ಕೆಲವರು ಸುಳ್ಳು ದಾಖಲೆಗಳನ್ನು ನೀಡಿ ಸಕ್ರಮಗೊಂಡಿದ್ದಲ್ಲಿ ಇದರ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆಯ ಒಬ್ಬ ಹಿರಿಯ ಅಧಿಕಾರಿಯಿಂದ ತಪಾಸಣೆ ನಡೆಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬ ಅಂಶವನ್ನು ಈ ಕಛೇರಿ ಪತ್ರ ಸಂಖ್ಯೆ: ಜಂ.ಆ(ಆ)ಸಿ1/ಪಿಆರ್/23/05–06, ದಿ: 22–2–2006 ರಂತೆ ಸರ್ಕಾರದ ಗಮನಕ್ಕೆ ತರಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ನಅಇ 684 ಎಂಎನ್‌ವೈ 2010 ದಿ. 17–08–2010 ರ ಪತ್ರದಂತೆ, ಪರಿಶೀಲಿಸಲಾಗಿದ್ದು ಸಹಾಯಕ ಆಯುಕ್ತರು(ನೇಮಕಾತಿ ಮತ್ತು ವಿಚಾರಣೆ) ರವರು ಈಗಾಗಲೇ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಮುಂದೆ 4000 ಪೌರಕಾರ್ಮಿಕರ ನೇರ ನೇಮಕಾತಿ ಸಂಬಂದ ಆಯ್ಕೆ ಸಮಿತಿ ರಚನೆ ಹಾಗೂ ಸಮಿತಿ ಆದೇಶಕ್ಕಾಗಿ ಪ್ರಸ್ತಾವನೆಯನ್ನು ನೇಮಕಾತಿ ಮತ್ತು ವಿಚಾರಣೆ ವಿಭಾಗದಿಂದ ಮಂಡಿಸಲಾಗಿರುವುದರಿಂದ ಹಾಗೂ 261 ಮಂದಿ ಗುತಿಗೆ

ಪೌರಕಾರ್ಮಿಕರನ್ನು ಸದರಿ 4000 ನೇಮಕಾತಿ ಹುದ್ದೆಗಳಲ್ಲಿ weightage ನ್ನು ನೀಡಬಹುದು. Eligibility Criteria ನ್ನು ನಿಗದಿಪಡಿಸಿ ನಿಯಮಾನುಸಾರ ನೇರ ನೇಮಕಾತಿ ಮೂಲಕ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 4000 ಮಂದಿ ಪೌರಕಾರ್ಮಿಕರುಗಳನ್ನು ನೇರ ನೇಮಕಾಗಿ ಮಾಡುವ ಪ್ರಕ್ರಿಯೆಯ ಸಂದರ್ಭದಲ್ಲಿ, ಪಾಲಿಕೆಯಲ್ಲಿ ಗುತ್ತಿಗೆದಾರರಡಿ ಕಾರ್ಯನಿರ್ವಹಿಸುತ್ತಿರುವ 261 ಮಂದಿ ಗುತ್ತಿಗೆ ಪೌರಕಾರ್ಮಿಕರುಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಬಹುದಾಗಿದೆ ಎಂದು, ತತ್ಸಂಬಂದವಾಗಿ ಸರ್ಕಾರಕ್ಕೆ ಪತ್ರ ಬರೆಯುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ, ಹಾಗೂ ಆರ್ಥಿಕ ಸ್ಥಾಯಿ ಸಮಿತಿ ಸಭೆಯ ಮುಂದೆ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು ಉಲ್ಲೇಖ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳ ವಿಷಯ ಸಂಖ್ಯೆ: ಸಿ.ಆ.ಸು.ಸ್ಥಾ.ಸ/10/2010–11, ದಿನಾಂಕ: 12.1.2011 ರಂತೆ ದಿನಾಂಕ 12.1.2011ರ ನಿರ್ಣಯದಲ್ಲಿ 261 ಗುತ್ತಿಗೆ ಪೌರಕಾರ್ಮಿಕರನ್ನು 'ನೇಮಕಾತಿ ಆಯ್ಕೆ ಪ್ರಕ್ರಿಯೆಯ ಸಂದರ್ಭದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಗಿರುತ್ತದೆ'.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರಡಿಯಲ್ಲಿ ಕಾರ್ಯನಿರ್ವಸಹಿಸುತ್ತಿರುವ 261 ಗುತ್ತಿಗೆ ಪೌರಕರ್ಮಿಕರುಗಳನ್ನು 4000 ಪೌರಕಾರ್ಮಿಕರ ಹುದ್ದೆಗೆ ನೇರ ನೇಮಕಾತಿ ಆಯ್ಕೆ ಪ್ರಕ್ರಿಯೆಯ ಸಂದರ್ಭದಲ್ಲಿ ಪರಿಗಣಿಸಲು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಶೇ.10 ರಷ್ಟು ಮಿಸಲಿಟ್ಟು ತಿದ್ದುಪಡಿಯನ್ನು ಸಹ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ.

ಆದ್ದರಿಂದ 261 ಮಂದಿ ಗುತ್ತಿಗೆ ಪೌರಕಾರ್ಮಿಕರನ್ನು 4000 ನೇಮಕಾತಿ ಹುದ್ದೆಗಳಲ್ಲಿ weightage (ಮಾನ್ಯತೆಯನ್ನು) ನೀಡಿ, ಹಾಲಿ ಇವರಿಗೆ ಇರುವ ಅರ್ಹತೆ ವಿದ್ಯಾಭ್ಯಾಸವನ್ನು ಪರಿಗಣಿಸಿ, ಪಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಶೇ.10 ರಷ್ಟು ಮೀಸಲಿಟ್ಟು ತಿದ್ದುಪಡಿಯನ್ನು ತರಲು, ಹಾಗೂ ನಿಯಮನುಸಾರ ನೇರ ನೇಮಕಾತಿ ಮೂಲಕ ನೇಮಕ ಮಾಡಿಕೊಳ್ಳಲು, ನೆರ ನೇಮಕಾತಿ ಆಯ್ಕೆ ಪ್ರಕ್ರಿಯೆಯ ಸಂದರ್ಭದಲ್ಲಿ ಪರಿಗಣಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 22–09–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.***

## ***14]. ವಿಷಯದ ಸಂಖ್ಯೆ :–ತೆಆಸ್ಥಾಸ/305/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160 ರ 07 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ ಶ್ರೀ ಎಂ ಶ್ರೀನಿವಾಸ್, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು 2011–12 ನೇ ಸಾಲಿನ ಆಯವ್ಯಯದ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಅನುಮೋದನೆ ನೀಡಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2011–12 ನೇ ಸಾಲಿನ ಕರಡು ಆಯವ್ಯಯ ಮಂಡಿಸುವ ಮುನ್ನ ಅಗತ್ಯ ತುರ್ತು ಕಾಮಗಾರಿಗಳಿಗಾಗಿ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡಿರುವ ಮೊತ್ತ ರೂ. 6600.00 ಲಕ್ಷಗಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ ರೂ. 8500.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

( ರೂ. ಲಕ್ಷಗಳಲ್ಲಿ)

| 2011–12 ರ ಕರಡು ಆಯವ್ಯಯದಲ್ಲಿ ಒಟ್ಟಾರೆ ಮೀಸಲಿಟ್ಟ ಅನುದಾನ (6600+8500) | 2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಜಾಬ್ ನಂಬರ್ ನೀಡಿರುವ ಮೊತ್ತ | ಜಾಬ್ ಸಂಖ್ಯೆ ನೀಡಲು ಸ್ಥಾಯಿ ಸಮಿತಿ ಮತ್ತು ಮಾನ್ಯ ಆಯುಕ್ತರವರಿಂದ ಅನುಮೋದಿತ ಮೊತ್ತ | ಜಾಬ್ ನೀಡುವುದರ ಬಗ್ಗೆ ಅನುಮೋದನೆಗೆ ಮಂಡಿಸಿರುವ ಮೊತ್ತ | ರಸ್ತೆ ಗುಂಡಿ ಮುಚ್ಚಲು ಜೆಂಟ್ ಪ್ಯಾಕರ್ ಮಿಸನ್ ಖರೀದಿಸಲು ಮೀಸಲಿಡಲು ಮೌಖಿಕವಾಗಿ ಸೂಚಿಸಿರುವ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|---|
| 8500.000 | 2533.420 | 1383.77 | 485.08 | 2500.00 | 1597.73 |

2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ 7 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *15]. ವಿಷಯದ ಸಂಖ್ಯೆ :–ತೆಆಸ್ಥಾಸ/306/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 29–09–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ತಮ್ಮ ಪತ್ರ ಸಂಖ್ಯೆ ತೆ.ಆ.ಸ್ಥಾ.ಸ/ಪಿಆರ್/81/2010–11 ದಿನಾಂಕ 20–9–2011 ರಲ್ಲಿ ವಾರ್ಡ್ ಸಂಖ್ಯೆ 87ರ ಅಭಿವೃದ್ಧಿ ಕಾಮಗಾರಿಗಳಿಗಾಗಿ ಶ್ರೀ ಎನ್.ಎಸ್. ನಂದೀಶರೆಡ್ಡಿ, ಮಾನ್ಯ ಶಾಸಕರು,ಕೃಷ್ಣರಾಜಪುರ ವಿಧಾನ ಸಭಾ ಕ್ಷೇತ್ರ ರವರ ಕೋರಿಕೆಯ ಮೇರೆಗೆ 10 ಕಾಮಗಾರಿಗಳ ಅಂದಾಜು ಮೊತ್ತ ರೂ. 200.00 ಲಕ್ಷಗಳಿಗೆ 2011–12 ನೇ ಸಾಲಿನ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಅನುದಾನದಡಿ ಕೈಗೊಳ್ಳುವ ಬಗ್ಗೆ ಕೋರಿ ಮಾನ್ಯ ಆಯುಕ್ತರುರವರಿಗೆ ಕೋರಿರುತ್ತಾರೆ.

2011–12 ನೇ ಸಾಲಿನ ಕರಡು ಆಯವ್ಯಯ ಮಂಡಿಸುವ ಮುನ್ನ ಅಗತ್ಯ ತುರ್ತು ಕಾಮಗಾರಿಗಳಿಗಾಗಿ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡಿರುವ ಮೊತ್ತ ರೂ. 6600.00 ಲಕ್ಷಗಳನ್ನು ಹಾಗೂ ಚಾಲ್ತಿ ಕಾಮಗಾರಿಗಳಿಗೆ ರೂ. 8500.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

( ರೂ. ಲಕ್ಷಗಳಲ್ಲಿ)

| 2011–12 ರ ಕರಡು ಆಯವ್ಯಯದಲ್ಲಿ ಒಟ್ಟಾರೆ ಮೀಸಲಿಟ್ಟ ಅನುದಾನ (6600+8500) | 2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಜಾಬ್ ನಂಬರ್ ನೀಡಿರುವ ಮೊತ್ತ | ಜಾಬ್ ಸಂಖ್ಯೆ ನೀಡಲು ಸ್ಥಾಯಿ ಸಮಿತಿ ಮತ್ತು ಮಾನ್ಯ ಆಯುಕ್ತರವರಿಂದ ಅನುಮೋದಿತ ಮೊತ್ತ | ಜಾಬ್ ನೀಡುವುದರ ಬಗ್ಗೆ ಅನುಮೋದನೆಗೆ ಮಂಡಿಸಿರುವ ಮೊತ್ತ | ರಸ್ತೆ ಗುಂಡಿ ಮುಚ್ಚಲು ಜೆಟ್ ಪ್ಯಾಕರ್ ಮಿಸನ್ ಖರೀದಿಸಲು ಮೀಸಲಿಡಲು ಮೌಖಿಕವಾಗಿ ಸೂಚಿಸಿರುವ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|---|
| 15100.000 | 9918.790 | 996.99 | 1324.67 | 2500.00 | 359.55 |

2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 200.00 ಲಕ್ಷಗಳಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 29–09–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## *16]. ವಿಷಯದ ಸಂಖ್ಯೆ :–ತೆಆಸ್ಥಾಸ/307/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)69/2011–12 ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ. ರಂಗಣ್ಣ, ಸದಸ್ಯರು, ವಾರ್ಡ್ ನಂ. 101 (ಕಾಮಾಕ್ಷಿಪಾಳ್ಯ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಶ್ರೀಮತಿ ಬಿ.ಸಿ. ಪಾರ್ವತಮ್ಮ ಕೋಂ/ ಟಿ. ಎಮ್. ರಾಮ್ ಅಂತರಾಷ್ಟ್ರೀಯ ಕ್ರೀಡಾಪಟು ಆಗಿದ್ದು ಜಿಲ್ಲಾ ಮತ್ತು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಕೂಟದಲ್ಲಿ ನಡೆದ ಹಿರಯಾಣ ಚೆನ್ನೈ ಛತ್ತೀಸ್‌ಗಡ್ ನಡೆದ ಕ್ರೀಡೆಯಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದಿರುತ್ತಾರೆ. ಮತ್ತು ಹಿರಿಯರ ಮಾಸ್ಟರ್ ಅಥ್ಲೆಟಿಕ್ಸ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ನಡೆದ ದಿನಾಂಕ 2010 ಡಿಸೆಂಬರ್ 6 ರಿಂದ 10 ರವರೆಗೆ ನಡೆದ ಅಂತರಾಷ್ಟ್ರ ಮಟ್ಟದ ಮಲೇಶಿಯಾದಲ್ಲಿ ಕ್ರೀಡಾಕೂಟಕ್ಕೆ ಭಾಗವಹಿಸಿ 100 ಮೀಟರ್ ರಿಲೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ. ಮತ್ತೇ ದಿನಾಂಕ 23.09.2011 ರಿಂದ 25.09.2011 ರಿಂದ ನಡೆಯುವ ಅಂತ ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಭಾಗವಹಿಸಲು ಶ್ರೀಲಂಕಾ ತೆರಳಬೇಕಾಗಿರುವುದರಿಂದ ಆರ್ಥಿಕ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ಸದರಿ ಕ್ರೀಡಾಪಟುವಿಗೆ **2010-11** ನೇ ಸಾಲಿನಲ್ಲಿ ರೂ. **10,000/-** ಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 28-09-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕ್ರೀಡಾಪಟುವಿಗೆ ರೂ.15,000/- (ಹದಿನೈದು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *17]. ವಿಷಯದ ಸಂಖ್ಯೆ :-ತೆಆಸ್ಥಾಸ/308/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)54/2011-12, ದಿನಾಂಕ : 28-09-2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಸಿ. ಅಶೋಕ್, ಸಂಸ್ಥಾಪಕ ಅಧ್ಯಕ್ಷರು, ಸ್ನೇಹ ಗಂಗ ಕ್ರಿಯೇಷನ್ಸ್ (ರಿ) ನಂ. 154, 3ನೇ ಮುಖ್ಯ ರಸ್ತೆ, ಆರ್.ಆರ್.ಲೇ ಔಟ್, ನಾಗದೇವನಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು-560 056 ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ತಮ್ಮ ಸಂಸ್ಥೆಯ ವತಿಯಿಂದ ಮಹಿಳೆಯರಿಗಾಗಿ ಅನೇಕ ವಿಧಧ ತರಬೇತಿಗಳಾದ ಹೊಲಿಗೆ ತರಬೇತಿ, ನಿಟ್ಟಿಂಗ್ ತರಬೇತಿ, ಎಂಬ್ರಾಯಿಡರಿ ತರಬೇತಿ, ಮೇಣದಬತ್ತಿ ತಯಾರಿಕೆಯ ತರಬೇತಿ, ಸೌಂದರ್ಯವರ್ಧಕ ತರಬೇತಿ, ಫ್ಯಾಷನ್ ಡಿಸೈನ್, ಗಣಕ ಯಂತ್ರದ (ಕಂಪ್ಯೂಟರ್) ತರಬೇತಿ ಹಾಗೂ ಇನ್ನೂ ಮುಂತಾದ ಸ್ವಯಂ ಉದ್ಯೋಗ ಕಲ್ಪಿಸುವ ತರಬೇತಿಗಳನ್ನು ಮತ್ತು ಸಂಗೀತ ಶಾಲೆಯನ್ನು ಉಚಿತವಾಗಿ ನಡೆಸಿಕೊಂಡು ಬಂದಿರುವುದಾಗಿ ತಿಳಿಸಿ ಸುಮಾರು 160 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದು 12 ಜನ ಶಿಕ್ಷಕರುಗಳು ಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಬೇಕಾಗುವ ಉಪಕರಣಗಳು ಅಥವಾ ಉಪಕರಣಗಳಿಗಾಗಿ ಪಾಲಿಕೆ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, **ಸದರಿ ಸಂಸ್ಥೆಯವರು ಈಗಾಗಲೇ ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ಸ್ನೇಹ ಗಂಗ ಕ್ರಿಯೇಷನ್ಸ್ (ರಿ) ಆವರಣದಲ್ಲಿ ಎರಡು ದಿನಗಳ "ದಲಿತ ಕಲಾ ಮಹೋತ್ಸವ" ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿ, ಪಾಲಿಕೆಯ ವತಿಯಿಂದ 2011-12 ನೇ ಸಾಲಿಗೆ ಅನುದಾನ ಮಂಜೂರು ಮಾಡಬೇಕೆಂದು ಕೋರಿದ್ದು,** ಪಾಲಿಕೆಯ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸುವ ಕುರಿತು **ಉಲ್ಲೇಖದನ್ವಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಈಗಾಗಲೇ ಟಿಪ್ಪಣಿ**ಯನ್ನು ಮಂಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *18]. ವಿಷಯದ ಸಂಖ್ಯೆ :-ತೆಆಸ್ಥಾಸ/309/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)42/2011-12, ದಿನಾಂಕ : 30-09-2011ರಲ್ಲಿ ವಿವರಿಸಿರುವಂತೆ, ಶ್ರೀ ಮಂಜುನಾಥ್, ಸದಸ್ಯರು, ವಾರ್ಡ್-107 (ಶಿವನಗರ ವಾರ್ಡ್) ರವರು ಪತ್ರ ಬರೆದು ಶ್ರೀ ಅಂಬಾಮಹೇಶ್ವರಿ

ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ), ನಂ. 10, 3ನೇ ಅಡ್ಡರಸ್ತೆ, ವೃಷಭಾವತಿನಗರ, ಕಾಮಾಕ್ಷಿ ಪಾಳ್ಯ ಬೆಂಗಳೂರು – 560 079 ರವರು ಉತ್ತಮವಾಗಿ ಸಮಾಜ ಸೇವಾ ಮತ್ತು ಕ್ರೀಡಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ತುಂಬಾ ಪ್ರಶಂಸನೀಯವಾಗಿರುತ್ತದೆಂದು ತಿಳಿಸುತ್ತಾ, ದಿನಾಂಕ 26–08–2011 ರಿಂದ 28–08–2011 ರವರೆಗೆ 64ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 50 ಜನ ಮಹನೀಯರಿಗೆ ಸನ್ಮಾನ ಸಮಾರಂಭ ಮತ್ತು ಜಾನಪದ ಸಂಭ್ರಮ ಎಂಬ ಅದ್ದೂರಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿರುವುದರಿಂದ ಸಂಘಕ್ಕೆ ಹೆಚ್ಚಿನ ಧನ ಸಹಾಯ ನೀಡಲು ಕೋರಿರುತ್ತಾರೆಂದು ತಿಳಿಸುತ್ತಾ, ತಮ್ಮ ಪತ್ರದೊಂದಿಗೆ ಸದರಿ ಸಂಘದ ಮನವಿ ಪತ್ರ ಮತ್ತು ದಾಖಲೆಗಳನ್ನು ಲಗತ್ತಿಸಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 25,000/–** ಗಳ ಅನುದಾನ/ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ** ನೀಡುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 30–09–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ರೂ.50,000/– (ಐವತ್ತು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *19]. ವಿಷಯದ ಸಂಖ್ಯೆ :–ತೆಆಸ್ಥಾಸ/310/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್ಆರ್(4)45/2011–12, ದಿನಾಂಕ ಃ 30–09–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ರುದ್ರೇಶ್, ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ (ರಿ), ನಂ. 208, ಮಿಲೇನಿಯಂ ಶಾಲೆ ಎದುರು, ಆರ್.ಎಂ.ವಿ. 2ನೇ ಹಂತ, ರಾಜಗೋಪಾಲ ರಸ್ತೆ, ಸಂಜಯನಗರ ಅಂಚೆ, ನಾಗಶೆಟ್ಟಿ ಹಳ್ಳಿ, ಬೆಂಗಳೂರು – 560 094. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಸಾಂಸ್ಕೃತಿಕ ನೆಲೆಗಟ್ಟಿಗಾಗಿ ಸಮಾಜದ ಉನ್ನತಿಗಾಗಿ ಶಿಕ್ಷಣದ ಪ್ರಗತಿಗಾಗಿ ಪರ್ಯಾಯಗಳನ್ನು ಹುಡುಕುವ ಮೂಲಕ ಸಮಾನತೆಯ ಮತ್ತು ಜನಪರಂಪರೆಯ ಸಮಾಜ ನಿರ್ಮಾಣಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾಂಸ್ಕೃತಿಕ ಸಂಸ್ಥೆಯೆಂದು ಹೆಸರು ಮಾಡಿರುವುದಾಗಿ ತಿಳಿಸಿರುತ್ತಾರೆ. ಕಳೆದ 20 ವರ್ಷಗಳಿಂದ ರಂಗಭೂಮಿ, ಪೌರಾಣಿಕ, ಜನಪದ ಸಾಹಿತ್ಯ, ಪರಿಸರ, ಶಿಕ್ಷಣ ಗ್ರಾಮೀಣಾಭಿವೃದ್ಧಿ ಮುಂತಾದ ಎಲ್ಲಾ ರಂಗಗಳಲ್ಲೂ ಕೆಲಸ ಮಾಡುತ್ತಿರುವ ನಾಡಿನ ಸಾಹಿತಿ, ಚಿಂತಕರ, ಕಲಾವಿದರ ಮೆಚ್ಚುಗೆ ಪಡೆದಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ವರ್ಷದಂತೆ ಈ ವರ್ಷವೂ ತಮ್ಮ ವೇದಿಕೆ ವತಿಯಿಂದ ನಾಟಕೋತ್ಸವ–2011 ಕಾರ್ಯಕ್ರಮವನ್ನು ನಯನ ರಂಗಮಂದಿರ ಮತ್ತು ರವೀಂದ್ರ ಕಲಾ ಕ್ಷೇತ್ರದಲ್ಲಿ ದಿನಾಂಕ 05.09.2011 ಮತ್ತು 06.09.2011 ರಂದು ಎರಡು ದಿನಗಳ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಎರಡು ದಿನಗಳಲ್ಲಿ ಎರಡು ನಾಟಕ ಮತ್ತು ಒಂದು ರಂಗ ಗೀತೆ ಕಾರ್ಯಕ್ರಮ ಮಾಡುತ್ತಿದ್ದು ಈ ಮೂರು ಕಾರ್ಯಕ್ರಮಗಳಿಗೂ ಪಾಲಿಕೆ ವತಿಯಿದ ಪ್ರಾಯೋಜನೆ/ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಹಾಗೂ ಶ್ರೀ ಎನ್.ಎಂ. ಕೃಷ್ಣ ಮೂರ್ತಿ ಸದಸ್ಯರು ವಾರ್ಡ್–19 (ಸಂಜಯ್ ನಗರ) ರವರು ಟಿಪ್ಪಣಿ ಬರೆದು ಸದರಿ ಸಂಘಕ್ಕೆ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *201. ವಿಷಯದ ಸಂಖ್ಯೆ :–ತೆಆಸ್ಥಾಸ/311/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)59/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಜಯಲಕ್ಷ್ಮೀ ನಾಗೇಂದ್ರ, ಅಧ್ಯಕ್ಷರು, ವಿಜಯ ಮ್ಯೂಸಿಕ್ ಸ್ಕೂಲ್ (ರಿ) ನಂ. 65, 10ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಜ್ಞಾನ ಜ್ಯೋತಿ ನಗರ ವಿಶ್ವ ವಿದ್ಯಾನಿಲಯ, ಬೆಂಗಳೂರು–560056 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಏಳು ಸ್ವರವು ಸಂಗೀತವಾದಂತೆ ಹತ್ತು ಗಾಯಕ ಪ್ರತಿಭೆಗಳು ಒಂದು ಗೂಡಿ ವಿಜಯ ಸಂಗೀತ ಶಾಲೆ ರೂಪುಗೊಂಡಿರುವುದಾಗಿ ತಿಳಿಸಿರುತ್ತಾರೆ. ಈಗಾಗಲೇ ಹಲವಾರು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಕನ್ನಡ ನಾಡಿನ ಮನೆ ಮಾತಾಗಿರುವ ತಮ್ಮ ಸಂಸ್ಥೆ ದಿನಾಂಕ 1999 ಸ್ಥಾಪನೆಯಾಗಿ ಇಂದಿನವರೆಗೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಅಂದರೆ ಟ್ಯಾಲೆಂಟ್ಸ್ ಡೇ, ವಾರ್ಷಿಕೋತ್ಸವ, ಸಪ್ತಸ್ವರ ಸಂಗೀತ ಸಂಜೆ, ಭವನೋತ್ಸವ ಮತ್ತು ಸಂಸ್ಥಾಪಕರ ದಿನಾಚರಣೆ ಹೀಗೆ ವರ್ಷದಲ್ಲಿ ಹಲವಾರು ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತಿದ್ದು, ತಮ್ಮ ಸಂಸ್ಥೆಯಲ್ಲಿ ಎಲ್ಲಾ ತರಗತಿಗಳು ಅಂದರೆ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಸುಗಮ ಸಂಗೀತ, ಹಾರ್ಮೋನಿಯಂ, ಪಿಟೀಲು, ಗಿಟಾರ್, ಕೀ ಬೋರ್ಡ್, ವೀಣೆ, ಮೃದಂಗ, ತಬಲ ನೃತ್ಯ ಮತ್ತು ಚಿತ್ರಕಲೆ ಹೀಗೆ ಹಲವಾರು ತರಗತಿಗಳು ಎಲ್ಲಾ ತರಹದ ಮಕ್ಕಳಿಗೆ ಕಲ್ಪಿಸಲಾಗುತ್ತಿದ್ದು, ತಮ್ಮ ಶಾಲೆಯಲ್ಲಿ ಅಗತ್ಯಕ್ಕೆ ಬೇಕಾದ ಮೂಲ ಸಲಕರಣೆ ಹಾಗೂ ವಾದ್ಯೋಪಕರಣಗಳು ಅನಾನುಕೂಲವಾಗಿದ್ದು ಹಾಗೂ ಸಂಸ್ಥೆಯಲ್ಲಿ ಅಗತ್ಯ ಬೇಕಾದ ವಸ್ತುಗಳು ಅನಾನುಕೂಲವಿದ್ದು ತುಂಬಾ ದು:ಸ್ಥಿತಿಯನ್ನು ಎದುರಿಸಲಾಗುತ್ತಿದೆ ಎಂದು ತಿಳಿಸುತ್ತಾ, ಇದಲ್ಲದೆ ಉಪಾಧ್ಯಾಯರ ಸಂಭಾವನೆಯನ್ನು ಮತ್ತು ಸಂಸ್ಥೆಯ ಸಿಬ್ಬಂಧಿಯ ಸಂಭಾವನೆಯನ್ನು ಸಂಸ್ಥೆಯು ಭರಿಸುವುದರಿಂದ ತಮ್ಮ ಶಾಲೆಯು ತುಂಬಾ ಆರ್ಥಿಕ ತೊಂದರೆಯಲ್ಲಿದ್ದು, ವಾದ್ಯಗಳು ಮತ್ತು ಅಗತ್ಯ ಸಾಮಾಗ್ರಿ ವಸ್ತುಗಳನ್ನು ಪಾಲಿಕೆ ವತಿಯಿಂದ ಒದಗಿಸಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *21]. ವಿಷಯದ ಸಂಖ್ಯೆ :–ತೆಆಸ್ಥಾಸ/312/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)43/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಗೀತಾ ಬಾಲಿ, ನೃತ್ಯ ನಿರ್ದೇಶಕಿ ಮತ್ತು ಕಾರ್ಯದರ್ಶಿ, ಗೀತಾ ನೃತ್ಯ ಶಾಲಾ (ರಿ) ನಂ. 140, 4ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜೆ.ಪಿ. ನಗರ, 3ನೇ ಹಂತ, (ವಿಜಯಾ ಬ್ಯಾಂಕ್ ರಸ್ತೆ) ಬೆಂಗಳೂರು – 560 078 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತಾವು ಪರಿಶಿಷ್ಟ ವರ್ಗಕ್ಕೆ ಸೇರಿದ ಹೆಸರಾಂತ ನೃತ್ಯ ಕಲಾವಿದೆ. ತಮ್ಮ ನೃತ್ಯ ಶಾಲೆಯು 4ನೇ ಅಕ್ಟೋಬರ್ 1988 ರಲ್ಲಿ ಸ್ಥಾಪನೆಯಾಗಿದ್ದು, ಸುಮಾರು 50 ವರ್ಷಗಳಿಂದ ಅನೇಕ ವಿದ್ಯಾರ್ಥಿಗಳಿಂದ ನೃತ್ಯ ಶಿಕ್ಷಣವನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ರಮಣ ಮಹರ್ಷಿ ಅಂಧರ ಶಾಲೆಯಲ್ಲಿ ಅಂಧ ಮಕ್ಕಳಿಗೆ ನೃತ್ಯ ಶಿಕ್ಷಣವನ್ನು ಸಹಾ ಕೊಟ್ಟಿರುತ್ತೇನೆಂದು, ತರಬೇತಿ ನೀಡಿದ ವಿದ್ಯಾರ್ಥಿಗಳ ಪ್ರದರ್ಶನವನ್ನು ವಿಕ್ಷಿಸಿ ಅನೇಕ ಗಣ್ಯರು ಮತ್ತು ವಿಮರ್ಶಕರು ಮುಕ್ತ ಕಂಠದಿಂದ ಪ್ರಶಂಸಿರುತ್ತಾರೆಂದು ತಿಳಿಸಿರುತ್ತಾರೆ. ತಾನು ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯದಲ್ಲಿ ಪರಿಣಿತಿ ಹೊಂದಿದ್ದು ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ನೃತ್ಯ ಪ್ರದರ್ಶನಗಳನ್ನಿತ್ತು ಗಣ್ಯರಿಂದ ಪ್ರಶಂಸೆ ಗಳಿಸಿದ್ದು, ತನ್ನ ನೃತ್ಯ ಸೇವೆಗಾಗಿ ಕರ್ನಾಟಕದಿಂದ ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ–2009, ವಿಶೇಷ ಶಿಕ್ಷಕರ ಪ್ರಶಸ್ತಿ–2003, ಡಾ॥ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ–2001, ಹಾಗೂ ಕೆಂಪೇಗೌಡ ಪ್ರಶಸ್ತಿ–2001 ಅನ್ನು ಪಡೆದಿರುವುದಾಗಿ ತಿಳಿಸಿ ತಮ್ಮ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ “ನಾದ ನೃತ್ಯಾಂಜಲಿ” ನೃತ್ಯ ಕಾರ್ಯಕ್ರಮವನ್ನು ದಿನಾಂಕ 23, 24ರ ಡಿಸೆಂಬರ್ 2011ರಂದು ಆಯೋಜಿಸಿದ್ದು, ಪಾಲಿಕೆಯಿಂದ ರೂ. 6.00 ಲಕ್ಷಗಳ ಧನ ಸಹಾಯವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ನೃತ್ಯ ಶಾಲೆಗೆ **2010–11** ನೇ ಸಾಲಿಗೆ **ರೂ. 25,000/–** (ಇಪ್ಪತ್ತೈದು ಸಾವಿರ) ಗಳ ಅನುದಾನ/ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *22]. ವಿಷಯದ ಸಂಖ್ಯೆ :–ತೆಆಸ್ಥಾಸ/313/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/258/10–11, ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್–153, ಸ್ವತ್ತಿನ ಸಂಖ್ಯೆ:205/1, ಆರ್.ವಿ.ರಸ್ತೆ 2ನೇ ಬ್ಲಾಕ್, ಜಯನಗರ ಬಡಾವಣೆಯಲ್ಲಿನ 48X25 ಅಡಿಗಳ ಪಾಲಿಕೆ ಸ್ವತ್ತನ್ನು ಶ್ರೀಮತಿ. ಹುಚ್ಚಮ್ಮ ರವರಿಗೆ ದಿ:12–08–1974 ರಿಂದ 35 ವರ್ಷಗಳ ಅವಧಿಗೆ ವಾಣಿಜ್ಯ ಉದ್ದೇಶಕ್ಕೆ ಮಾಸಿಕ ರೂ.50/– ನಿಗಧಿಪಡಿಸಿ, ಗುತ್ತಿಗೆಗೆ ನೀಡಿದ್ದು, ದಿನಾಂಕ 11–08–2009ಕ್ಕೆ ಅವಧಿ ಮುಗಿದಿರುತ್ತದೆ. ಗುತ್ತಿಗೆ ಹಣವನ್ನು 2000–01ನೇ ಸಾಲಿನವರೆಗೂ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ.

ಶ್ರೀ. ಕೆ.ಆರ್.ರಮೇಶ್ ಮತ್ತು ಶ್ರೀ ಆರ್.ಪ್ರಕಾಶ್‌ರವರು ಮನವಿ ಸಲ್ಲಿಸಿ, ತಾವು ಶ್ರೀಮತಿ ಹುಚ್ಚಮ್ಮರವರ ಮಕ್ಕಳಾಗಿದ್ದು, ಅವರು ಮರಣ ಹೊಂದಿರುವುದರಿಂದ ಹಾಗೂ ಸ್ಥಳದಲ್ಲಿ ಕಟ್ಟಡ ನಿರ್ಮಿಸಿರುವುದರಿಂದ ಗುತ್ತಿಗೆ ನವೀಕರಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ಸ್ಥಳ ಪರಿಶೀಲಿಸಲಾಗಿ, ಸ್ಥಳದಲ್ಲಿ ರಸ್ತೆ ವಿಸ್ತರಣೆಯಿಂದ ವಿಸ್ತೀರ್ಣ ಕಡಿಮೆಯಾಗಿ 36X26 ಅಡಿಗಳು ಮಾತ್ರ ಇದ್ದು, ಇದರಲ್ಲಿ ನೆಲ ಅಂತಸ್ತು ಮತ್ತು 2ನೇ ಅಂತಸ್ತು ಆರ್.ಸಿ.ಸಿ ಮತ್ತು ಎ.ಸಿ.ಶೀಟ್ ಈಗಿನ ಕಟ್ಟಡವಿದ್ದು ಇದರಲ್ಲಿ ಇಂಜಿನಿಯರಿಂಗ್ ವರ್ಕ್ಸ್, ಬೀಡಾ ಅಂಗಡಿ, ಜೆರಾಕ್ಸ್ ಅಂಗಡಿ, ಕಾಫಿ–ಟೀ ಅಂಗಡಿ, ಜೋತಿಷ್ಯಾಲಯ ಮತ್ತು ಸಪ್ತಗಿರಿ ಎಂಟರ್ ಪ್ರೈಸಸ್ ಎಂಬ ವಾಣಿಜ್ಯ ಚಟುವಟಿಕೆಗಳ ಅಂಗಡಿಗಳಿದ್ದು, ಇವುಗಳನ್ನು ಬಾಡಿಗೆಗೆ ನೀಡಿದ್ದು, ಇದು ಗುತ್ತಿಗೆ

ಷರತ್ತು ಉಲ್ಲಂಘನೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅರ್ಜಿದಾರರ ಮನವಿಯ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ–1976 ಕಲಂ–176ರ (6) ಹಾಗೂ (ಬಿ) II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. 5 ವರ್ಷಗಳಿಗೂ ಮೀರಿದ ಗುತ್ತಿಗೆ ಅವಧಿಗೆ ಗುತ್ತಿಗೆ ನೀಡಲು ಸರ್ಕಾರಕ್ಕೆ ಅಧಿಕಾರವಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೆ:10ರಷ್ಟುನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ. 7,000/–ಗಳಿದ್ದು, ಅರ್ಜಿದಾರರುಗಳು ಕೋರಿರುವ 36X26 ಅಡಿಗಳ ಜಾಗವು 936 ಚ.ಅಡಿಗಳಾಗುತ್ತದೆ. ಇದರಂತೆ 7000X936=65,52,000/– ರೂ.ಗಳಾಗುತ್ತದೆ. ಶೇ:10% ರಷ್ಟು ವಾರ್ಷಿಕ ಗುತ್ತಿಗೆ ಹಣ 6,55,200/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ54,600/–ರೂ.ಗಳಾಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಅರ್ಜಿದಾರರ ಮನವಿಯ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:03–08–2011 ರ ಟಿಪ್ಪಣಿಯಂತೆ, ಗುತ್ತಿಗೆದಾರರು ಸದರಿ ಸ್ವತ್ತನ್ನು ವಸತಿ ಹಾಗೂ ವಾಣಿಜ್ಯ ಉಪಯೋಗಕ್ಕಾಗಿ ಬಳಸುತ್ತಿದ್ದು, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಅವಧಿಯನ್ನು ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–09–2011ರ ನಿರ್ಣಯ.

***ನಿರ್ಣಯ :*** **ದಿನಾಂಕ : 06–09–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.20,000/– (ಇಪ್ಪತ್ತು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿ ಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *23]. ವಿಷಯದ ಸಂಖ್ಯೆ :–ತೆಆಸ್ಥಾಸ/314/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/148/10–11, ದಿನಾಂಕ : 26–08–2011ರಲ್ಲಿ ವಿವರಿಸಿರುವಂತೆ, ಬಸವನಗುಡಿ ವಾರ್ಡ್ ಸಂಖ್ಯೆ:51/154, ಮಾಡೆಲ್ ಹೌಸ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನದ ಉತ್ತರ ಭಾಗದಲ್ಲಿರುವ ಕನ್ಸರ್‌ವೆನ್ಸಿ ಖಾಲಿಜಾಗದ ವಿಸ್ತೀರ್ಣ 133'.6"X16' ಅಡಿಗಳ ಜಾಗವನ್ನು ಪಾಲಿಕೆವತಿಯಿಂದ 1949ರಲ್ಲಿ ಶ್ರೀ ಗುರುರಾಜ ಅಸೋಸಿಯೇಷನ್‌ರವರಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ನಂತರ, ದಿ:19–11–1982ರಲ್ಲಿ ಸದರಿ ಜಾಗವನ್ನು 99–ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ನಗರಪಾಲಿಕೆ ಸಭೆ ನಿರ್ಣಯಿಸಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದ ಸಂದರ್ಭದಲ್ಲಿ ಸರ್ಕಾರವು ತನ್ನ ದಿ:24–10–1985ರ ಆದೇಶದಲ್ಲಿ ಸದರಿ ಜಾಗವನ್ನು ಸಂಸ್ಥೆಗೆ ಅಂದಿನ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ 275/– ರೂ.ರಂತೆ ಕ್ರಯಕ್ಕೆ ನೀಡಲು ಆದೇಶಿಸಿದ್ದು, ಇದರಂತೆ, ಅರ್ಜಿದಾರರ ಸಂಸ್ಥೆಯು ಸ್ವತ್ತಿನ ಮೌಲ್ಯ 29,429/–ರೂ.ಗಳನ್ನು ದಿ:06–12–1985ರಲ್ಲಿ ಪಾವತಿಸಿರುತ್ತಾರೆ. ಇದರ ವಿರುದ್ದವಾಗಿ ಶ್ರೀ ರಾಮು ಮತ್ತು ಶ್ರೀಮತಿ ಶಾಂತಬಾಯಿ ರವರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:11113–11114/1987 ನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿ:11–08–1998 ರಲ್ಲಿ ಆದೇಶ ನೀಡಿ, ಗುತ್ತಿಗೆದಾರರು ಗುತ್ತಿಗೆ ನವೀಕರಿಸಲು ಕೋರಿದ್ದು, ಅವರು ಕ್ರಯಕ್ಕೆ ಮಾರಾಟ ಮಾಡಲು ಕೋರಿಕೆ ಸಲ್ಲಿಸದಿರುವ ಕಾರಣ, ಸರ್ಕಾರವು ಕ್ರಯಕ್ಕೆ ಮಾರಾಟ ಮಾಡಲು ನೀಡಿರುವ ಆದೇಶವನ್ನು ರದ್ದುಪಡಿಸಿರುತ್ತದೆ. ಈ ಆದೇಶದ ವಿರುದ್ದ ಪಾಲಿಕೆ ಸಲ್ಲಿಸಿದ್ದ ರಿಟ್ ಮೇಲ್ಮನವಿ ಸಂಖ್ಯೆ:4403/98, 5115/98 ಮತ್ತು 2444/99, 2498/99 ಈ ಮೇಲ್ಮನವಿಗಳು ದಿ:19–01–2004 ರಂದು ತಿರಸ್ಕೃತಗೊಂಡಿರುತ್ತದೆ.

ಸದರಿ ಸಂಸ್ಥೆಯು ದಿನಾಂಕ:12–10–2006ರಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಿ, ತಾವು ಈಗಾಗಲೇ ಕ್ರಯದ ಮೊತ್ತ ಪಾವತಿಸಿದ್ದು, ಕ್ರಯಪತ್ರ ನೀಡಲು ಕೋರಿರುತ್ತಾರೆ. ದಿನಾಂಕ:17–04–2007 ರ ಸರ್ಕಾರದ ಮಾರ್ಗಸೂಚಿ ದರಗಳ ಅನ್ವಯ ವಾಣಿಜ್ಯಕ್ಕೆ ಚ.ಅಡಿ ಒಂದಕ್ಕೆ 3,220/–ಗಳಾಗಿದ್ದು, ಅದರಂತೆ, ಸ್ವತ್ತಿಗೆ ಒಟ್ಟು ಮೌಲ್ಯ 68,83,072/– ಆಗುತ್ತದೆ. ಸದರಿ ಜಾಗಕ್ಕೆ ಅರ್ಜಿದಾರ ಸಂಸ್ಥೆಯು ರೂ.29,429/–ಗಳನ್ನು ಈಗಾಗಲೇ ಪಾವತಿಸಿರುವುದರಿಂದ, ಪ್ರಸಕ್ತ ಮಾರುಕಟ್ಟೆ ದರದಲ್ಲಿ ಶೇ:50% ಕ್ಕೆ ಕ್ರಯಕ್ಕೆ ನೀಡುವ ಬಗ್ಗೆ ಮಾನ್ಯ ಆಡಳಿತಗಾರರ ಸಭೆ ದಿನಾಂಕ:02–07–2007 ರಲ್ಲಿ ಸರ್ಕಾರದ ಅನುಮೋದನೆ ಮೇರೆಗೆ ಪ್ರಸಕ್ತ ಮಾರುಕಟ್ಟೆ ದರದ ಶೇ:50%ರಷ್ಟು ದರಕ್ಕೆ ಕ್ರಯಕ್ಕೆ ನೀಡಲು ನಿರ್ಣಯಿಸಿರುತ್ತಾರೆ. ಆದರೆ, ಈ ನಿರ್ಣಯವನ್ನು ಸರ್ಕಾರ ತನ್ನ ಪತ್ರ ದಿ:27–05–2008 ರಲ್ಲಿ ತಿರಸ್ಕರಿಸಿರುತ್ತದೆ. ನಂತರ, ಸರ್ಕಾರವು ಕನ್ಸರ್‌ವೆನ್ಸಿ ಜಾಗವನ್ನು ಅರ್ಜಿದಾರ ಸಂಸ್ಥೆಗೆ ಪ್ರಸಕ್ತ ಮಾರ್ಗಸೂಚಿ ಬೆಲೆ ನಿಗಧಿಪಡಿಸಿ ದಿನಾಂಕ:02–07–2009ರಲ್ಲಿ ಮಾರಾಟ ಮಾಡಲು ಮಂಜೂರಾತಿ ನೀಡಿರುತ್ತದೆ.

ಸರ್ಕಾರದ ಈ ಆದೇಶವನ್ನು ಶ್ರೀಮತಿ ಹೆಚ್.ಎನ್.ಪದ್ಮಜಾ ರಾವ್ ಮತ್ತಿತರರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:25716/2009 ಮತ್ತು 25774/09 ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಗಳು ದಿ:13–09–2010 ರಲ್ಲಿ ತೀರ್ಮಾನವಾಗಿರುತ್ತದೆ. ಅರ್ಜಿದಾರರ ಸಂಸ್ಥೆಗೆ ಗುತ್ತಿಗೆ ನೀಡಿರುವ ಜಾಗವನ್ನು ಕ್ರಯಕ್ಕೆ ನೀಡಿರುವ ಬಗ್ಗೆ ನಡೆದಿರುವ ಆಡಳಿತಗಾರರ ವರದಿ ಹಾಗೂ ಸರ್ಕಾರದ ದಿ:02–07–2009ರ ಆದೇಶಗಳನ್ನು ರದ್ದುಪಡಿಸಿ, ಮಾನ್ಯ ನ್ಯಾಯಾಲಯವು ತೀರ್ಪು ನೀಡಿರುತ್ತದೆ. ಆದರೆ, ಹಿಂದೆ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ:11113–11114/87, ರಿಟ್ ಮೇಲ್ಮನವಿ 4403/98 ಹಾಗೂ ಇತರೇ ಪ್ರಕರಣಗಳು ಮತ್ತು ರಿಟ್ ಅರ್ಜಿ ಸಂಖ್ಯೆ:11042/09 ಗಳಲ್ಲಿ ನೀಡಿರುವ ಆದೇಶಗಳ ಹಿನ್ನೆಲೆಯಲ್ಲಿ ಅರ್ಜಿದಾರ ಸಂಸ್ಥೆಯು ಹಾಗೂ ರಿಟ್ ಅರ್ಜಿದಾರರುಗಳ ಮನವಿಗಳನ್ನು ಪರಿಶೀಲಿಸುವಂತೆ, ನಿರ್ದೇಶನ ನೀಡಿರುತ್ತದೆ. ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ದಿನಾಂಕ:13–09–2010 ರಿಂದ ಮೂರು ತಿಂಗಳ ಕಾಲಾವಕಾಶ ನೀಡಿರುತ್ತದೆ. ಅಲ್ಲಿಯವರೆಗೆ ಪ್ರಶ್ನಿತ ಜಾಗಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ (STATUS-QUO) ಕಾಪಾಡಲು ಮಾನ್ಯ ಉಚ್ಛನ್ಯಾಯಾಲಯವು ನಿರ್ದೇಶಿಸಿರುತ್ತದೆ.

ಮುಂದುವರೆದು, ದಿನಾಂಕ:13–09–2010ರ ಉಚ್ಛನ್ಯಾಯಾಲಯದ ಆದೇಶದಲ್ಲಿ ಮೂರು ತಿಂಗಳ ಅವಧಿಯೊಳಗೆ ಮೇಲ್ಮನವಿದಾರರಾದ ಶ್ರೀಮತಿ.ಹೆಚ್.ಎನ್.ಪದ್ಮಜಾರಾವ್ ಮತ್ತು ಶ್ರೀಧರ್ ಬಲ್ಲಾಳ, ಎದುರುದಾರರಾದ ಶ್ರೀ ಗುರುರಾಜ ಅಸೋಸಿಯೇಷನ್‌ರವರು ಈ ಜಾಗವನ್ನು ಪಡೆಯುವ ಅರ್ಹತೆ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡದೇ ಇರುವುದನ್ನು ನ್ಯಾಯಾಲಯವು ಗಮನಿಸಿ ಉಭಯತ್ರರರ ಬೇಡಿಕೆ ಬಗ್ಗೆ WP.No:11113-11114/2009 ಮತ್ತು WA.No:4403/98, 5115/98 ಮತ್ತು 2444/99, 4298 ಮತ್ತು WP.No:11042/2009 ರಲ್ಲಿ ನೀಡಲಾಗಿರುವ ಆದೇಶಗಳ Letter ಮತ್ತು Spirit ಹಿನ್ನೆಲೆಯಲ್ಲಿ ಪರಾಮರ್ಶಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅದರ ಅನುಮತಿಯನ್ನು ಪಡೆಯುವುದೆಂದು ಆದೇಶಿಸಲಾಗಿರುತ್ತದೆ.

ಜಂಟಿ ಆಯುಕ್ತರು(ದಕ್ಷಿಣ) ವಲಯ ರವರು ಪ್ರಕರಣಕ್ಕೆ ಸಂಬಂಧಿಸಿದಂತೆ, ಉಭಯತ್ರರಿಗೆ ವಿಚಾರಣಾ ತಿಳುವಳಿಕೆ ಪತ್ರ ನೀಡಿ ವಿಚಾರಣೆ ನಡೆಸಿ, ಅವಶ್ಯ ದಾಖಲಾತಿಗಳೊಂದಿಗೆ ತಮ್ಮ ವಿವರವಾದ ವರದಿಯನ್ನು ಸಲ್ಲಿಸಿದ್ದು, ಇದರ ಸಂಕ್ಷಿಪ್ತ ವರದಿ ಈ ಕೆಳಕಂಡಂತೆ ಇದೆ.

ಅರ್ಜಿದಾರ ಸಂಸ್ಥೆಯು ದಿನಾಂಕ:06–12–1985ರಲ್ಲಿ ಸರ್ಕಾರದ ಆದೇಶದನ್ವಯ ಮಾರುಕಟ್ಟೆ ಮಾರ್ಗಸೂಚಿ ದರದಂತೆ, 29,429/–ರೂ.ಗಳ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿರುತ್ತಾರೆ. ಈಗಾಗಲೇ

ಸದರಿ ಸಂಸ್ಥೆಯು ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು, ಮಠದ ಭಕ್ತಾಧಿಗಳಿಗೆ ಸೂಕ್ತ ರೀತಿಯಲ್ಲಿ ಉಪಯೋಗಿಸುತ್ತಿದ್ದು, ಸದರಿ ಖಾಲಿ ಜಾಗವನ್ನು ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ತಕರಾರುದಾರರು ಮುಖ್ಯವಾಗಿ ಪ್ರಸ್ತುತ ಸ್ವತ್ತಿನಲ್ಲಿ ನೀರು ಮತ್ತು ಒಳಚರಂಡಿ ಪೈಪುಗಳು ಹಾದುಹೋಗಿದ್ದು, ಅಕ್ಕಪಕ್ಕದ ನಿವಾಸಿಗಳ ಅನುಕೂಲಕ್ಕಾಗಿ ಪಾಲಿಕೆಯು ಈ ಆಸ್ತಿಯನ್ನು ರಕ್ಷಿಸಿ ಉಳಿಸಿಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ.

ವಿಚಾರಣೆಯಿಂದ ಜಂಟಿ ಆಯುಕ್ತರು(ದಕ್ಷಿಣ)ರವರು ಈ ಕೆಳಕಂಡ ಅಂಶಗಳನ್ನು ಪರಿಗಣಿಸಿದ್ದು, ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

(i) ಪ್ರಸ್ತುತ ಸ್ವತ್ತಿನ ವಿಸ್ತೀರ್ಣ ಕೇವಲ 2137.6' ಚ.ಅಡಿ ಇದ್ದು, ಇದರಲ್ಲಿ ಉದ್ಯಾನವನ/ಗಿಡ ನೆಡುವುದು ಸಾಧ್ಯವಾಗುವುದಿಲ್ಲ ಹಾಗೂ ಪ್ರಸ್ತುತ ಜಾಗವು ನಗರಪಾಲಿಕೆಗೆ ಉಪಯೋಗಕ್ಕೆ ಬರುವುದಿಲ್ಲ. ಅರ್ಜಿದಾರ ಸಂಸ್ಥೆಯು ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ ಜಾಗದ ಸ್ವಾದೀನಾನುಭವದಲ್ಲಿದ್ದು, ಇದನ್ನು ಸಮರ್ಪಕವಾಗಿ ಉಪಯೋಗಿಸುತ್ತಿದ್ದು, ಯಾವುದೇ ಮೂರನೇ ವ್ಯಕ್ತಿಗೆ ಪರಬಾರೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

(ii) ಒಂದು ವೇಳೆ ಈ ಸ್ಥಳವನ್ನು ಹಾಗೆ ಬಿಟ್ಟಲ್ಲಿ ದುರುಪಯೋಗ ಆಗುವ ಸಾಧ್ಯತೆಗಳೇ ಹೆಚ್ಚಾಗಿದ್ದು, ಈ ಜಾಗವನ್ನು ಗುತ್ತಿಗೆದಾರ ಸಂಸ್ಥೆ ಕೋರಿರುವಂತೆ ಪ್ರಸಕ್ತ ಮಾರುಕಟ್ಟೆ ಬೆಲೆ ನಿಗಧಿಪಡಿಸಿ ಸರ್ಕಾರದ ಮಂಜೂರಾತಿನ್ವಯ ಮಾರಾಟ ಮಾಡುವುದು ಸಮಂಜಸವಾಗಿರುತ್ತದೆಯೆಂದು ಜಂಟಿ ಆಯುಕ್ತರು(ದಕ್ಷಿಣ)ರವರು ವರದಿ ನೀಡಿರುತ್ತಾರೆ.

ಸ್ಥಳ ಪರಿಶೀಲಿಸಲಾಗಿ, ಪ್ರಸ್ತುತ ಜಾಗವು ಈಗಾಗಲೇ ಶ್ರೀ ರಾಘವೇಂದ್ರಸ್ವಾಮಿ ಮಠದವರ ವಶದಲ್ಲಿದ್ದು, ನೀರಿನ ನಲ್ಲಿಗಳು ಹಾಗೂ ಸೌದೆ ಇತ್ಯಾದಿ ಸಂಗ್ರಹ ಮಾಡಿರುತ್ತಾರೆ. ಎರಡೂ ದಿಕ್ಕಿನಲ್ಲಿ ಗೋಡೆಯಿಂದ ಜಾಗ ಮುಚ್ಚಲಾಗಿದ್ದು, ಈ ಜಾಗದ ಪಕ್ಕದ ಜಾಗವನ್ನು ಸಹ ರಾಮಮಂದಿರ ದೇವಸ್ಥಾನದವರು ಕಟ್ಟಡ ನಿರ್ಮಿಸಿಕೊಂಡು ಬಳಸುತ್ತಿದ್ದಾರೆ. ಇದರಿಂದಾಗಿ, ಈ ಜಾಗ ಸಾರ್ವಜನಿಕ ಉದ್ದೇಶಕ್ಕೆ ಅನುಪಯುಕ್ತವಾಗಿರುತ್ತದೆ.

ಎದುರುದಾರರು ಈ ಜಾಗದಲ್ಲಿ ನೀರಿನ ಪೈಪು ಮತ್ತು ಒಳಚರಂಡಿ ಪೈಪುಗಳು ಕನ್ಸರ್‌ವೆನ್ಸಿ ಲೈನಿನಲ್ಲಿ ಹಾಯ್ದು ಹೋಗಿವೆ ಎಂಬುದಾಗಿ ತಿಳಿಸಿರುತ್ತಾರೆ. ಈ ಸಮಸ್ಯೆ ಕನ್ಸರ್‌ವೆನ್ಸಿಯಲ್ಲಿ ಜಾಗ ಪಡೆದಿರುವ ಪಕ್ಕದ ಇತರೆ ಕಟ್ಟಡಗಳ ಮಾಲೀಕರಿಂದ ಆಗುವುದು ಸಹಜ. ಈ ಪೈಪುಲೈನ್‌ಗಳನ್ನು ದುರಸ್ಥಿಪಡಿಸುವುದಾಗಲೀ ಅಥವಾ ಬದಲಾಯಿಸುವ ಕಾರ್ಯಗಳಿಗೆ ಯಾವುದೇ ರೀತಿಯ ತೊಂದರೆಯನ್ನು ನೀಡದೇ ಈ ಜಾಗದಲ್ಲಿ ಯಾವುದೇ ಶಾಶ್ವತವಾಗಿ ಪಕ್ಕಾ ಕಟ್ಟಡ ನಿರ್ಮಿಸದಿರುವ ಷರತ್ತನ್ನು ವಿಧಿಸಿ, ಈಗಾಗಲೇ ಸಂದಾಯ ಮಾಡಿರುವ ಹಣ ಅಂದಿನ ಮಾರುಕಟ್ಟೆ ದರದಂತೆ ಆಗಿದ್ದು, ಈಗಿನ ಮಾರುಕಟ್ಟೆ ಬೆಲೆ ಪ್ರಕಾರ ಹಣ ಕಟ್ಟಿಸಿಕೊಳ್ಳುವ ನಿಬಂಧನೆಗೊಳಪಟ್ಟು ಕ್ರಯಕ್ಕೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 26.08.2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–09–2011ರ ನಿರ್ಣಯ.

***ನಿರ್ಣಯ :*** **ದಿನಾಂಕ : 06–09–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.**

## *24]. ವಿಷಯದ ಸಂಖ್ಯೆ :–ತೆಆಸ್ಥಾಸ/315/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/40/11–12, ದಿನಾಂಕ : 29–07–2011ರಲ್ಲಿ ವಿವರಿಸಿರುವಂತೆ, ಶ್ರೀ.ದೊಂಡಾಳೆ ಗೋವಿಂದ ಸಾ ರವರು ನಂ.5, ಉತ್ತರಾಧಿಮಠ, 1ನೇ ಅಡ್ಡರಸ್ತೆ, ವಾರ್ಡ್–109ರ ವ್ಯಾಪ್ತಿಯಲ್ಲಿ ಬರುವ ನಗರ ಪಾಲಿಕೆಯ 18.3X1.15=21 ಚದರ ಅಡಿಗಳ ಜಾಗವನ್ನು 5 ವರ್ಷಗಳ ಅವಧಿಗೆ ವಾರ್ಷಿಕ ರೂ.36/–ಗಳಿಗೆ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿಯು 1983ಕ್ಕೆ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಣಗೊಳಿಸದೇ ಸದರಿ ಜಾಗವನ್ನು ದಾರಿಯಾಗಿ ಉಪಯೋಗಿಸುತ್ತಿರುತ್ತಾರೆ.

ಸದರಿ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆಯ ಜಾಗಕ್ಕೆ ನಿಗದಿಪಡಿಸಿದ ವಾರ್ಷಿಕ ಗುತ್ತಿಗೆ ಮೊತ್ತ ರೂ.36/– ರಂತೆ ಈ ವರೆಗೆ ರೂ.1044/–ಗಳು ಬಾಕಿ ಇದ್ದು, ಇದನ್ನು ಗುತ್ತಿಗೆದಾರರು ಪಾವತಿಸಿರುವುದಿಲ್ಲ ಹಾಗೂ ಅನಧಿಕೃತವಾಗಿ ಸದರಿ ಜಾಗದಲ್ಲಿ ಮುಂದುವರೆದಿರುತ್ತಾರೆ.

ಸದರಿಯವರಿಗೆ 1978 ರಿಂದ 1983ರ ವರೆಗೆ ಗುತ್ತಿಗೆ ಅವಧಿ ಮುಗಿದ ನಂತರ ನವೀಕರಣಗೊಂಡಿಲ್ಲದ ಕಾರಣ ಅನಧಿಕೃತವೆಂದು ಭಾವಿಸಿ ಕೆಪಿಪಿ ಕಾಯ್ದೆ ಕಲಂ 4(1) ರ ರೀತ್ಯಾ ನೋಟೀಸನ್ನು ಜಾರಿ ಮಾಡಲಾಗಿದೆ.

ಸ್ಥಳೀಯ ಅಧಿಕಾರಿಗಳು ನವೀಕರಿಸುವ ಅಥವಾ ತೆರವುಗೊಳಿಸುವ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. ಈ ಜಾಗ ತುಂಬಾ ಕಿರಿದಾದ ಜಾಗವಾಗಿದ್ದು ಸಾರ್ವಜನಿಕ ಉದ್ದೇಶಗಳಿಗೆ ಬಳಸಲು ಸಾಧ್ಯವಿಲ್ಲದ ಕಾರಣ ಗುತ್ತಿಗೆ ನವೀಕರಿಸಿದ್ದಲ್ಲಿ ಪಾಲಿಕೆಗೆ ಆದಾಯವು ಬರುವುದೆಂಬ ಅಭಿಪ್ರಾಯಪಡಲಾಗಿದೆ.

2007ರ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ.2900/– ಗಳಾಗಿದ್ದು ಇದರಂತೆ ಲೆಕ್ಕಾಚಾರ ಮಾಡಲಾಗಿ 18.3X1.15=21 ಚದರ ಅಡಿಗಳು ಸ್ವತ್ತಿನ ವಿಸ್ತೀರ್ಣವಾಗಿದ್ದು, ಅದರಂತೆ 2900X21=60,900/– ರೂ ಗಳಾಗಿದ್ದು, ಇದಕ್ಕೆ ಶೇ 10% ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ ರೂ.6090/– ಗಳಾಗುತ್ತದೆ. ಮಾಸಿಕ ಬಾಡಿಗೆ ರೂ.510/– ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರನಿಂದ ರೂ.1044/– ಬಾಕಿ ಇದ್ದು, ಈ ಮೊತ್ತವನ್ನು ಪಾವತಿಸಿಕೊಂಡು ಈಗಿನ ಮಾಸಿಕ ಬಾಡಿಗೆ ನಿಗಧಿಪಡಿಸಿ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 29–07–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 09–08–2011ರ ನಿರ್ಣಯ.

*ನಿರ್ಣಯ :* **ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಬಾಕಿಯಿರುವ ಗುತ್ತಿಗೆ ಮೊತ್ತವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿಯನ್ನು ನವೀಕರಿಸುವ ದಿನಾಂಕದಿಂದ ಮಾಸಿಕ ರೂ.200/– (ಇನ್ನೂರು) ಗುತ್ತಿಗೆ ಮೊತ್ತವನ್ನು ನಿಗಧಿ ಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *25]. ವಿಷಯದ ಸಂಖ್ಯೆ :–ತೆಆಸ್ಥಾಸ/316/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/389/10–11, ದಿನಾಂಕ : 29–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:114ರ ವ್ಯಾಪ್ತಿಯಲ್ಲಿರುವ ಜಾನ್‌ಬುಲ್ ಸ್ಟ್ರೀಟ್ ಇಲ್ಲಿ ವಾಸಿಸುತ್ತಿರುವ 08–ಜನರಿಗೆ ದಿನಾಂಕ:21–01–1973 ರಿಂದ 20–12–1973 ರವರೆಗೆ (11–ತಿಂಗಳ) ಅವಧಿಗೆ ವಿವಿಧ ಅಳತೆಗಳ ನಿವೇಶನವನ್ನು ತಿಂಗಳಿಗೆ ವಿವಿಧ ದರಗಳಲ್ಲಿ (2/–ರೂ. 3/–ರೂ. 5/–ರೂ) ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ತದನಂತರ, ಗುತ್ತಿಗೆ ಅವಧಿ ನವೀಕರಿಸಿರುವುದಿಲ್ಲ. ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಸ್ವತ್ತಿನ ಸಂಖ್ಯೆ | ಗುತ್ತಿಗೆ ನೀಡಿರುವ ಫಲಾನುಭವಿಗಳ ಹೆಸರು | ಹಾಲಿ ವಾಸಿಸುತ್ತಿರುವ ಫಲಾನುಭವಿಗಳ ವಾರಸುದಾರರ ಹೆಸರು | ವಿಸ್ತೀರ್ಣ | ಮಾಸಿಕ ಗುತ್ತಿಗೆ ಮೊತ್ತ |
|---|---|---|---|---|---|

| | | | | | |
|---|---|---|---|---|---|
| 1 | 1 | ಶ್ರೀ.ಎಂ.ನಟರಾಜನ್ | ಎಂ.ನಟರಾಜನ್ | 30X25 = 750 ಚ.ಅಡಿ | 2/- ರೂ.ಗಳು |
| 2 | 1/ಎ | ಸೀತಾರಾಮಮ್ಮ | ಸೀತಮ್ಮ | 20X18 = 360 ಚ.ಅಡಿ | 5/- ರೂ.ಗಳು |
| 3 | 2 | (ಲೇಟ್)ಎಸ್.ಟೇಕಾರಾಮ್ | ಶ್ರೀಮತಿ.ಮಾಯಾದೇವಿ ಕೋಂ.ಟೇಕಾರಾಮ್ ಎಸ್ | 30X25 = 750 ಚ.ಅಡಿ | 3/- ರೂ.ಗಳು |
| 4 | 2/ಎ | (ಲೇಟ್)ಕೆ.ಪೆರುಮಾಳ್ | ಶ್ರೀಮತಿ.ಅಲುಮೇಲು ಕೋಂ ಪೆರುಮಾಳ್ | 20X30 = 600 ಚ.ಅಡಿ | 2/- ರೂ.ಗಳು |
| 5 | 3 | ತಿರುವೆಂಕಟಮ್ | ಎಂ.ನಟರಾಜನ್ | 20X18 = 360 ಚ.ಅಡಿ | 3/- ರೂ.ಗಳು |
| 6 | 4 | ಬಿ.ಕೃಷ್ಣಸ್ವಾಮಿ | ಬಿ.ಕೃಷ್ಣಸ್ವಾಮಿ | 20X30 = 600 ಚ.ಅಡಿ | 2/- ರೂ.ಗಳು |
| 7 | 5 | (ಲೇಟ್)ಸೆಲ್ವರಾಜ್.ಸಿ | ಶ್ರೀಮತಿ.ಲೋಗಂಬಾಲ್ ಕೋಂ ಸೆಲ್ವರಾಜ್.ಸಿ | 30X20 = 600 ಚ.ಅಡಿ | 2/- ರೂ.ಗಳು |
| 8 | 6 | (ಲೇಟ್)ವೈ.ಮುತ್ತು | ಜಯಪ್ರಿಯ ಕೋಂ ವೈ.ಮುತ್ತು | 25X20 = 500 ಚ.ಅಡಿ | 3/- ರೂ.ಗಳು |

ಗುತ್ತಿಗೆಗೆ ನೀಡಲಾಗಿದ್ದ 08-ಜನರಲ್ಲಿ ಕ್ರಮ ಸಂಖ್ಯೆ:05, ತಿರುವೆಂಕಟಮ್ ರವರನ್ನು ಹೊರತುಪಡಿಸಿ, ಉಳಿದ 07-ಜನ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪೂರ್ಣವಾಗಿ ಪಾವತಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಗುತ್ತಿಗೆ ಅವಧಿ ಪೂರ್ಣಗೊಂಡ ಕಾರಣ, ದಿನಾಂಕ:05-08-2010 ರಂದು ಕೆ.ಪಿ.ಪಿ ಕಾಯ್ದೆ-4(1)ರನ್ವಯ ನೋಟೀಸ್ ನೀಡಲಾಗಿದೆ. ಗುತ್ತಿಗೆ ನೀಡಿರುವ ಪ್ರದೇಶದಲ್ಲಿ ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಂಡು ವಾಸವಿದ್ದು, ಅವರಿಗೆ ಹಕ್ಕುಪತ್ರಗಳನ್ನು ನೀಡುವಂತೆ ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕರು ಪತ್ರ ನೀಡಿರುತ್ತಾರೆ. ಮೂಲ ಕಡತಗಳು ಲಭ್ಯವಿಲ್ಲವೆಂದು ವರದಿ ಮಾಡಿದ್ದ ಹಿನ್ನೆಲೆಯಲ್ಲಿ ಮೂಲ ದಾಖಲಾತಿಗಳೊಂದಿಗೆ ಪ್ರತ್ಯೇಕ ಕಡತಗಳನ್ನು ತಯಾರಿಸಿ, ಜೆರಾಕ್ಸ್ ಪ್ರತಿ ಲಭ್ಯವಿದ್ದಲ್ಲಿ, ಅಧಿಕೃತಗೊಳಿಸಿ ಗುತ್ತಿಗೆ ಅವಧಿ, ವಿಸ್ತೀರ್ಣ, ಗುತ್ತಿಗೆ ಬಾಕಿ ವಿವರಗಳೊಂದಿಗೆ, ಪ್ರತ್ಯೇಕ ಪ್ರತ್ಯೇಕವಾಗಿ ಮಂಡಿಸಲು ಸೂಚಿಸಿ ಕಡತ ಹಿಂದಿರುಗಿಸಲಾಗಿತ್ತು.

ಈ ಮೇರೆಗೆ 8-ಸ್ವತ್ತುಗಳ ಸಂಬಂಧ ಪ್ರತ್ಯೇಕ ಕಡತಗಳನ್ನು ತಯಾರಿಸಿ, ಲಭ್ಯವಿರುವ ದಾಖಲೆ ಹಾಗೂ ಭೂಮಾಪಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು ತಯಾರಿಸಿರುವ ನಕ್ಷೆಯನ್ನು ಕಡತದಲ್ಲಿ ಲಗತ್ತಿಸಿ ಗುತ್ತಿಗೆ ನೀಡಿರುವ 08-ಫಲಾನುಭವಿಗಳಲ್ಲಿ 07-ಜನರು ಸದರಿ ಸ್ವತ್ತಿನಲ್ಲಿ ಮನೆ ನಿರ್ಮಿಸಿಕೊಂಡು ವಾಸವಿದ್ದು, ಒಂದು ಖಾಲಿನಿವೇಶನ ಇರುವುದಾಗಿ ವರದಿಯಾಗಿದ್ದು, ಗುತ್ತಿಗೆಗೆ ನೀಡಿರುವ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಕೋರಿರುವುದರಿಂದ, ಗುತ್ತಿಗೆಗೆ ನೀಡಿರುವ 08-ಫಲಾನುಭವಿಗಳ ಪೈಕಿ, ಮನೆ ನಿರ್ಮಿಸಿಕೊಂಡು ವಾಸವಾಗಿರುವ 07-ಜನರಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಿ, ಗುತ್ತಿಗೆಗೆ ನೀಡಿದ್ದ ಸ್ಥಳದಲ್ಲಿ ವಾಸಿಸದೇ ಖಾಲಿ ನಿವೇಶನ ಬಿಟ್ಟಿರುವ ಕ್ರಮಸಂಖ್ಯೆ:05, ತಿರುವೆಂಕಟಮ್‌ರವರಿಗೆ ಗುತ್ತಿಗೆ ನವೀಕರಣ ತಿರಸ್ಕರಿಸಿ, ಸದರಿ ಸ್ವತ್ತನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಬಹುದಾಗಿದೆ.

ಪ್ರಸ್ತಾಪಿತ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಚದರ ಅಡಿ 1ಕ್ಕೆ 1600/- ರೂ.ಗಳಾಗಿದ್ದು, ಫಲಾನುಭವಿಗಳ ಹೆಸರಿಗೆ ಮುಂದೆ ಸ್ವತ್ತಿನ ಮೌಲ್ಯ, ವಾರ್ಷಿಕ ಮೌಲ್ಯ ಹಾಗೂ ಮಾಸಿಕ ಮೌಲ್ಯಗಳನ್ನು ಈ ಕೆಳಕಂಡಂತೆ ವಿವರಿಸಿದೆ.

| ಕ್ರ. ಸಂ | ಸ್ವತ್ತಿನ ಸಂಖ್ಯೆ | ಗುತ್ತಿಗೆ ನೀಡಿರುವ ಫಲಾನುಭವಿಗಳ ಹೆಸರು | ಹಾಲಿ ವಾಸಿಸುತ್ತಿರುವ ಫಲಾನುಭವಿಗಳ ವಾರಸುದಾರರ ಹೆಸರು | ವಿಸ್ತೀರ್ಣ | ಸ್ವತ್ತಿನ ಮೌಲ್ಯ ರೂ.ಗಳಲ್ಲಿ | ವಾರ್ಷಿಕ ಗುತ್ತಿಗೆ ಮೊತ್ತ ರೂ.ಗಳಲ್ಲಿ | ಮಾಸಿಕ ಗುತ್ತಿಗೆ ಮೊತ್ತ ರೂ.ಗಳಲ್ಲಿ |
|---|---|---|---|---|---|---|---|
| 1 | 1 | ಶ್ರೀ.ಎಂ.ನಟರಾಜನ್ | ಎಂ.ನಟರಾಜನ್ | 750 ಚ.ಅಡಿ | 12,00,000/- | 1,20,000/- | 10,000/- |
| 2 | 1/ಎ | ಸೀತಾರಾಮಮ್ಮ | ಸೀತಮ್ಮ | 360 ಚ.ಅಡಿ | 5,76,000/- | 57,600/- | 4,800/- |
| 3 | 2 | (ಲೇಟ್) ಎಸ್.ಟೇಕಾರಾಮ್ | ಶ್ರೀಮತಿ.ಮಾಯಾದೇವಿ ಕೋಂ.ಟೇಕಾರಾಮ್ ಎಸ್ | 750 ಚ.ಅಡಿ | 12,00,000/- | 1,20,000/- | 10,000/- |
| 4 | 2/ಎ | (ಲೇಟ್) ಕೆ.ಪೆರುಮಾಳ್ | ಶ್ರೀಮತಿ.ಅಲುಮೇಲು ಕೋಂ ಪೆರುಮಾಳ್ | 600 ಚ.ಅಡಿ | 9,60,000/- | 96,000/- | 8,000/- |
| 5 | 4 | ಬಿ.ಕೃಷ್ಣಸ್ವಾಮಿ | ಬಿ.ಕೃಷ್ಣಸ್ವಾಮಿ | 600 ಚ.ಅಡಿ | 9,60,000/- | 96,000/- | 8,000/- |
| 6 | 5 | (ಲೇಟ್) ಸೆಲ್ವರಾಜ್.ಸಿ | ಶ್ರೀಮತಿ.ಲೋಗಂಬಾಲ್ ಕೋಂ ಸೆಲ್ವರಾಜ್.ಸಿ | 600 ಚ.ಅಡಿ | 9,60,000/- | 96,000/- | 8,000/- |
| 7 | 6 | (ಲೇಟ್) ವೈ.ಮುತ್ತು | ಜಯಪ್ರಿಯ ಕೋಂ ವೈ.ಮುತ್ತು | 500 ಚ.ಅಡಿ | 8,00,000/- | 80,000/- | 6,667/- |

ದಿನಾಂಕ:01-03-2002ರ ಸುತ್ತೋಲೆ ಕ್ರಮ ಸಂಖ್ಯೆ:5ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಶೇ:100/-ರಷ್ಟು ಸಮಾಜ ಸೇವೆ ಸಲ್ಲಿಸುವ ಸಂಘ/ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮೊತ್ತದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಬಹುದಾಗಿದೆ.
ಆದ್ದರಿಂದ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಹಳೆಯ ದರದಂತೆ, ಕರಾರು ನೊಂದಾಯಿಸುವ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಸೂಕ್ತ ಗುತ್ತಿಗೆ ಮೊತ್ತ ನಿಗಧಿಪಡಿಸಿ, ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಗುತ್ತಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಅವಧಿ ನವೀಕರಿಸುವ ಮಾನ್ಯ ಆಯುಕ್ತರವರ ದಿನಾಂಕ 29-08-2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06-09-2011ರ ನಿರ್ಣಯ.

***ನಿರ್ಣಯ :*** **ದಿನಾಂಕ : 06-09-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಚದರಡಿ ಒಂದಕ್ಕೆ ಮಾಸಿಕ ರೂ.1/- (ಒಂದು) ರಂತೆ ಗುತ್ತಿಗೆ ಮೊತ್ತವನ್ನು ನಿಗಧಿ ಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *26]. ವಿಷಯದ ಸಂಖ್ಯೆ :–ತೇಆಸ್ಥಾಸ/317/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್ಎಕ್ಯೂ/ಸಿಆರ್/11/2011–12, ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಿಜಯನಗರ ಉಪವಲಯದ, ಆರ್.ಪಿ.ಸಿ ಲೇಔಟ್ ವಾರ್ಡ್ ನಂ–134 ರಲ್ಲಿ ಎಲ್.ಸಿ–4ರ ರೈಲ್ವೆ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ 7982 ಚ.ಅಡಿ (741.33 ಚ.ಮೀ) ಪ್ರದೇಶವನ್ನು ದಿನಾಂಕ: 13–10–2010ರಂದು ಶ್ರೀ.ರವೀಂದ್ರ, ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ನಡವಳಿ, ದಿನಾಂಕ: 20–04–2011 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಕೇಂದ್ರ ರೈಲ್ವೆ ರಾಜ್ಯ ಸಚಿವರ ಉಪಸ್ಥಿತಿಯಲ್ಲಿ ನಡೆದ ಸಭೆಯ ನಡವಳಿ ಹಾಗೂ ದಿನಾಂಕ: 03–05–2011ರಂದು ಮಾನ್ಯ ಕಂದಾಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯ ಆದೇಶದನ್ವಯ ಭೂಸ್ವಾಧೀನ ಮಾಡಿಕೊಳ್ಳಲು ಕಾರ್ಯಪಾಲಕ ಅಭಿಯಂತರರು ROB-RUB ವಿಭಾಗ ಹಾಗೂ ಮುಖ್ಯಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರುಗಳು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದ ವಿವರವನ್ನು ಸಹಾಯಕ ಕಂದಾಯ ಅಧಿಕಾರಿಗಳು, ವಿಜಯನಗರ ಉಪವಲಯ (ಆರ್.ಪಿ.ಸಿ.ಲೇಔಟ್) ಇವರ ಹಾಗೂ ಕಾರ್ಯಪಾಲಕ ಅಭಿಯಂತರರವರ ವರದಿಯನ್ವಯ ಈ ಕೆಳಗೆ ನಮೂದಿಸಿರುವಂತೆ ಇರುತ್ತದೆ.

| ಮೋಜಿಣಿದಾರರ ನಕ್ಷೆಯಂತೆ | | | | | | | | |
|---|---|---|---|---|---|---|---|---|
| ಕ್ರ. ಸಂ. | ಸಿ.ಟಿ.ಎಸ್. ನಂ | ಬ್ಲಾಕ್ ನಂ. | ಆಸ್ತಿ ಸಂಖ್ಯೆ | ಪಿ.ಐ.ಡಿ. ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು | ಭೂಸ್ವಾಧೀನಪಡಿಸಿ–ಕೊಳ್ಳುವ ವಿಸ್ತೀರ್ಣ | | ಆಸ್ತಿದಾರರು ನೀಡಿರುವ ದಾಖಲೆ ಹಾಗೂ ಆಸ್ತಿ ವಿವರ |
| 1 | 2 | 3 | 4 | 5 | 6 | 7 | 8 | 9 |
| | | | | | | ಚ.ಮೀ. | ಚ.ಅಡಿ | |
| 1 | 1 | – | – | 42–81–1/1 | ಪಿ.ಮುನಿಪೂಜಪ್ಪ | 08.00 | 86.00 | ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ–1/1 |
| 2 | 2 | – | – | 42–94–1 | ಶ್ರೀಮತಿ.ಪಾರ್ವತಮ್ಮ ಕೋಂ ಸಂಜೀವಮೂರ್ತಿ | 132.30 | 1424.00 | ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ–1 |
| 3 | 3 | – | 1 | 42–92–1ಎ | ಚಾಂದ್ ಸುಲೇಮಾನ್ ಷರೀಫ್ | 19.00 | 205.00 | ದಾಖಲೆ ಒದಗಿಸಿಲ್ಲ |
| 4 | 3 | – | 3 | – | ಗಫೂರ್ ಬೇಗ್ ಬಿನ್ ಖಾಸಿಂ ಬೇಗ್ | 62.68 | 675.00 | 1. ಜಿ.ಪಿ.ಎ ದಿ: 6–2–87 –ಕೆಂಪಾಪುರ ಅಗ್ರಹಾರ ಸರ್ವೆ ನಂ–174/1<br>2. ಕ್ರಯಪತ್ರ ನಂ–1591/3–7–03 ಕೆಂಪಾಪುರ ಅಗ್ರಹಾರ ಸರ್ವೆನಂ–174/1 ಹಾಗೂ ಮುನಿಸಿಪಲ್ ನಿವೇಶನ ನಂ–17/ಎ<br>3. ತೆರಿಗೆ ಪಾವತಿ ರಸೀದಿ ನಂ–7622, ದಿ:11–7–11 ಸ.ನಂ–17/ಎ<br>4. ತೆರಿಗೆ ರಸೀದಿ ನಂ–7623, ದಿ: 11–7–11, ಸ.ನಂ–173/17 |
| 5 | 3 | – | 4 | – | ಶ್ರೀಮತಿ.ಎಸ್.ಮುಬಾರಕ್ ಉನ್ನೀಸಾ ಕೋಂ ಸೈಯ್ಯದ್ ಬಹಾದುರ್ ಪಾಷ | 12.25 | 132.00 | ಕ್ರಯ ಪತ್ರ ನಂ–2005, ದಿ: 8–10–1998, ಶ್ಯಾಮಣ್ಣನಗರ ನಿವೇಶನ ನಂ–12 |
| 6 | 5 | – | 1 | – | ಸಿರಾಜ್ | 43.00 | 463.00 | ದಾಖಲೆ ಒದಗಿಸಿಲ್ಲ |
| 7 | 5 | – | 2 | – | ಮುಬಿನ್ ತಾಜ್ | 19.00 | 205.00 | ದಾಖಲೆ ಒದಗಿಸಿಲ್ಲ |

| | | | | | | | | |
|---|---|---|---|---|---|---|---|---|
| 8 | 5 | – | 4 | 42–78–1 | ರಹಮತ್ ಉಲ್ಲಾ ಖಾನ್ @ ಮುನಾವರ್ ಬಿನ್ ಅಬ್ದುಲ್ ಬಬ್ಬರ್ ಖಾನ್ | 76.50 | 823.00 | 1. ಬಿ.ಎಂ.ಪಿ ನೋಟೀಸ್ ದಿ: 30–11–99 –ನಿವೇಶನ ನಂ–1<br>2. ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ–1 |
| 9 | 5 | – | 5 | 42–88–15 | ಚಾಂದ್ ಪಾಷ ಬಿನ್ ಸುಲೈಮಾನ್ ಷರೀಫ್ | 90.00 | 969.00 | ಬಿ.ಬಿ.ಎಂ.ಪಿ ಖಾತಾ ಹೊಸಮನೆ ನಂ–15 |
| 10 | 682 | – | – | 43–97–21 | ಶ್ರೀಮತಿ.ಪಾರ್ವತಮ್ಮ ಕೋಂ ಸಂಜೀವಮೂರ್ತಿ | 93.25 | 1004.00 | ದಾಖಲೆ ಒದಗಿಸಿಲ್ಲ |
| 11 | 683/ಪೈ | ಖಖ | 2 | – | ಖಲೀಮುಲ್ಲಾ ಬೇಗ್ ಬಿನ್ ಷಫೀಉಲ್ಲಾ ಬೇಗ್ | 55.25 | 595.00 | 1.ಬಿ.ಬಿ.ಎಂ.ಪಿ ಸೂಚನಾ ಪತ್ರ ದಿ:8–7–11 ಸ.ನಂ/ ನಿವೇಶನ ನಂ–10<br>2. 2011–12ನೇ ತೆರಿಗೆ ಪಾವತಿ ರಸೀದಿ ದಿನಾಂಕ: 16–5–2011, ಸ.ನಂ–10 |
| 12 | 683/ಪೈ | ಖಖ | 3 | – | ಇನಾಯಿತುಲ್ಲಾ | 84.50 | 910.00 | ದಾಖಲೆ ಒದಗಿಸಿಲ್ಲ |
| 13 | 683/ಪೈ | ಖಖ | 5 | – | ಚಾಂದ್ ಪಾಷ (ಶಹಬಾಜ್ ಚಿಕನ್ ಅಂಗಡಿ) | 45.60 | 491.00 | ದಾಖಲೆ ಒದಗಿಸಿಲ್ಲ |

ಮೇಲ್ಕಂಡ ಸ್ವತ್ತುಗಳ ಪೈಕಿ ಬಿ–ಖಾತಾ ಪಡೆದಿರುವ ಹಾಗೂ ಖಾತಾ ಇಲ್ಲದಿರುವ ಸ್ವತ್ತುಗಳ ಬಗ್ಗೆ ಸರ್ಕಾರಿ/ರೈಲ್ವೆ/ಕಂದಾಯ/ಬಿಡಿಎ/ ಇತ್ಯಾದಿ ಸಂಸ್ಥೆಗಳ ಮಾಲೀಕತ್ವ ಇದ್ದಲ್ಲಿ ಪರಿಶೀಲಿಸಿ, 5(ಎ) ವಿಚಾರಣೆ ಹಂತದಲ್ಲಿ ನಿವೇಶನ ಮಾಲೀಕತ್ವ ಇದ್ದಲ್ಲಿ. ಮೇಲ್ಕಂಡ ಖಾತೆದಾರರು/ಅನುಭವದಾರರಿಗೆ ಮಾತ್ರ ಭೂ ಪರಿಹಾರ ನೀಡುವ ಬಗ್ಗೆ ಪರಿಗಣಿಸುವ ಷರತ್ತಿಗೆ ಒಳಪಡಿಸಲಾಗಿದೆ.

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುವ ಪ್ರದೇಶವು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿದ್ದು, ಸರ್ಕಾರವು ಪ್ರಕಟಿಸಿರುವ ಅಧಿಸೂಚನೆಯ ದಿನಾಂಕ: 19–04–2007ರ ಪ್ರಸ್ತಾಪಿತ ಪರಿಷ್ಕೃತ ದರವು ಪ್ರತಿ ಚ.ಅಡಿ 1 ಕ್ಕೆ ರೂ.900/–ಗಳಾಗಿರುತ್ತದೆ. ಈ ದರವನ್ನು ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣಕ್ಕೆ ಅಳವಡಿಸಿದಾಗ, ಪರಿಹಾರದ ಮೊಬಲಗು ಈ ಕೆಳಕಂಡಂತೆ ಆಗುತ್ತದೆ.

**“ಅ”–ಭೂ ಪರಿಹಾರ ವೆಚ್ಚ**

| ಕ್ರ ಸಂ | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ: 19–04–2007ರ ಸರ್ಕಾರದ ಮಾರ್ಗಸೂಚಿ ದರದಂತೆ,<br>1. ಚ.ಅಡಿ ಒಂದಕ್ಕೆ ರೂ. 900/– ರಂತೆ 7982 ಚ.ಅಡಿಗಳಿಗೆ<br>2. ಕಟ್ಟಡಗಳ ಮೌಲ್ಯ (ಇಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುವ ಲೆಕ್ಕಚಾರ ವ್ಯಾಲ್ಯುವೇಷನ್ ತಃಖ್ತೆಯಂತೆ) | **71,83,800/–**<br>**46,41,397/–** |
| | **ಒಟ್ಟು** | **1,18,25,197/–** |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2)ರ ಅನ್ವಯ ಶೇಕಡಾ 30 ರಂತೆ ಶಾಸನ ಬದ್ಧ ಭತ್ಯೆ | **35,47,559/–** |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ)ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | **14,19,023/–** |
| | **ಒಟ್ಟು (1+2+3)** | **1,67,91,779/–** |

**"ಆ"– ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | – |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | – |
| 6 | ಪ್ರಕಟಣಾ ವೆಚ್ಚ (ಅಂದಾಜು) | **2,00,000** |
| | **ಒಟ್ಟು (1+2+3+6)** | **1,69,91,779** |
| ಷರಾ: ದಿನಾಂಕ: 5–9–1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ. | | |

**(ಅ+ಆ) ಒಟ್ಟು**

**(ಒಂದು ಕೋಟಿ ಅರವತ್ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಏಳು ನೂರ ಎಪ್ಪತ್ತೊಂಭತ್ತು ರೂ.ಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. **1,69,91,779/– ಒಂದು ಕೋಟಿ ಅರವತ್ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಏಳು ನೂರ ಎಪ್ಪತ್ತೊಂಭತ್ತು ರೂ.ಗಳು ಮಾತ್ರ)** ಗಳನ್ನು ಪಾಲಿಕೆಯ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 03.08.2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–09–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 06–09–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/318/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/63/11–12, ದಿನಾಂಕ : 12–08–2011ರಲ್ಲಿ ವಿವರಿಸಿರುವಂತೆ, ಬಿಬಿಎಂಪಿ ಜಗಜೀವನ್‌ರಾಂನಗರ ವಾರ್ಡ್ ನಂ.138 ಚೆಲುವಾದಿಪಾಳ್ಯ ಮುಖ್ಯರಸ್ತೆಯಲ್ಲಿರುವ 58X30 ಅಡಿ ವಿಸ್ತೀರ್ಣದ ಖಾಲಿ ಜಾಗವನ್ನು ಶ್ರೀ.ಮಡಿವಾಳ ಸೇವಾ ಸಂಘ ಹಾಗೂ ಶ್ರೀ.ರಾಜರಾಜೇಶ್ವರಿ ಯಲ್ಲಮ್ಮದೇವಿ ದೇವಸ್ಥಾನ ಸಮಿತಿಗೆ ದೇವಸ್ಥಾನಕ್ಕಾಗಿ 5 ವರ್ಷಗಳ ಅವಧಿಗೆ ದಿನಾಂಕ:11–08–1977 ರಲ್ಲಿ ಮಾಸಿಕ ರೂ.10/– ರಂತೆ ಗುತ್ತಿಗೆಗೆ ನೀಡಿದ್ದು, ನಂತರ 23–12–1992 ರಲ್ಲಿ ಪಾಲಿಕೆಯ ನಿರ್ಣಯದಂತೆ ಸದರಿ ಜಾಗವನ್ನು ರೂ.101/– ಗಳಿಗೆ ಮಾರಾಟ ಮಾಡಲು ಪಾಲಿಕೆಯ ನಿರ್ಣಯ ವಿಷಯ ಸಂಖ್ಯೆ:18 (91) ದಿನಾಂಕ:23–12–1992 ರಲ್ಲಿ ತೀರ್ಮಾನವಾಗಿದ್ದು, ಇದರ ಬಗ್ಗೆ ನಂತರ ನಡೆದ ಪತ್ರ ವ್ಯವಹಾರಗಳು ಕಡತದಲ್ಲಿ ಇರುವುದಿಲ್ಲ ಎಂದು ಕಂದಾಯ ಅಧಿಕಾರಿ (ಚಾಮರಾಜಪೇಟೆ) ತಿಳಿಸಿರುತ್ತಾರೆ.

ಈ ಮಧ್ಯೆ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು, ದಿನಾಂಕ:19–03–1993ರ ಸರ್ಕಾರದ ಪತ್ರದಲ್ಲಿ ಕೆಲವು ಸ್ಪಷ್ಟೀಕರಣವನ್ನು ಕೋರಲಾಗಿದ್ದು, ಸದರಿ ಸ್ಪಷ್ಟೀಕರಣಕ್ಕೆ ಉತ್ತರ ನೀಡಲಾಗಿದೆಯೇ ಎಂಬುದು ಕಡತದಲ್ಲಿ ವ್ಯಕ್ತವಾಗಿರುವುದಿಲ್ಲ.

ಪ್ರಸ್ತುತ: ಸದರಿ ದೇವಸ್ಥಾನವು ವಾರ್ಡ್ ನಂ.138, ಜೆ.ಜೆ.ಆರ್.ನಗರ ಪ್ರದೇಶ ವ್ಯಾಪ್ತಿಗೆ ಬಂದಿದ್ದು ದಿನಾಂಕ:19–07–2010 ರಂದು ಕೆ.ಪಿ.ಪಿ.ಕಾಯ್ದೆ ಸೆಕ್ಷನ್ 4(1) ಪ್ರಕಾರ ನೋಟೀಸ್ ನೀಡಲಾಗಿರುತ್ತದೆ. ದೇವಸ್ಥಾನದ ಮುಖ್ಯ ಕಾರ್ಯದರ್ಶಿ ರವರು ದಿನಾಂಕ:12–08–2010 ರಂದು ಮನವಿ ನೀಡಿ ಸದರಿ ಜಾಗವನ್ನು ಮಡಿವಾಳ ಸೇವಾ ಸಮಾಜ ಹಾಗೂ ಶ್ರೀ.ರಾಜರಾಜೇಶ್ವರಿ ಯಲ್ಲಮ್ಮದೇವಿ ದೇವಸ್ಥಾನ ಸಮಿತಿಯವರಿಗೆ ನೊಂದಾಯಿಸಿಕೊಡಲು ಕೋರಿರುತ್ತಾರೆ. ಹಾಗೂ

ಚಾಮರಾಜಪೇಟೆ ಶಾಸಕರಾದ ಮಾನ್ಯ ಶ್ರೀ ಬಿ.ಜೆಡ್. ಜಮೀರ್ ಅಹಮದ್ ಖಾನ್ ರವರು ಸದರಿ ಜಾಗದ ಗುತ್ತಿಗೆಯನ್ನು ನವೀಕರಿಸಿ ಕ್ರಯಮಾಡಿಕೊಡಬೇಕೆಂದು ಕೋರಿರುತ್ತಾರೆ.

ಕಂದಾಯಾಧಿಕಾರಿ ಚಾಮರಾಜಪೇಟೆ ಇವರು ಸಹ ಕಂದಾಯ ಅಧಿಕಾರಿ (ಜಗಜೀವನರಾಮನಗರ) ರವರೊಂದಿಗೆ ತಪಾಸಣೆ ಮಾಡಿದ್ದು, ಕಡತದಲ್ಲಿ ಮಂಡಿಸಿರುವ ನಕ್ಷೆಯಂತೆ ದೇವಸ್ಥಾನ ವರ್ಗದವರು 58X30 ಅಡಿ ಅಳತೆಯ ನಿವೇಶನದಲ್ಲಿ ಯಲ್ಲಮ್ಮದೇವಿ ದೇವಸ್ಥಾನ ನಿರ್ಮಿಸಿದ್ದು, ಟಿ.ಸಿ.ಎಂ.ರಾಯನ್ ರಸ್ತೆಗೆ ಅಭಿಮುಖವಾಗಿ 6 ಅಂಗಡಿ ಮಳಿಗೆಗಳನ್ನು ನಿರ್ಮಿಸಿರುತ್ತಾರೆ. ಸದರಿ ಅಂಗಡಿ ಮಳಿಗೆಗಳಿಂದ ಬಂದ ಆದಾಯವನ್ನು ದೇವಸ್ಥಾನವನ್ನು ಅಭಿವೃದ್ಧಿ ಪಡಿಸಲು ಉಪಯೋಗಿಸಲಾಗುತ್ತಿದೆ. ಎಂಬುದಾಗಿ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ದಿನಾಂಕ:29–07–2011 ರಂದು ಸ್ಥಳ ಪರೀಶಿಲಾಯಿತು. 58X30 ಪ್ರದೇಶದಲ್ಲಿ ದೇವಸ್ಥಾನ ಹಾಗೂ ಅರ್ಚಕರ ವಾಸದ ಮನೆ ಮತ್ತು ರಸ್ತೆ ಮುಂಭಾಗದಲ್ಲಿ ಆರು ಅಂಗಡಿಗಳನ್ನು ನಿರ್ಮಿಸಿದ್ದು. ಟೈಲರಿಂಗ್ ಶಾಪ್, ಟೀ ಸ್ಟಾಲ್, ಡ್ರೈ ಕ್ಲಿನರ್ ಅಂಗಡಿ, ಮೊಬೈಲ್ ಷೋರೂಂ ಬಾಡಿಗೆಗೆ ನೀಡಲಾಗಿದ್ದು, ಕೊನೆಯ ಅಂಗಡಿ ದೇವಸ್ಥಾನದ ಉಪಯೋಗಕ್ಕಾಗಿ ಇರುತ್ತದೆ. ಇದರಿಂದ ಬರುವ ಆದಾಯದಲ್ಲಿ ದೇವಸ್ಥಾನದ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

2007ರ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ.3000/– ಗಳಾಗಿದ್ದು ಇದರಂತೆ ಲೆಕ್ಕಾಚಾರ ಮಾಡಲಾಗಿ 58X30=1740 ಚದರ ಅಡಿಗಳು ಸ್ವತ್ತಿನ ವಿಸ್ತೀರ್ಣವಾಗಿದ್ದು, ಅದರಂತೆ 3000X1740=52,20,000/– ರೂ ಗಳಾಗಿದ್ದು, ಇದಕ್ಕೆ ಶೇ 10% ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ ರೂ.5,22,000/– ಗಳಾಗುತ್ತದೆ. ಮಾಸಿಕ ಬಾಡಿಗೆ ರೂ.43,500/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಭಾಗಷಃ ಪ್ರದೇಶ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವುದರಿಂದ ಹಿಂದಿನ ಮಾಸಿಕ ದರವನ್ನು ಹೆಚ್ಚಿಸಿ ಸದರಿ ಯಲ್ಲಮ್ಮದೇವಿ ದೇವಸ್ಥಾನ ಸಮಿತಿಗೆ ಗುತ್ತಿಗೆ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಗುತ್ತಿಗೆದಾರರು ಸದರಿ ಸ್ವತ್ತಿನ ಭಾಗಶಃ ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳನ್ನು ನಡೆಸುತ್ತಿದ್ದು, ಪಾಲಿಕೆಯ ಆದಾಯದ ಹಿತ ದೃಷ್ಟಿಯಿಂದ ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತಿಗೊಳಪಡಿಸಿ ಗುತ್ತಿಗೆ ಅವಧಿಯನ್ನು ನವೀಕರಿಸಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 12.08.2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.09.2011 ರ ನಿರ್ಣಯ.

***ನಿರ್ಣಯ :*** **ದಿನಾಂಕ : 06–09–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/319/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಕ(ಪ)ಪಿಆರ್/807/2011–12, ದಿನಾಂಕ : 07–09–2011ರಲ್ಲಿ ವಿವರಿಸಿರುವಂತೆ, ಕು॥ ನಿಧ ಬಷೀರ್ ಬಿನ್ ಸೈಯಾದ್ ಬಷೀರ್ ಅಹಮದ್, ನಂ: 14, 2ನೇ ಹಂತ, 1ನೇ ಮೈನ್, ಕರ್ನಾಟಕ ಲೇಔಟ್ ಪೋಸ್ಟ್, ಬಸವೇಶ್ವರನಗರ, ಬೆಂಗಳೂರು–560 079. ರವರು ಅರ್ಜಿಯೊಂದಿಗೆ ದಾಖಲಾತಿಗಳನ್ನು ಸಲ್ಲಿಸಿ, University of Bedfordshire, U.K ಇಲ್ಲಿ MSc in Tourism and Event Management ಎರಡು ವರ್ಷಗಳ ಅವಧಿಯ ಉನ್ನತ ವ್ಯಾಸಂಗಕ್ಕಾಗಿ ಆಹ್ವಾನ ಬಂದಿದ್ದು, ಸದರಿ ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚ Course Fee 9650

pounds ಮತ್ತು Living cost 5400 pounds ಒಟ್ಟು 15050 pounds (ಭಾರತೀಯ ರೂಪಾಯಿ 11.24 ಲಕ್ಷ) ಗಳಷ್ಟು ವ್ಯಯವಾಗಲಿದ್ದು, ತಮ್ಮ ತಂದೆಯು ನಿರುದ್ಯೋಗಿಯಾಗಿದ್ದು, ತಾಯಿಯವರು ಮಾತ್ರ ಶಾಲಾ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಇಷ್ಟು ಬೃಹತ್ ಮೊತ್ತದ ವೆಚ್ಚವನ್ನು ಭರಿಸಿ ಉನ್ನತ ವ್ಯಾಸಂಗ ಮಾಡಲು ಆರ್ಥಿಕ ತೊಂದರೆಯಿರುವುದರಿಂದ ಪಾಲಿಕೆಯ ಕಲ್ಯಾಣ ಇಲಾಖೆಯ ವತಿಯಿಂದ ಸದರಿ ಶಿಕ್ಷಣಕ್ಕೆ ತಗಲುವ ವೆಚ್ಚವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ಉನ್ನತ ವ್ಯಾಸಂಗದಲ್ಲಿರುವ ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಮರುಪಾವತಿ ಕಾರ್ಯಕ್ರಮವನ್ನು ಆಯೋಜಿಸಿದ್ದು, ಇದರಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾಲೇಜುಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ/ಕಾಲೇಜು ಪ್ರವೇಶ ಪಡೆದಿರುವ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ, ಕಾಲೇಜು ಶುಲ್ಕ, ವಾರ್ಷಿಕ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಹಾಗೂ ವಿದ್ಯಾಭ್ಯಾಸಕ್ಕೆ ತಗಲುವ ಇತರೆ ಶುಲ್ಕವನ್ನು ಉನ್ನತ ವ್ಯಾಸಂಗ ಮಾಡುತ್ತಿರುವ ಕಾಲೇಜು ವಿದ್ಯಾರ್ಥಿಗಳು ಈ ಮೊದಲೆ ಶುಲ್ಕವನ್ನು ಪಾವತಿಸಿ ನಂತರ ಪಾಲಿಕೆಯ ವತಿಯಿಂದ, ಶುಲ್ಕಗಳ ಮರುಪಾವತಿಗಾಗಿ ಅರ್ಜಿಸಲ್ಲಿಸಿ, ಅವರು ಪಾವತಿಸಿರುವ ಶುಲ್ಕವನ್ನು ಹಿಂಪಡೆಯಬಹುದಾಗಿರುತ್ತದೆ. ಕಾಲೇಜು ಪ್ರವೇಶದ ವೇಳೆಯಲ್ಲಿ ಬಿ.ಪಿ.ಎಲ್ ಕುಟುಂಬದವರು, ಕಡಿಮೆ ಆದಾಯವುಳ್ಳ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರು ಅತೀ ಹೆಚ್ಚಿನ ಶುಲ್ಕವನ್ನು ಪಾವತಿಸುವುದು ಕಷ್ಟಸಾಧ್ಯವಾಗಿದ್ದು ಇಂತವರ ನೆರವಿಗಾಗಿ ಇರುವ ಯೋಜನೆ ಇದಾಗಿರುತ್ತದೆ. ಇದರಡಿ ಈ ಕೆಳಕಂಡಂತೆ ಸಹಾಯಧನವನ್ನು ನೀಡಬಹುದಾಗಿದೆ.

**ಪ್ರೋತ್ಸಾಹಧನದ ವಿವರಗಳು:–**

| ಕ್ರ.ಸಂ | ವ್ಯಾಸಂಗದ ವಿವರಗಳು | ಪ್ರೋತ್ಸಾಹಧನದ ಮೊತ್ತ |
|---|---|---|
| 1 | 3 ವರ್ಷಗಳ ಡಿಪ್ಲೊಮೋ ಕೋರ್ಸ್ | ಗರಿಷ್ಟ ರೂ.50,000/ಗಳು |
| 2 | 4 ವರ್ಷಗಳ ಪದವಿಕೋರ್ಸ್‌ಗಳು | ಗರಿಷ್ಟ ರೂ.75,000/ಗಳು |
| 3 | 5 ವರ್ಷಗಳ ವೃತ್ತಿಪರ ಕೋರ್ಸ್‌ಗಳು/ಉನ್ನತ ವ್ಯಾಸಂಗ | ಗರಿಷ್ಟ ರೂ.1.00 ಲಕ್ಷ |

ಆದರೆ ಮುಂಗಡವಾಗಿ ಶಿಕ್ಷಣ ಶುಲ್ಕಗಳನ್ನು ಪಾಲಿಕೆಯಿಂದ ಭರಿಸಲು ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ.

ಮುಂದುವರೆದು, ಮಾರ್ಗಸೂಚಿಗಳನ್ವಯ ಸದರಿ ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಕ್ಕೆ ಪ್ರವೇಶ ಪಡೆದ ನಂತರ ಶಿಕ್ಷಣಕ್ಕಾಗಿ ಪಾವತಿಸಿರುವ ಶುಲ್ಕಗಳ ಪೈಕಿ, ಪ್ರವೇಶ ಶುಲ್ಕ, ಕಾಲೇಜು ಶುಲ್ಕ, ವಾರ್ಷಿಕ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಹಾಗೂ ವಿದ್ಯಾಭ್ಯಾಸಕ್ಕೆ ತಗಲುವ ಇತರೆ ಶುಲ್ಕಗಳಲ್ಲಿ ಗರಿಷ್ಠ ರೂ.1.00 ಲಕ್ಷಗಳಷ್ಟು ಸಹಾಯಧನವನ್ನು ಮಂಜೂರು ಮಾಡಬಹುದಾಗಿದ್ದು, ಈ ಸಂಬಂಧವಾಗಿ ಸದರಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದು, ನಂತರ ಸಂಬಂಧಪಟ್ಟ ದಾಖಲಾತಿಗಲೊಂದಿಗೆ ಶಿಕ್ಷಣ ಶುಲ್ಕಗಳ ರಸೀದಿಯ ಪ್ರತಿಗಳು, ವೀಸಾ ಮಂಜೂರಾತಿ ಪತ್ರ ಹಾಗೂ ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ದೃಢೀಕರಣವನ್ನು ರೂ.20/–ರ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರ ನೀಡಲು ತಿಳಿಸಿ ದಿನಾಂಕ: 11–7–2011ರಂದು ಅರ್ಜಿದಾರರಿಗೆ ಹಿಂಬರಹವನ್ನು ಜಾರಿಗೊಳಿಸಲಾಗಿರುತ್ತದೆ.

ಮುಂದುವರೆದು, ಅರ್ಜಿದಾರರಾದ ಕು॥ ನಿಧಾ ಬಷೀರ್ ರವರು ಈ ಕಛೇರಿಯಿಂದ ಜಾರಿ ಮಾಡಿದ ಹಿಂಬರಹಕ್ಕೆ ಪುನಃ ಅರ್ಜಿ ಸಲ್ಲಿಸಿ, University of Bedfordshire, U.K ಇಲ್ಲಿ MSc in Tourism and Event Management ಉನ್ನತ ವ್ಯಾಸಂಗ ಮಾಡಲು ಉತ್ತಮ ಅವಕಾಶ ಸಿಕ್ಕಿದ್ದು, ಈ ಶಿಕ್ಷಣಕ್ಕೆ ತಗಲುವ, Course Fee 9650 pounds ಮತ್ತು Living cost 5400 pounds ಒಟ್ಟು 15050 pounds ಭಾರತೀಯ ಹಣಕಾಸು ವೆಚ್ಚ ರೂ.11,28,750/–ಗಳ ಬೃಹತ್ ಮೊತ್ತವನ್ನು ಪಾವತಿಸಿ, ಶಿಕ್ಷಣವನ್ನು ಮುಂದುವರೆಸಲು ಆರ್ಥಿಕ ತೊಂದರೆಯಿದ್ದು, ತಂದೆಯವರು ಯಾವುದೇ ಕೆಲಸವಿಲ್ಲದೇ ನಿರುದ್ಯೋಗಿಯಾಗಿ ಮನೆಯಲ್ಲಿಯೇ ಇದ್ದು ತಾಯಿಯವರು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಬೇರೆ ಯಾವ ಮೂಲಗಳಿಂದ ಆದಾಯವಿಲ್ಲದೇ ತಾಯಿಯ ಸಂಪಾದನೆಯಲ್ಲಿ ಕುಟುಂಬ ನಿರ್ವಹಣೆ ಮಾಡಿಕೊಂಡು ಶಿಕ್ಷಣ ಮುಂದುವರೆಸಲು ಕಷ್ಠಸಾಧ್ಯವಾಗುತ್ತದೆ. ಆದರೆ ಈ ಶಿಕ್ಷಣವನ್ನು ಪಡೆಯಲು ಬಹಳ ಆಸಕ್ತಿಹೊಂದಿದ್ದು, ಸದರಿ ವ್ಯಾಸಂಗದಲ್ಲಿ ಉತ್ತಮ ಸಾಧನೆ ಮಾಡಲು ಅಂಬಳವಿದ್ದು, ಇದರಿಂದ ಜೀವನ ಶೈಲಿಯನ್ನು ಬದಲಿಸಿಕೊಳ್ಳಲು ಅವಕಾಶ ದೊರಕಿರುವುದರಿಂದ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಆರ್ಥಿಕ

ತೊಂದರೆಯಿದ್ದು, ಸೆಪ್ಟಂಬರ್–19–2011ರಂದು ಪ್ರಾರಂಭವಾಗುವ ಈ ಕೋರ್ಸಿಗೆ ದಾಖಲಾತಿ ಹೊಂದಲು ಒಂದು ತಿಂಗಳ ಅವಧಿಗೆ ವೀಸಾ ಪಡೆಯಬೇಕಾಗಿದ್ದು, ಆದಷ್ಟು ಶೀಘ್ರವಾಗಿ ಶಿಕ್ಷಣಕ್ಕೆ ತಗಲುವ ವೆಚ್ಚವನ್ನು ಪಾಲಿಕೆಯಿಂದ ಮಂಜೂರು ಮಾಡಲು ಕೋರಿರುತ್ತಾರೆ.

ಅದೇ ರೀತಿ ಪೂಜ್ಯ ಮಹಾಪೌರರು ಉಲ್ಲೇಖ(2)ರಂತೆ ವಿಳಾಸ ಮಾಡಿರುವ ಟಿಪ್ಪಣಿಯಲ್ಲಿ ಅರ್ಜಿದಾರರಾದ ಕು॥ ನಿಧ ಬಷೀರ್ ಬಿನ್ ಸೈಯದ್ ಬಷೀರ್ ಅಹಮದ್ ರವರ ಮನವಿ ಪತ್ರವನ್ನು ಪುನರ್ ಪರಿಶೀಲಿಸಿ ಹಾಲಿ ಹೊರಡಿಸಿರುವ ಮಾರ್ಗಸೂಚಿಯನ್ನು ಸಡಲಿಸಿ ಹೆಚ್ಚಿನ ಅನುದಾನ ನೀಡುವ ಬಗ್ಗೆ ಕೂಡಲೇ ಜರೂರಾಗಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿರುವ ಮೇರೆಗೆ ಪುನರ್ ಪರಿಶೀಲಿಸಲಾಗಿ, ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಕಾಲೇಜುಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಕಾಲೇಜು ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಗರಿಷ್ಠ ರೂ.1.00 ಲಕ್ಷಗಳ ಸಹಾಯಧನ ನೀಡುವ ಮಾರ್ಗಸೂಚಿಯನ್ನು ಸಡಿಲಿಸಿ ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ವಿದ್ಯಾರ್ಥಿಯು University of Bedfordshire, U.K ಇಲ್ಲಿ MSc in Tourism and Event Management ಉನ್ನತ ವ್ಯಾಸಂಗ ಮಾಡಲು ತಗಲುವ ಶಿಕ್ಷಣ ಶುಲ್ಕಗಳಾದ Course Fee 9650 pounds ಮತ್ತು Living cost 5400 pound ಒಟ್ಟು 15050 pounds ಭಾರತೀಯ ಹಣಕಾಸು ಅಂದಾಜು ವೆಚ್ಚ ರೂ.11,28,750/–ಗಳಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಕಲ್ಯಾಣ ಕಾರ್ಯಕ್ರಮವಾದ ಉನ್ನತ ವ್ಯಾಸಂಗದಲ್ಲಿರುವ ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಮರುಪಾವತಿ ಲೆಕ್ಕ ಶೀರ್ಷಿಕೆಯಲ್ಲಿ ಪ.ಜಾತಿ/ಪ.ಪಂಗಡ ವಿದ್ಯಾರ್ಥಿಗಳಿಗೆ ಮಂಜೂರಾತಿ ನೀಡುತ್ತಿರುವ ಮಾದರಿಯಲ್ಲಿ ಗರಿಷ್ಠ ಮೊತ್ತದ ಸಹಾಯ ಧನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

ಆದರೆ, ಪ್ರಸಕ್ತ 2010–11ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಅನುದಾನವು ಪೂರ್ಣವಾಗಿ ವ್ಯಯವಾಗಿದ್ದು, 2011–12ನೇ ಸಾಲಿನ ಆಯ–ವ್ಯಯ ನಿರೀಕ್ಷಿಸಿ ಸಹಾಯಧನವನ್ನು ಮಂಜೂರು ಮಾಡಿ ಸದರಿ ಮೊತ್ತವನ್ನು University of Bedfordshire, U.K ಗೆ ಬಿಡುಗಡೆ ಮಾಡಿ, ಅಭ್ಯರ್ಥಿಯು ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದ ದಾಖಲಾತಿಗಳು ಹಾಗೂ ವೀಸಾ ಪ್ರತಿಗಳನ್ನು ಧೃಢೀಕರಣದೊಂದಿಗೆ ಪಾಲಿಕೆಗೆ ಸಲ್ಲಿಸುವಂತೆ ಅರ್ಜಿದಾರರು ಖಾತೆ ಹೊಂದಿರುವ ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರ ಬರೆಯಬಹುದಾಗಿರುತ್ತದೆ.

ಈ ಅಂಶಗಳ ಹಿನ್ನಲೆಯಲ್ಲಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಕು॥ ನಿಧ ಬಷೀರ್ ಬಿನ್ ಸೈಯದ್ ಬಷೀರ್ ಅಹಮದ್ ರವರಿಗೆ University of Bedfordshire, U.K ಇಲ್ಲಿ MSc in Tourism and Event Management ಉನ್ನತ ವ್ಯಾಸಂಗ ಮಾಡಲು ತಗಲುವ ಶಿಕ್ಷಣ ಶುಲ್ಕಗಳಾದ Course Fee 9650 pounds ಮತ್ತು Living cost 5400 pound ಒಟ್ಟು 15050 pounds ಭಾರತೀಯ ಹಣಕಾಸು ಅಂದಾಜು ವೆಚ್ಚ ರೂ.11,28,750/–ಗಳಲ್ಲಿ ಗರಿಷ್ಟ ಮೊತ್ತವನ್ನು 2011–12ನೇ ಸಾಲಿನ ಆಯ–ವ್ಯಯ ಲೆಕ್ಕಶೀರ್ಷಿಕೆ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರ ಉನ್ನತ ವ್ಯಾಸಂಗದಲ್ಲಿರುವ ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಮರುಪಾವತಿ ಉಪ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸುವ ಅನುದಾನವನ್ನು ನಿರೀಕ್ಷಿಸಿ ಮಂಜೂರಾತಿ ನೀಡುವ ಸಲುವಾಗಿ ಮಂಡಿಸಿರುವ ದಿನಾಂಕ : 07–09–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 17–09–2011 ರ ನಿರ್ಣಯ.

***ನಿರ್ಣಯ :*** **ದಿನಾಂಕ : 17–09–2011 ರ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ರೂ.1.00 ಲಕ್ಷ (ಒಂದು ಲಕ್ಷ) ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/320/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)58/2011–12, ದಿನಾಂಕ : 03–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಹರೀಶ್. ಬಿ.ಇ. ಮಾನ್ಯ ಉಪ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ಸದರಿಯವರು ಚಾನ್ ಕೀ ಕರಾಟೆ ಆರ್ಟ್ ಅಕಾಡೆಮಿ(ರಿ)

ಹಾಗೂ ಕಲಾ ಮಂದಿರ ಸಂಸ್ಥೆಯು ಹೆಚ್. ಪಾರ್ವತಮ್ಮ ಹಿರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಸುಮಾರು 20 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯ ಮುಖಾಂತರ ಅನೇಕ ಬಡ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವುದಾಗಿ ಪ್ರಸ್ತಾಪಿಸಿ, **ಮಾ:ಅನಿಲ್**, ನಂದಿನಿ ಬಡಾವಣೆ ಇವರು ದಿನಾಂಕ 26-06-2011 ರಂದು ನಗರದ ನಾಗರಭಾವಿ ವೃತ್ತದಿಂದ ಡಾ: ರಾಜ್ ಕುಮಾರ್ ಪುಣ್ಯ ಭೂಮಿ ಕಂಠೀರವ ಸ್ಟುಡಿಯೋ, ಇಲ್ಲಿಯವರೆಗೆ 8 ಕಿ.ಮೀ ದೂರದವರೆಗೆ **"ನಾನ್ ಸ್ಟಾಫ್ ಡಬಲ್ ಹ್ಯಾಂಡ್ ಕಾರ್ಟ್ ವೀಲ್"** ನ್ನು ಕೇವಲ 1 ಗಂಟೆ 14 ನಿಮಿಷದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿ ಲಿಮ್ಕಾ ಪುಸ್ತಕದಲ್ಲಿ ದಾಖಲೆ ನಿರ್ಮಿಸಿ, ಈ ಮೂಲಕ ರಾಜ್ಯದ ಗೌರವವನ್ನು ಎತ್ತಿ ಹಿಡಿದಿರುತ್ತಾರೆ. ಇವರು ಬಡ ಕುಟುಂಬದಿಂದ ಬಂದವರಾಗಿರುತ್ತಾರೆ. ಪಾಲಿಕೆ ವತಿಯಿಂದ ಆತನ ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಹಾನಗರ ಪಾಲಿಕೆ ವತಿಯಿಂದ ಕೊಡಿಸಿ ಕೊಡಲು ಕೋರಿಕೊಂಡಿರುತ್ತಾರೆಂದು ತಿಳಿಸಿ, ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇವರು ನೀಡಿರುವ ಪತ್ರವನ್ನು ಪರಿಗಣಿಸಿ ಧನ ಸಹಾಯ ಮಾಡಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ-ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/- ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/- ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಪ್ರಸಕ್ತ 2011-12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವಿಗೆ ರೂ. 10,000/- ಗಳ (ಹತ್ತು ಸಾವಿರಗಳು) ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *30]. ವಿಷಯದ ಸಂಖ್ಯೆ :-ತೆಆಸ್ಥಾಸ/321/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)64/2011-12, ದಿನಾಂಕ : 10-10-2011ರಲ್ಲಿ ವಿವರಿಸಿರುವಂತೆ, ಶ್ರೀ ಗುರುದೇವ ನಾರಾಯಣ ಕುಮಾರ್, ಅಧ್ಯಕ್ಷರು, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ (ನೋ), ನಂ. 619/620, 13ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560 040. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ಚಳವಳಿಯ ಧೀಮಂತ ನಾಯಕರು, ಮಾಜಿ ಶಾಸಕರು ಆಗಿದ್ದ ಜಿ. ನಾರಾಯಣ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಶ್ರಯದಲ್ಲಿ ನವೆಂಬರ್ 1 2011 ರಿಂದ ಒಂದು ತಿಂಗಳ ಕಾಲ ಅದ್ದೂರಿ "ಕನ್ನಡ ರಾಜ್ಯೋತ್ಸವ" ವನ್ನು ಕೆಂಪೇಗೌಡ ರಸ್ತೆಯಲ್ಲಿರುವ "ಬನ್ನಪ್ಪ ಪಾರ್ಕ್ ಆಟದ ಮೈದಾನ" ದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತೇವೆಂದು ನವೆಂಬರ್ 1 ರಂದು ನಾಡಿನ ವೈಭವವನ್ನು ಸಾರುವ ಮೆರವಣಿಗೆಯಲ್ಲಿ ಜಾನಪದ ತಂಡಗಳು, ಸ್ಥಬ್ಧ ಚಿತ್ರಗಳು, ಕಲಾವಿದರು ಪಾಲ್ಗೊಳ್ಳುವರು, ನವೆಂಬರ್ 1 ರಿಂದ ಸತತವಾಗಿ ಒಂದು ತಿಂಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆಂದು ತಿಳಿಸುತ್ತಾ, ಪ್ರತಿ ವರ್ಷವು ಮಹಾನಗರ ಪಾಲಿಕೆ ಧನ ಸಹಾಯವನ್ನು ನೀಡುತ್ತಿರುವುದು ಸರಿಯಷ್ಟೆ, ಈ ವರ್ಷವು ರಾಜ್ಯೋತ್ಸವ ಕಾರ್ಯಕಲಾಪಗಳಿಗೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗೆ ಬಹಳ ಖರ್ಚು ವೆಚ್ಚ ತಗುಲುತ್ತಿರುವುದು ಮಹಾನಗರ ಪಾಲಿಕೆ

ವತಿಯಿಂದ ರೂ. 20.00 (ಇಪ್ಪತ್ತು ಲಕ್ಷ) ಧನ ಸಹಾಯವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *31]. ವಿಷಯದ ಸಂಖ್ಯೆ :–ತೆಆಸ್ಥಾಸ/322/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)88/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಶ್ರೀ ಜಯದುರ್ಗಾ ಮತ್ತು ಮಾರಿಯಮ್ಮ ದೇವಸ್ಥಾನ ಟ್ರಸ್ಟ್ (ರಿ), ನಂ. 1/ಎ, ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನ ರಸ್ತೆ, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಎದುರು, ಬೆಂಗಳೂರು – 560 047 ರವರು ಮನವಿ ಸಲ್ಲಿಸಿ ಶಾಂತಿ ನಗರ ವಿಧಾನ ಸಭಾ ಕ್ಷೇತ್ರ (ಬಿ.ಬಿ.ಎಂ.ಪಿ. ವಾರ್ಡ್ ನಂ.116 ನೀಲಸಂದ್ರ) ವ್ಯಾಪ್ತಿಯಲ್ಲಿ ಬರುವ ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನಕ್ಕೆ ಕಳೆದ ವರ್ಷ ಅನುದಾನ ಮಂಜೂರು ಮಾಡುವಂತೆ ಅಗತ್ಯವಾದ ಮಾಹಿತಿಗಳೊಂದಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅನುದಾನ ಮಂಜೂರಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಸದರಿ ದೇವಸ್ಥಾನದ ಕಟ್ಟಡ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ. 27.00 ಲಕ್ಷಗಳಾಗಿದ್ದು, ಹಣಕಾಸಿನ ಕೊರತೆಯಿಂದಾಗಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುತ್ತವೆ. ಈ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಪಂಗಡದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು (ಕೊಳಚೆ ಪ್ರದೇಶ) ಆರ್ಥಿಕ ಸಹಾಯವಿಲ್ಲದೆ ದೇವಸ್ಥಾನ ಅಭಿವೃದ್ಧಿಗೆ ಅನಾನುಕೂಲ ಉಂಟಾಗಿರುತ್ತದೆ ತಿಳಿಸಿ, ಪಾಲಿಕೆ ವತಿಯಿಂದ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸದರಿ ದೇವಸ್ಥಾನಕ್ಕೆ ರೂ. 10.00 (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಮಂಜೂರು ಮಾಡುವ ಮೂಲಕ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಲಾಗಿದ್ದ ರೂ. 10.00 ಕೋಟಿಗಳು ಹಂಚಿಕೆಯಾಗಿದ್ದರ ಹಿನ್ನೆಲೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 28–03–2011 ರಂದು ನಡೆದ ಸಭೆಯ ನಡವಳಿಗಳು ವಿಷಯದ ಸಂಖ್ಯೆ : ತೆಆಸ್ಥಾಸ/335/2010–11 ರಲ್ಲಿ ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## ***32]. ವಿಷಯದ ಸಂಖ್ಯೆ :–ತೆಆಸ್ಥಾಸ/323/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್‌ಆರ್(4)36/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀ ಮಂಜುನಾಥ್, ಮಾನ್ಯ ಸದಸ್ಯರು, ವಾರ್ಡ್–107 (ಶಿವಾಜಿನಗರ) ರವರು ಪತ್ರ ಬರೆದು ತನ್ನ ಕ್ಷೇತ್ರದ ನಿವಾಸಿಗಳಾದ ಜನ ಸೇವಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹೆಚ್. ಬಿ. ರಾಜೇಗೌಡ ರವರು ಸುಮಾರು ಹತ್ತಾರು ವರ್ಷಗಳಿಂದ ತನಗೆ ಪರಿಚಿತರಾಗಿದ್ದು, ಇವರು ಸಮಾಜ ಸೇವೆಯಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಹಾಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ತಪ್ಪದೇ ನಡೆಸಿಕೊಂಡು ಬರುತ್ತಿದ್ದು, ಇವರ ಕೆಲಸ ಕಾರ್ಯಗಳನ್ನು ಪರಿಗಣಿಸಿ ಇವರ ಸಂಸ್ಥೆಗೆ ಧನ ಸಹಾಯ ನೀಡಬೇಕೆಂದು ಕೋರಿರುತ್ತಾರೆ.

ಶ್ರೀ ಹೆಚ್. ಬಿ. ರಾಜೇಗೌಡ, ಅಧ್ಯಕ್ಷರು ಜನ ಸೇವಾ ಸಂಸ್ಥೆ, ನಂ. 304, ಭುವನೇಶ್ವರಿ ನಗರ, 10ನೇ ಮುಖ್ಯರಸ್ತೆ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ಕಳೆದ ಹಲವಾರು ವರ್ಷಗಳಿಂದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಜನಪರ ಕಾರ್ಯಚಟುವಟಿಕೆಗಳನ್ನು ಹಾಗೂ ಹೋರಾಟವನ್ನು ನಡೆಸಿಕೊಂಡು ಬರುತ್ತಿರುವುದಾಗಿ, ವಯಸ್ಸಾದವರಿಗೆ ಪಿಂಚಣಿ, ವಿಧವಾ ವೇತನ ಮತ್ತು ಬಡವರಿಗೆ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸುವುದು ಮತ್ತು ಜನರಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು, ರಸ್ತೆ ಬದಿಗಳಲ್ಲಿ ಗಿಡ ನೆಡುವುದು ಮತ್ತು ಓದುವ ಬಡ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಲೇಖನ ಸಾಮಾಗ್ರಿಗಳನ್ನು ನೀಡುವ ಮತ್ತು ಇನ್ನು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿ, ಪಾಲಿಕೆ ವತಿಯಿಂದ ರೂ. 15.00ಬ ಲಕ್ಷಗಳ ಧನ ಸಹಾಯ ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 07–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ರೂ.1,00,000/– (ಒಂದು ಲಕ್ಷ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***33]. ವಿಷಯದ ಸಂಖ್ಯೆ :–ತೆಆಸ್ಥಾಸ/324/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)85/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಕರ್ನಲ್ ಎಸ್. ಎಸ್. ಡಿಯೋರಾ, ಕಮಾಂಡಿಂಗ್ ಆಫೀಸರ್, 106, ಇನ್‌ಫೆಂಟ್ರಿ ಬೆಟಾಲಿಯನ್ (ಟಿ.ಎ) ಪಾರಾ ಪಿನ್ 934306, C/o 56 APO ರವರು ಮನವಿ ಸಲ್ಲಿಸಿ, ತಮ್ಮ ಘಟಕವು ಪ್ರತಿ ವರ್ಷ ಅಕ್ಟೋಬರ್ 9ನೇ ತಾರೀಖಿನಂದು Territorial Army Day ಆಚರಿಸುತ್ತಿದ್ದು, ಪ್ರತಿ ವರ್ಷ ಪಾಲಿಕೆಯಿಂದ Welfare Fund ಗಾಗಿ ಮಂಜೂರು ಮಾಡುತ್ತಿರುವ ರೂ. 5.00 ಲಕ್ಷಗಳ ಅನುದಾನವನ್ನು ಈ ಘಟಕದ ಹುತಾತ್ಮ ಸೈನಿಕರ ಕುಟುಂಬಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವ, ಮಕ್ಕಳಿಗೆ ವಿದ್ಯಾಭ್ಯಾಸ, ವಿದ್ಯಾರ್ಥಿ ವೇತನ ಒಂದು ಬಾರಿಯ ದಯಾ ಮೊತ್ತ, ಸೈನಿಕ ಕುಟುಂಬಗಳ ಕಲ್ಯಾಣ ಕಾರ್ಯಕ್ರಮಗಳಿಗೆ, ರಜಾ ಕಾಲದ ತರಬೇತಿ ಮತ್ತು ಒಂದು ಬಾರಿಯ ವೈದ್ಯಕೀಯ ಸಹಾಯಧನ ನೀಡಲು, ಆರ್ಮಿ ದಿನಾಚರಣೆಯ ದಿನದಂದು ಮಾಜಿ ಸೈನಿಕರಿಗೆ ಉಡುಗೊರೆಗಳನ್ನು ನೀಡಲು, ಹಾಲಿ ಸೈನಿಕರಿಗೆ ಪಾರಿತೋಷಕವನ್ನು ನೀಡಲು, ಮಕ್ಕಳ ವಸತಿ ಸೌಕರ್ಯಕ್ಕಾಗಿ ಬಳಸಲಾಗುವುದೆಂದು ತಿಳಿಸಿ, ಪ್ರಸಕ್ತ 2011–12 ನೇ ಸಾಲಿನ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿಯವರಿಗೆ **2010–11** ನೇ ಸಾಲಿಗೆ **ರೂ. 5.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 10–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಹುತಾತ್ಮ ಸೈನಿಕರ ಕುಟುಂಬ ಕಲ್ಯಾಣಕ್ಕಾಗಿ ರೂ.5,00,000/– (ಐದು ಲಕ್ಷ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***34]. ವಿಷಯದ ಸಂಖ್ಯೆ :–ತೆಆಸ್ಥಾಸ/325/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)66/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಗರದ ವಿವಿಧ ಸಂಘ ಸಂಸ್ಥೆಗಳಿಗೆ (ಗ್ರಾಂಟ್–ಇನ್–ಏಡ್) ಹಣವನ್ನು ಬಿಡುಗಡೆ ಮಾಡುವಾಗ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ: ನಅಇ 108 ಎಂಎನ್‌ಯು 03 ದಿನಾಂಕ: 27.05.2003 ರ ಪತ್ರದಲ್ಲಿ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆಯನ್ನು ಪಡೆದ ನಂತರವೇ ಪಾವತಿಸಲು ಹಾಗೂ ಪ್ರತಿ ವರ್ಷ ಒಂದೇ ಸಂಸ್ಥೆಗೆ ಈ ಅನುದಾನ ನೀಡದಂತೆ ಆದೇಶಿಸಿರುತ್ತದೆ. ಸರ್ಕಾರದ ಪತ್ರದ ಸಂಖ್ಯೆ ನಅಇ 108 ಎಂಎನ್‌ಯು 2003 ದಿನಾಂಕ 01.08.2003 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ವಿವಿಧ ಸಂಘ–ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನ ನೀಡುವ ಬಗ್ಗೆ ಯಾವುದೇ ನಿರ್ದಿಷ್ಠವಾದ ಮಾರ್ಗಸೂಚಿಗಳನ್ನು ರಚಿಸಿರುವುದಿಲ್ಲವಾದ ಕಾರಣ ಸಂಘ–ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗಸೂಚಿಗಳನ್ನು ರಚಿಸಿಕೊಂಡು ವಿವಿಧ ಸಂಘ–ಸಂಸ್ಥೆಗಳಿಗೆ ಪಾಲಿಕೆಯ ಹಂತದಲ್ಲಿಯೇ ಈ ಬಾಬ್ತಿಗೆ ಅನುಮೋದಿತ ಆಯವ್ಯಯ ಮಿತಿಯಲ್ಲಿ ಅನುದಾನವನ್ನು ಮಂಜೂರು ಮಾಡಲು ಸೂಚನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ನಗರದ ಯಾವುದೇ ಸಂಘ ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನವನ್ನು ಬಿಡುಗಡೆ ಮಾಡುವಾಗ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಸಮಸಂಖ್ಯೆಯ ಟಿಪ್ಪಣಿ ದಿನಾಂಕ: 25.11.2003 ರಂತೆ ಟಿಪ್ಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗಳಲ್ಲಿ "ಈಗಾಗಲೇ ಸಹಾಯ ಧನ ಕೋರಿರುವ ಸಂಘ ಸಂಸ್ಥೆಗಳಿಗೆ ಅನುದಾನವನ್ನು ನೀಡುವುದು ಹಾಗೂ ಟಿಪ್ಪಣಿಯಲ್ಲಿ ಮಂಡಿಸಿರುವ ಮಾರ್ಗಸೂಚಿಗಳನ್ನು 2004–05 ನೇ ಸಾಲಿನಿಂದ ಕಡ್ಡಾಯವಾಗಿ ಪಾಲಿಸುವುದು" ಎಂಬುದಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ.

ಅದರಂತೆ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಎಸಿ(ಎ)ಪಿಆರ್ 1991/03–04 ದಿನಾಂಕ 18.03.2004 ರ ಆಯುಕ್ತರವರ ಕಛೇರಿ ಆದೇಶದಂತೆ ಸಂಘ ಸಂಸ್ಥೆಗಳಿಗೆ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ನಗರ ಪಾಲಿಕೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

1. ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ಯಾವುದೇ ಒಂದು ಸಂಘ/ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿರಬೇಕು ಹಾಗೂ ಸದರಿ ಸಾಲಿನ ಅಥವಾ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಬೇಕು.
2. ಕನಿಷ್ಠಪಕ್ಷ ಹಿಂದಿನ ಮೂರು ವರ್ಷಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು/ಸಭೆ ಸಮಾರಂಭಗಳು/ಸಾರ್ವಜನಿಕ ಸೇವೆ ಇತ್ಯಾದಿ ನಡೆಸಿರುವ ಬಗ್ಗೆ ದಾಖಲೆ ಸಲ್ಲಿಸಬೇಕು.
3. ಸದರಿ ಸಂಸ್ಥೆಯ ಇರುವಿಕೆಯ ಬಗ್ಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಅಥವಾ ಆರೋಗ್ಯ ವೈದ್ಯಾಧಿಕಾರಿಗಳ ವತಿಯಿಂದ ಸ್ಥಳೀಯ ಮಹಜರ್ ಮಾಡಿ ವರದಿಯನ್ನು ಸಲ್ಲಿಸತಕ್ಕದ್ದು.
4. ಸದರಿ ಸಂಸ್ಥೆಯು ಈಗಾಗಲೇ ಪಾಲಿಕೆಯ ವತಿಯಿಂದಾಗಲೀ ಅಥವಾ ಮಹಾಪೌರರ ನಿಧಿಯಿಂದಾಗಲೀ ಅನುದಾನ ಪಡೆದಿದ್ದ ಪಕ್ಷದಲ್ಲಿ ಯಾವ ಸಾಲಿನಲ್ಲಿ ಪಡೆದಿತ್ತೆಂಬ ಬಗ್ಗೆ ಮಾಹಿತಿ ಪಡೆಯತಕ್ಕದ್ದು.
5. ಸಂಘ ಸಂಸ್ಥೆಗಳು ಕೋರಿರುವಂತಹ ಕಾರ್ಯಕ್ರಮಗಳಿಗೆ ತಗುಲುವ ವೆಚ್ಚದ ಬಗ್ಗೆ ಅಂದಾಜು ಸಲ್ಲಿಸುವುದು.
6. ಸಂಸ್ಥೆಯು ಸಭೆ–ಸಮಾರಂಭವನ್ನು ಸೂಚಿತ ದಿನದಂದು ಏರ್ಪಡಿಸಿದ್ದ ಬಗ್ಗೆ ವರದಿ.
7. ಅನುದಾನವನ್ನು ಐದು ವರ್ಷಗಳಿಗೊಮ್ಮೆ ಒಂದು ಸಂಘ/ಸಂಸ್ಥೆಗೆ ಅನುದಾನ ನೀಡಲಾಗುವುದು.
8. ಅನುದಾನ ಕೋರುವ ಸಂಘ/ಸಂಸ್ಥೆಗಳ ಕಾರ್ಯಚಟುವಟಿಕೆಗಳು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರಬೇಕು. ಜಾತ್ಯಾತೀತವಾದ, ಧರ್ಮಾತೀತವಾದ ಹಾಗೂ ರಾಜಕೀಯೇತರ ಕಾರ್ಯಕ್ರಮ ವಾಗಿರಬೇಕು.
9. ಮೇಲಿನಂತೆ ಅರ್ಹತೆಗಳಿರುವ ಸಂಘ/ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 5 ಸಾವಿರಗಳಿಂದ 10 ಸಾವಿರ ರೂ. ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ 10 ಸಾವಿರದಿಂದ 25 ಸಾವಿರ ರೂ. ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸಿದೆ.
10. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ/ಆಸ್ಪತ್ರೆಗಳಿಗೆ ಹಾಗೂ ಕ್ರೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ.
11. ಪಾಲಿಕೆಯಿಂದ ಅನುದಾನವನ್ನು ಪಡೆದ ಸಂಸ್ಥೆಯು ಸದರಿ ಅನುದಾನವನ್ನು ನಿಗದಿತ ಉದ್ದೇಶಗಳಿಗೆ ಸಕ್ರಮವಾಗಿ ಬಳಸಿರುವ ಬಗ್ಗೆ ನಿರ್ದಿಷ್ಠ ನಮೂನೆಯಲ್ಲಿ ಲೆಕ್ಕ ಪತ್ರ ಹಾಗೂ ಪ್ರಮಾಣಪತ್ರಗಳನ್ನು ಒದಗಿಸಲು ಬದ್ದರಾಗಿರತಕ್ಕದ್ದು.
12. ಪಾಲಿಕೆಯಿಂದ ಅನುದಾನವನ್ನು ಒಂದು ವಿವೇಚನಾತ್ಮಕ ಸಹಾಯವಾಗಿದ್ದು, ಇದರಿಂದ ಯಾವುದೇ ಸಂಸ್ಥೆಯು ಅಂತಹ ಅನುದಾನ ಪಡೆಯುವ ಹಕ್ಕನ್ನು ಸೃಷ್ಠಿಸಿದಂತಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಪಾಲಿಕೆಯಿಂದ ನೀಡಲಾದ ಅನುದಾನವನ್ನು ತಡೆಹಿಡಿಯುವ ಅಥವಾ ನಿರ್ದಿಷ್ಠ ಉಪಯೋಗಗಳಿಗೆ ನೀಡಲಾದ ಅನುದಾನವನ್ನು ಸಕಾಲದಲ್ಲಿ ಕ್ರಮಬದ್ಧವಾಗಿ ಉಪಯೋಗಿಸದಿರುವ ಸಂದರ್ಭದಲ್ಲಿ ಅಂತಹ ಅನುದಾನವನ್ನು ಪಾಲಿಕೆಯು ಹಿಂದಕ್ಕೆ ಪಡೆಯಬಹುದಾಗಿರುತ್ತದೆ.
13. ಅನುದಾನ ಕೋರುವ ಸಂಘ/ಸಂಸ್ಥೆಯು ಏಕಮಾತ್ರ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿರಬಾರದು.
14. ಪಾಲಿಕೆಯಿಂದ ಅನುದಾನ ಬಿಡುಗಡೆ ಮಾಡುವ ಮುನ್ನ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದಂತೆ ಬಿಡುಗಡೆ ಮಾಡಬಹುದಾಗಿದೆ.

ಮುಂದುವರೆದಂತೆ, 2010–11 ನೇ ಸಾಲಿನಲ್ಲಿ ಕೊಡುಗೆ ಮತ್ತು ಸಹಾಯಾನುಧಾನ ಲೆಕ್ಕ ಶೀರ್ಷಿಕೆಯಡಿ ಪಾಲಿಕೆ ಸಭೆಯ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಒಟ್ಟು 170 ಸಂಘ/ಸಂಸ್ಥೆಗಳು ಹಾಗೂ ವೈಯಕ್ತಿಕವಾಗಿ ಕ್ರೀಡಾಪಟುಗಳಿಗೆ ಸಹಾಯಧನ/ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. **ಈ ಮಂಜೂರಾತಿಗಳು ಮೇಲ್ಕಂಡ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿದಂತಾಗುತ್ತದೆ.**

**2010–11ನೇ ಆರ್ಥಿಕ ವರ್ಷದಲ್ಲಿ ಸಹಾಯಧನ/ಅನುದಾನ ಪಡೆದುಕೊಂಡಂತಹ ಸಂಘ ಸಂಸ್ಥೆಗಳು ಮತ್ತು ಕ್ರೀಡಾಪಟುಗಳು ಅನುದಾನ/ಸಹಾಯಧನ ಕೋರಿ ಪ್ರಸಕ್ತ ಸಾಲಿನಲ್ಲಿಯೂ ಸಹ ಮನವಿಯನ್ನು ಸಲ್ಲಿಸಿರುತ್ತಾರೆ**

ಹಾಲಿ ಅಳವಡಿಸಿಕೊಂಡಿರುವ ಮಾರ್ಗಸೂಚಿಗಳಲ್ಲಿ ಕ್ರೀಡಾಪಟುಗಳು ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತವರಿಗೆ ವ್ಯಕ್ತಿಗತವಾಗಿ ಅನುದಾನ/ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಪ್ರಸಕ್ತ ಸಾಲಿನಲ್ಲಿಯೂ ಸಹ ಇದೇ ರೀತಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಿದಲ್ಲಿ, ಲೆಕ್ಕ ಪರಿಶೋಧನ ಕೈಗೊಂಡ ಸಂದರ್ಭದಲ್ಲಿ ಅಧಿಕಾರಿ ವರ್ಗದವರು ಸಮಸ್ಯೆಗೆ ಒಳಗಾಗುವುದರ ಜೊತೆಗೆ ಸಾರ್ವಜನಿಕ ಚರ್ಚೆಗೆ ಗ್ರಾಸ ಮಾಡಿ ಕೊಟ್ಟಂತಾಗುತ್ತದೆ.

ಆದ್ದರಿಂದ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಕಟ್ಟುನಿಟ್ಟಾಗಿ ಮಾರ್ಗಸೂಚಿಗಳ ಅನ್ವಯವೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ, ಅಥವಾ ಮೇಲ್ಕಂಡ ಹಿನ್ನೆಲೆಯಲ್ಲಿ ಸಂಘ–ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗತವಾಗಿ (ಕ್ರೀಡಾಪಟು, ನೃತ್ಯ ಕಲಾವಿದರು, ರಂಗಭೂಮಿ ಕಲಾವಿದರು, ವಿದ್ಯಾಭ್ಯಾಸ, ಇನ್ನಿತರೇ) ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ಮಾರ್ಗ ಸೂಚಿಗಳನ್ನು ಮಾರ್ಪಡಿಸಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಹಾಗೂ ಪಾಲಿಕೆ ಸಭೆಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *35]. ವಿಷಯದ ಸಂಖ್ಯೆ :–ತೆಆಸ್ಥಾಸ/326/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)78/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ. ರಮೇಶ್‌ರಾಜು, ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ರವರು ಪತ್ರ ಬರೆದು ವಾರ್ಡ್–184, ಉತ್ತರಹಳ್ಳಿ ವಲಯ ವ್ಯಾಪ್ತಿಯಲ್ಲಿ, ವಾಸವಾಗಿರುವ ಶ್ರೀ ಎಂ.ಜಿ. ವಿಷ್ಣು ನಂ. 177, ಪೋಸ್ಟ್ ಆಫೀಸ್ ಹಿಂಭಾಗ, ಸುಬ್ರಮಣ್ಯಪುರ ಅಂಚೆ, ಉತ್ತರಹಳ್ಳಿ, ಬೆಂಗಳೂರು–61 ರವರು ರಾಷ್ಟ್ರೀಯ ತ್ರೋಬಾಲ್ ಕ್ರೀಡೆಗೆ ಕರ್ನಾಟಕ ರಾಜ್ಯದಿಂದ ಆಯ್ಕೆಯಾಗಿದ್ದು, ಸದರಿ ರವರು ದಿನಾಂಕ 28.09.2011 ರಿಂದ 30.09.2011 ರವರೆಗೆ ಹಾಗೂ ದಿನಾಂಕ 01.10.2011 ರಂದು ಉತ್ತರ ಪ್ರದೇಶ ಹಾಗೂ ನೇಪಾಳದಲ್ಲಿ ಕ್ರಮಾಂಕವಾಗಿ ನಡೆಯುವ ರಾಷ್ಟ್ರೀಯ ಮಟ್ಟದ ತ್ರೋಬಾಲ್ ಕ್ರೀಡೆಗೆ ಭಾಗವಹಿಸುವ ಸಲುವಾಗಿ, ಸುಮಾರು ರೂ. 16,000/– ಗಳು ವೆಚ್ಚವಾಗುವುದಾಗಿ, ಮನವಿ ಪತ್ರದಲ್ಲಿ ಕೋರಿರುವ ಮೇರೆಗೆ, ಸದರಿಯವರಿಗೆ ಕ್ರೀಡೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರೋತ್ಸಾಹ ಧನ ನೀಡುವಂತೆ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/– ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*ನಿರ್ಣಯ :* **ದಿನಾಂಕ : 10–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕ್ರೀಡಾಪಟುವಿಗೆ ರೂ.10,000/– (ಹತ್ತು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *36]. ವಿಷಯದ ಸಂಖ್ಯೆ :–ತೆಆಸ್ಥಾಸ/327/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್‌ಆರ್(4)83/2011–12, ದಿನಾಂಕ ಃ 10–10–2011ರಲ್ಲಿ ವಿವರಿಸಿರುವಂತೆ, ಶ್ರೀ ಅಶ್ವಥ ನಾರಾಯಣ ಗೌಡ, ಮಾನ್ಯ ಸದಸ್ಯರು ವಾರ್ಡ್–8 (ಕೊಡಿಗೇಹಳ್ಳಿ) ರವರು ಪತ್ರ ಬರೆದು ಕೆ.ಜಿ. ಮೃತ್ಯುಂಜಯ ನಂ. 1936, 'ಸಿ' ಬ್ಲಾಕ್, ಸಹಕಾರ ನಗರ, ಬೆಂಗಳೂರು – 92 ಕೋಡಿಗೇಹಳ್ಳಿ ವಾರ್ಡ್–8 ರ ನಿವಾಸಿಯಾಗಿದ್ದು ಇವರು ನನಗೆ ಚಿರಪರಿಚಿತರಾಗಿರುತ್ತಾರೆಂದು ಇವರ ಮಗಳು ಕುಮಾರಿ ಎಂ. ಸೌಮ್ಯ ರವರು ಅಂತರ ರಾಷ್ಟ್ರೀಯ ಸಿಂಗಾಪುರ ಒಪನ್ ಟೆಕೋನ್ಡೊ ಐಟಿ ಎಫ್ ಚಾಂಪಿಯನ್ ಶಿಪ್ ಸ್ಪರ್ಧೆಗೆ ಸಿಂಗಾಪುರದಲ್ಲಿ ದಿನಾಂಕ 8 ಮತ್ತು 09–10–2011 ರಂದು ನಡೆಯುವ ಸ್ಪರ್ಧೆಯಲ್ಲಿ ಭಾರತದೇಶವನ್ನು ಪ್ರತಿನಿಧಿಸುತ್ತಿದ್ದು ಇವರಿಗೆ ಸಾರಿಗೆ ವಸತಿ ಮತ್ತು ಇತರೆ ವೆಚ್ಚಕ್ಕೆ ಬಿ.ಬಿ.ಎಂ.ಪಿ. ವತಿಯಿಂದ ಕ್ರೀಡಾ ಪ್ರೋತ್ಸಾಹ ಧನ ನೀಡಬೇಕಾಗಿ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/– ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 10–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕ್ರೀಡಾಪಟುವಿಗೆ ರೂ.10,000/– (ಹತ್ತು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *37]. ವಿಷಯದ ಸಂಖ್ಯೆ :–ತೆಆಸ್ಥಾಸ/328/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್‌ಆರ್(4)79/2011–12, ದಿನಾಂಕ ಃ 10–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಭಾಗ್ಯಮ್ಮ, ನಂ. 240, 1ನೇ ಮುಖ್ಯರಸ್ತೆ, ಮಂಜುನಾಥನಗರ, ತುಮಕೂರು ರಸ್ತೆ, ಬೆಂಗಳೂರು – 560 073 ರವರು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿ, ತಾನು ಎಸ್.ಸಿ. ಜನಾಂಗಕ್ಕೆ ಸೇರಿದವಳಾಗಿದ್ದು, ಮಂಜುನಾಥ ನಗರದಲ್ಲಿ ಸುಮಾರು 30 ವರ್ಷಗಳಿಂದ ಶ್ರೀ ಮುನೇಶ್ವರ ಸ್ವಾಮಿಯ ದೇವಸ್ಥಾನ ಸಣ್ಣದಾಗಿ ಕಟ್ಟಿಸಿ ಪೂಜೆ ಪುರಸ್ಕಾರ ಮಾಡಿಕೊಂಡು ಬಂದಿದ್ದೇನೆ. ಆದರೆ, ಮಳೆ ಬಂದಾಗ ದೇವಸ್ಥಾನದ ಛಾವಣಿ ಸೋರಿ ನೀರು ಒಳಗೆ ನಿಲ್ಲುವುದಾಗಿ ತಿಳಿಸಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ಮುಖ್ಯ ಮಂತ್ರಿಗಳ ಸಚಿವಾಲಯದಿಂದ ಮುಜರಾಯಿ ಇಲಾಖೆಗೆ ಸೇರಿದವರಿಗೆ ಮಾತ್ರ ಸಹಾಯ ಧನ ದೊರಕುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಪಾಲಿಕೆ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿಯವರಿಗೆ ರೂ. 10,000/- ಗಳ ಸಹಾಯಧನವನ್ನು ಮಂಜೂರು ಮಾಡುವ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 10-10-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಅರ್ಜಿದಾರರಿಗೆ ರೂ.10,000/- (ಹತ್ತು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *38]. ವಿಷಯದ ಸಂಖ್ಯೆ :-ತೆಆಸ್ಥಾಸ/329/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)55/2011-12, ದಿನಾಂಕ : 10-10-2011ರಲ್ಲಿ ವಿವರಿಸಿರುವಂತೆ, ಶ್ರೀ ರವಿ ಕುಮಾರ್, ಸಿ-19/2, ಡಿಆರ್‌ಡಿಓ ಟೌನ್ ಶಿಪ್, ಸಿ.ವಿ. ರಾಮನ್ ನಗರ, ಬೆಂಗಳೂರು – 560 093. ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ದಿನಾಂಕ 21.08.2011 ರಿಂದ 27.08.2011 ರವರೆಗೆ ಕೆನಡಾ ದೇಶದ Vancouver ನಲ್ಲಿ ನಡೆಯಲಿರುವ BWF 5th Senior World Championship Tournaments ನ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ದೇಶವನ್ನು ಪ್ರತಿನಿಧಿಸುತ್ತಿದ್ದು, ಈ ಕ್ರೀಡೆಯಲ್ಲಿ ಭಾಗವಹಿಸಲು ಕೆನಡಾಗೆ ಹೋಗಿ ಬರಲು ಸುಮಾರು. ರೂ. 2.90 ಲಕ್ಷ ವೆಚ್ಚವಾಗುವುದಾಗಿ ತಿಳಿಸಿ, ಇದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ. ಹಾಗೂ ಅನುಮತಿ ನೀಡಿದಲ್ಲಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚಿಹ್ನೆಯನ್ನು ಧರಿಸಿ ಪಾಲಿಕೆಗೆ ಗೌರವ ತರುವುದಾಗಿ ತಿಳಿಸಿರುತ್ತಾರೆ. ಹಾಗೂ ಸದರಿಯವರು ಡಿಆರ್‌ಡಿಓ ರವರು ಆಯೋಜಿಸಿರುವ ಪುರುಷರ ಸಿಂಗಲ್ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ 18 ಬಾರಿ ಮತ್ತು 15 ಬಾರಿ ಡಬಲ್ ಪಂದ್ಯಾವಳಿಯಲ್ಲಿ ವಿಜೇತರಾಗಿದ್ದು, ಸಿಜಿಇಡಬ್ಲ್ಯೂಸಿಸಿ ರವರು ಆಯೋಜಿಸಿದ್ದ ಡಬಲ್ ಪಂದ್ಯಾವಳಿಯಲ್ಲಿ 4 ಬಾರಿ ಮತ್ತು ಸಿಂಗಲ್ಸ್‌ನಲ್ಲಿ 2 ಬಾರಿ ಹಾಗೂ 2006 ರಲ್ಲಿ ಪಟ್ನಾದಲ್ಲಿ ನಡೆದ All India Civil Service Badminton Tournament (National) ರ ಡಬಲ್ ಪಂದ್ಯಾವಳಿಯಲ್ಲಿಯೂ ವಿಜೇತರಾಗಿರುವುದಾಗಿ ತಿಳಿಸುತ್ತಾ, ಕೆನಡಾದಲ್ಲಿ ಬ್ಯಾಟ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಕನಿಷ್ಠ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ-ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/- ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/- ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ ಅನುಮೋದನೆಗೆ ನಿರೀಕ್ಷಿಸಿ ಸದರಿ ಕ್ರೀಡಾಪಟುವಿಗೆ ರೂ. 1.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವಿಗೆ ರೂ. 1.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿರುವ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 10-10-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಈಗಾಗಲೇ ಸಮಿತಿಯು ದಿನಾಂಕ : 26-09-2011 ರಂದು ವಿಷಯದ ಸಂಖ್ಯೆ : ತೆಆಸ್ಥಾಸ/263/2011-12 ರಲ್ಲಿ ರೂ.20,000/- (ಇಪ್ಪತ್ತು ಸಾವಿರ) ಗಳನ್ನು ಮಂಜೂರು ಮಾಡಿರುವ ನಿರ್ಣಯವನ್ನು ರದ್ದುಪಡಿಸಿದೆ.**

## *39]. ವಿಷಯದ ಸಂಖ್ಯೆ :–ತೆಆಸ್ಥಾಸ/330/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)29/2011–12 ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಾರದಾ ನಾಯಕ್, ಕಾರ್ಯದರ್ಶಿ, ಲಲಿತ ಕಲಾ ಕ್ಷೇತ್ರ (ರಿ) ನಂ. 140, 4ನೇ ಕ್ರಾಸ್, 7ನೇ ಮುಖ್ಯ ರಸ್ತೆ, 3ನೇ ಹಂತ, ಜೆ.ಪಿ. ನಗರ, ಬೆಂಗಳೂರು – 560 078. ರವರು ಮನವಿ ಸಲ್ಲಿಸಿ, ಲಲಿತ ಕಲಾಕ್ಷೇತ್ರ "ರಾಗ ಸುಧಾ ಮತ್ತು ನಾಟ್ಯ ರಂಜನಿ" ಸಾಂಸ್ಕೃತಿಕ ಕಾರ್ಯಕ್ರಮದ ಆಚರಣೆಯನ್ನು ನಾಲ್ಕು ದಿನಗಳ ಕಾಲ (9, 10, 11 ಮತ್ತು 12ನೇ ಜುಲೈ 2011) ನಡೆಸಲು ತೀರ್ಮಾನಿಸಿದ್ದೇವೆಂದು ಬೆಂಗಳೂರಿನ ಗಾಯನ ಕಾರ್ಯಕ್ರಮಗಳ ಜೊತೆಗೆ ಪ್ರತಿಯೊಂದು ಕ್ಷೇತ್ರದ ಗಣ್ಯರನ್ನು ಸನ್ಮಾನಿಸಲು ತೀರ್ಮಾನಿಸಿದ್ದೇವೆ ತಿಳಿಸುತ್ತಾ, ಸದರಿ ಕಾರ್ಯಕ್ರಮಕ್ಕೆ ಅಂದಾಜು ರೂ. 10.00 ಲಕ್ಷಗಳು ವೆಚ್ಚವಾಗುವುದಾಗಿ ತಿಳಿಸಿ, ವಿಶೇಷ ಘಟಕದ ಯೋಜನೆಯಡಿಯಲ್ಲಿ ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 10,000/– ಗಳ** ಅನುದಾನ/ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 07–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ರೂ.10,000/– (ಹತ್ತು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *40]. ವಿಷಯದ ಸಂಖ್ಯೆ :–ತೆಆಸ್ಥಾಸ/331/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)60/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಮಾನ್ಯ ಉಪಮಹಾಪೌರರು ಟಿಪ್ಪಣಿ ಬರೆದು ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಬೆಂಗಳೂರು – 560 001. ಇವರು ನೀಡಿರುವ ಬೀದಿ ದೀಪದ ಬಗ್ಗೆ ಸಂಶೋಧನಾ ವರದಿ ಮತ್ತು ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಸಂಶೋಧನೆಯನ್ನು ನಡೆಸುತ್ತಿದ್ದು, ಇದಕ್ಕೆ ಆರ್ಥಿಕ ಸಹಾಯವನ್ನು ಕೇಳಿರುತ್ತಾರೆಂದು ತಿಳಿಸುತ್ತಾ, ಇದನ್ನು ಮಹಾನಗರ ಪಾಲಿಕೆ ವತಿಯಿಂದ ನೀಡಲು ಸಾಧ್ಯವಿದ್ದಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು ರವರು ಉಪ ಮಹಾಪೌರರಿಗೆ ಮನವಿ ಸಲ್ಲಿಸಿ, ತಾನು 10 ವರ್ಷಗಳಿಂದ ಬೆಂಗಳೂರು ನಗರ ಪರಿಸರ ವಿಜ್ಞಾನದ ಅಧ್ಯಯನ ಮಾಡಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದು ಈಗ ತನ್ನ ಮಾರ್ಗದರ್ಶನದಲ್ಲಿ ಶ್ರೀಮತಿ ಪೂರ್ಣಿಮ ಡಿ.ಎಸ್. ಹಾಗೂ ಶ್ರೀಮತಿ ಬಿ. ನೇತ್ರಾವತಿ ಇವರುಗಳು ಬೆಂಗಳೂರು ನಗರದ ಸೌರಶಕ್ತಿ ಬೀದಿ ದೀಪಗಳ ಕುರಿತು ಅಧ್ಯಯನ ಸಂಶೋಧನೆ ಮಾಡುತ್ತಿದ್ದು, ರಾಯಲಸೀಮಾ ವಿಶ್ವವಿದ್ಯಾನಿಲಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸೌರಶಕ್ತಿ ಬೀದಿ ದೀಪಗಳ ಬಗ್ಗೆ ಪಿ.ಹೆಚ್.ಡಿ. ಪದವಿಗೆ ನೊಂದಾಯಿಸಿದ್ದು ಎರಡು ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸೌರಶಕ್ತಿ ಬೀದಿ ದೀಪಗಳ ಕುರಿತು ಸಂಶೋಧನ ಅಧ್ಯಯನ ನಡೆಸಲು ರೂ. 5.00 (ಐದು ಲಕ್ಷ ರೂಪಾಯಿಗಳು) ಅನುದಾನವನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ, ಅಧ್ಯಯನ ಪೀಠಗಳಿಗೆ ಅನುದಾನ ನೀಡಲು ನಿರ್ದೇಶನವಿರುತ್ತದೆ. **ಸಂಶೋಧನ ಅಧ್ಯಯನಕ್ಕೆ ಅನುದಾನ ನೀಡುವ ಕುರಿತು ಯಾವುದೇ ನಿರ್ದೇಶನವಿರುವುದಿಲ್ಲ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *41]. ವಿಷಯದ ಸಂಖ್ಯೆ :–ತೆಆಸ್ಥಾಸ/332/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)73/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ನೀಲಾವತಿ, ನಂ. 23/1, 3ನೇ ಮುಖ್ಯರಸ್ತೆ, ಬಸವನಗುಡಿ ಬೆಂಗಳೂರು – 560 004. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತನ್ನ ಮಗಳು ಎಂ. ಅಂಜಲಿ ಕೊನೆಯ ವರ್ಷದ ಬಿ.ಕಾಂ. ಓದುತ್ತಿರುವುದಾಗಿ ತಿಳಿಸಿ ಅವಳಿಗೆ ವಿದ್ಯಾಭ್ಯಾಸ ವೆಚ್ಚ ರೂ. 30,000/– ಗಳಾಗುತ್ತಿದ್ದು, ತಾನು ಈಗಾಗಲೇ ರೂ. 20,000/– ಗಳನ್ನು ಪಾವತಿಸಿರುವುದಾಗಿ ತಿಳಿಸಿ, ಉಳಿದ ರೂ. 10,000/– ಗಳನ್ನು ಕಟ್ಟಲು ಆರ್ಥಿಕವಾಗಿ ದುರ್ಬಲರಾಗಿರುವ ತಮ್ಮ ಕೈಯಲ್ಲಿ ಸಾಧ್ಯವಿರುವುದಿಲ್ಲವಾದ್ದರಿಂದ ಪಾಲಿಗೆ ವತಿಯಿಂದ ತನ್ನ ಮಗಳ ವಿದ್ಯಾಭ್ಯಾಸಕ್ಕೆ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ. ಆದರೆ ವಿದ್ಯಾಭ್ಯಾಸಕ್ಕಾಗಿ ಸಹಾಯಧನ/ಅನುದಾನ ಮಂಜೂರು ಮಾಡುವ ಕುರಿತು ಯಾವುದೇ ನಿರ್ದೇಶನವಿಗಳಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 07–10–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಅರ್ಜಿದಾರರಿಗೆ ರೂ.10,000/– (ಹತ್ತು ಸಾವಿರ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *42]. ವಿಷಯದ ಸಂಖ್ಯೆ :–ತೆಆಸ್ಥಾಸ/333/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 22–09–2011ರಲ್ಲಿ ವಿವರಿಸಿರುವಂತೆ, ಕೇಂದ್ರ ಸರ್ಕಾರದ ಜೆ.ನರ್ಮ್ ಅಭಿಯಾನದಡಿಯಲ್ಲಿ ನಗರ ಪಾಲಿಕೆಗಳ ಆಡಳಿತದಲ್ಲಿ ಸುಧಾರಣೆ ಹಾಗೂ ಪಾರದರ್ಶಕತೆಯನ್ನು ತರಲು ಗಣಕೀಕರಣ ವ್ಯವಸ್ಥೆ ಅಳವಡಿಸಿಕೊಳ್ಳುವುದು ಒಂದು ಭಾಗವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನಗರ ಪಾಲಿಕೆಗಳು ಡೇಟಾ ಸೆಂಟರ್ ಹಾಗೂ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದೆ. ಒಟ್ಟು ಯೋಜನಾ ಮೊತ್ತವನ್ನು ಮೂರು ಭಾಗವಾಗಿ ಮಾಡಿ, ಕೇಂದ್ರ ಸರ್ಕಾರವು ಶೇಕಡ.35, ರಾಜ್ಯ ಸಕಾರವು ಶೇಕಡ 15 ಹಾಗೂ ನಗರ ಪಾಲಿಕೆಗಳು ಶೇಕಡ 50 ಭರಿಸಬೇಕಾಗಿರುತ್ತದೆ.

ಈ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಡಾಟಾ ಸೆಂಟರ್ ಹಾಗೂ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಿದ್ದು, ಯೋಜನಾ ಅವಧಿಯು ಮೂರು ವರ್ಷಗಳಾಗಿದ್ದು, ಯೋಜನೆಯ ಒಟ್ಟು ಮೊತ್ತ **ರೂ.17.20ಕೋಟಿ,** ಅದರಲ್ಲಿ ಪಾಲಿಕೆಯು **ರೂ.8.60ಕೋಟಿ** ಭರಿಸಬೇಕಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಪಾಲಿಕೆಯ 2011–12ನೇ ಸಾಲಿನ ಆಯ–ವ್ಯಯದಲ್ಲಿ ಅನುದಾನವನ್ನು ಮೀಸಲಿಟ್ಟಿರುತ್ತದೆ. ಯೋಜನಾ ವರದಿಯನ್ನು ಅನುಷ್ಠಾನಗೊಳಿಸಲು ಪಾಲಿಕೆಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 22–09–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## *43]. ವಿಷಯದ ಸಂಖ್ಯೆ :-ತೆಆಸ್ಥಾಸ/334/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)84/2011-12, ದಿನಾಂಕ : 13-10-2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಚಂದ್ರ, ಸದಸ್ಯರು ವಾರ್ಡ್ ಸಂಖ್ಯೆ 62, ರಾಮಸ್ವಾಮಿಪಾಳ್ಯ, ಹಾಗೂ ಶ್ರೀ ಬಾಬು, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್ ದಂಡು ಪ್ರದೇಶ ರವರುಗಳ ಪತ್ರಗಳನ್ನು ಇದರೊಂದಿಗೆ ಲಗತ್ತಿಸುತ್ತಾ, ಮುನಿರೆಡ್ಡಿ ಪಾಳ್ಯದ ಪೌರಕಾರ್ಮಿಕರು ವಾಸವಾಗಿರುವ ಪ್ರದೇಶದಲ್ಲಿ ಗಂಗಮ್ಮ ದೇವಸ್ಥಾನವಿದ್ದು, ದೇವಸ್ಥಾನದ ವತಿಯಿಂದ ಸುಮಾರು 30 ವರ್ಷಗಳಿಂದ ದಸರಾ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವು ದಸರಾ ಮಹೋತ್ಸವವನ್ನು ಆಚರಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸುಮಾರು 10.00 ಲಕ್ಷಗಳವರೆಗೆ ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ. 6.00 ಲಕ್ಷಗಳ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಸಂಬಂಧ ರೂ. 4.00 ಲಕ್ಷಗಳ ಅನುದಾನವನ್ನು ಮೇಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಮಾನ್ಯ ನಗರ ಪಾಲಿಕೆ ಸದಸ್ಯರ ಪತ್ರ ಹಾಗೂ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್ ದಂಡು ಪ್ರದೇಶ ರವರ ಪತ್ರಗಳು ಮತ್ತು ಕಾರ್ಯಕ್ರಮಗಳ ವಿವರಗಳ ಪಟ್ಟಿ ಮಾತ್ರ ಲಗತ್ತಾಗಿರುತ್ತದೆ.

ಕಳೆದ ಸಾಲಿನ ದಸರಾ ಮಹೋತ್ಸವ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಸದರಿ ಪಾಲಿಕೆ ಸದಸ್ಯರ ಹೆಸರಿಗೆ (**2010-11** ನೇ ಸಾಲಿಗೆ) **ರೂ. 2.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011-12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *44]. ವಿಷಯದ ಸಂಖ್ಯೆ :-ತೆಆಸ್ಥಾಸ/335/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)77/2011-12, ದಿನಾಂಕ : 07-10-2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಲೋಕೇಶ್ (ನಾಯಕ್) ಸದಸ್ಯರು ವಾರ್ಡ್ ಸಂಖ್ಯೆ 116, ನೀಲಸಂದ್ರ ರವರ ಪತ್ರವನ್ನು ಲಗತ್ತಿಸುತ್ತಾ, ಕರ್ನಾಟಕ ನಾಡಿನ ಹಮ್ಮೆಯ ದಸರಾ ಹಬ್ಬನ್ನು ಕಳೆದ 30 ವರ್ಷಗಳಿಂದಲೂ ಆಚರಿಸುತ್ತಿದ್ದು, ಈ ಹಬ್ಬವನ್ನು ನೀಲಸಂದ್ರ ವಾರ್ಡ್‌ನಲ್ಲಿ ಆಚರಿಸುವ ಸಂಬಂಧ ಸುಮಾರು ರೂ. 6.00 ಲಕ್ಷ ರೂಪಾಯಿಗಳನ್ನು ಪಾಲಿಕೆ ವತಿಯಿಂದ ಮಂಜೂರು ಮಾಡುವಂತೆ ಕೋರಿರುತ್ತಾರೆಂದು ತಿಳಿಸುತ್ತಾ ಸದರಿಯವರ ಪತ್ರದ ಬಗ್ಗೆ ಅನುದಾನ ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರಿಗೆ ಸೂಕ್ತ ಪ್ರಸ್ತಾವನೆ ಮಂಡಿಸಲು ನಿರ್ದೇಶಿಸಿರುತ್ತಾರೆ.

ಶ್ರೀ ಲೋಕೇಶ್ ನಾಯಕ, ಮಾನ್ಯ ಸದಸ್ಯರು ವಾರ್ಡ್–116 ನೀಲಸಂದ್ರ ರವರು ಪತ್ರ ಬರೆದು ನೀಲಸಂದ್ರ ವ್ಯಾಪ್ತಿಯಲ್ಲಿ ಹೆಚ್ಚಾಗಿ ಪೌರಕಾರ್ಮಿಕರು ವಾಸಿಸುತ್ತಿದ್ದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು 20 ದೇವಸ್ಥಾನಗಳಿದ್ದು, ಕಳೆದ ಮೂವತ್ತು ವರ್ಷಗಳಿಂದಲೂ ಇಲ್ಲಿ ದಸರಾ ಹಬ್ಬವನ್ನು ಆಚರಿಸಿಕೊಂಡು ಬರಲಾಗುತ್ತಿದ್ದು, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ದಸರಾ ಹಬ್ಬವನ್ನು ಆಚರಿಸಲು ಉದ್ದೇಶಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸುಮಾರು ರೂ. 10.00 ಲಕ್ಷಗಳವರೆಗೆ ವೆಚ್ಚವಾಗಲಿದ್ದು, ಮಹಾನಗರ ಪಾಲಿಕೆ ವತಿಯಿಂದ ರೂ. 6.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ದಸರಾ ಮಹೋತ್ಸವವನ್ನು ಆಚರಿಸಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *45]. ವಿಷಯದ ಸಂಖ್ಯೆ :–ತೆಆಸ್ಥಾಸ/336/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)80/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನರಸಿಂಹ, ಸಂಸ್ಥಾಪಕ ಗೌರವ ಕಾರ್ಯದರ್ಶಿ, ಉದಯಭಾನು ಕಲಾ ಸಂಘ (ನೊಂ.), ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘವು ಸ್ಥಾಪಿತವಾಗಿ ಸುಮಾರು ಐದು ದಶಕಗಳಗಿದ್ದು, ಈ ಸುದೀರ್ಘ ಅವಧಿಯಲ್ಲಿ ಸಂಘವು ನಾಡು–ನುಡಿ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಮಾಜದ ಎಲ್ಲಾ ವರ್ಗಗಳ ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಈ ಕಾರ್ಯಕ್ರಮಗಳಿಗೆ ಮಹಾನಗರ ಪಾಲಿಕೆ, ಸರ್ಕಾರ, ಸಾರ್ವಜನಿಕರ, ಸಂಘ ಸಂಸ್ಥೆಗಳ ಪ್ರೋತ್ಸಾಹ, ಉತ್ತೇಜನಗಳು ಸಿಕ್ಕಿವೆ ಮತ್ತು ಅವರ ಮನ್ನಣೆಯನ್ನೂ ಪಡೆದಿದೆರುವುದಾಗಿ ತಿಳಿಸಿರುತ್ತಾರೆ. **ಪಾಲಿಕೆಯಿಂದ 1975 ರಲ್ಲಿ ರೂ. 500/– ಗಳು, 1991 ರಿಂದ 15,000/– 1995–96 ರಿಂದ 25,000/– ಗಳು 2002–03 ರಿಂದ ರೂ. 1.00 ಲಕ್ಷ 2004–05 ರಿಂದ 2.00 ಲಕ್ಷ ಹಾಗೂ 2010–11ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ವಾರ್ಷಿಕ ಅನುದಾನವನ್ನು ಮಂಜೂರು ಮಾಡಿರುವುದಾಗಿ ತಿಳಿಸಿರುತ್ತಾರೆ.**

ತಮ್ಮ ಸಂಘವು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 ರಡಿಯಲ್ಲಿ ನೋಂದಣಿಯಾಗಿದ್ದು, ನಿರಂತರವಾಗಿ ಕಳೆದ ಐದು ದಶಕಗಳಿಗೂ ಹೆಚ್ಚು ಕಾಲದಿಂದ ಜನೋಪಕಾರಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಸುವರ್ಣ ಮಹೋತ್ಸವದೆಡೆಗೆ ಭದ್ರ ಹೆಜ್ಜೆಯನ್ನಿಡುತ್ತಿದೆಯೆಂದು ತಿಳಿಸಿ, ಸಂಘವು ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ – ನಗರ ಕಲ್ಯಾಣ, ಶಿಕ್ಷಣ, ವೈದ್ಯಕೀಯ ಹಾಗೂ ಕ್ರೀಡಾ ಯುವಜನ ಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಅಬ್ಬರ ಆಡಂಬರಗಳಿಲ್ಲದೆ ಸಕಾಲಿಕವೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವೂ ಆದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿ, ತಮ್ಮ ಸಂಘದ ಕಾರ್ಯ ಚಟುವಟಿಕೆಗಳಾದ ಕಾರ್ಯಸಾಧನೆ, ಸಂಘಟನೆಯೇ ಶಕ್ತಿ, ಹಾಗೂ ನಗರ ಪಾಲಿಕೆಯ ಪೌರಸೇವಾ ಕಾರ್ಯಕ್ರಮಗಳಿಗೆ ಪೂರಕ ಚಟುವಟಿಕೆಗಳಾದ : ನಗರ ಪಾಲಿಕೆಯ ಆಟದ ಮೈದಾನ ರಕ್ಷಣೆ – ಅಭಿವೃದ್ಧಿ, ಪೌರಸೌಲಭ್ಯಗಳ ಅಭಿವೃದ್ಧಿ, ಬೆಂಗಳೂರು ದರ್ಶನ, ಕರ್ನಾಟಕ ಇತಿಹಾಸದಲ್ಲಿ ಮಹತ್ವಪೂರ್ಣ ಕೃತಿ, ಉಚಿತ ವೈದ್ಯಕೀಯ ಸೌಲಭ್ಯ, ಆರೋಗ್ಯ ಪಾಲನೆಗೆ ದತ್ತಿನಿಧಿ ಸ್ಥಾಪನೆ, ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಗ್ರಾಮಾಂತರ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಅರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು/ಪ್ರತಿಭಾ ಪುರಸ್ಕಾರ, ಪುಸ್ತಕ ದಾನ, ಸಾಕ್ಷರತಾ ಪ್ರಚಾರ, ಸಾರ್ವಜನಿಕ ವಾಚನಾಲಯ – ಪುಸ್ತಕ ಭಂಡಾರಗಳು, ವಿದ್ಯಾರ್ಥಿ ಆಕರ ಗ್ರಂಥಾಲಯ, ಹಾಗೂ ಗ್ರಂಥ ಪ್ರಕಟಣೆ ಬೆಂಗಳೂರು ದರ್ಶನ (1975,

2005), ಕೆಂಪೇಗೌಡನಗರ ದರ್ಶನ, ಆಸ್ವಾದ ಅಭಿನಂದನ ಗ್ರಂಥ, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಸಾಂಸ್ಕೃತಿಕ ನಾಟಕ ಕಾರ್ಯಕ್ರಮಗಳನ್ನು ಹಾಗೂ 2010–11ನೇ ಸಾಲಿನಲ್ಲಿ "ಉದಯಭಾನು ಉನ್ನತ ಅಧ್ಯಯನ ಕೇಂದ್ರ" ವನ್ನು ರಚಿಸಿ ಹಿರಿಯರ ಮಾರ್ಗದರ್ಶನದಲ್ಲಿ ಯೋಜಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕಾರ್ಯೋನ್ಮುಖವಾಗಿದೆ ಅದಕ್ಕಾಗಿ ಸಹಾಯ ಮತ್ತು ಸಹಕಾರ ಕೋರಿ ಪಾಲಿಕೆ ವತಿಯಿಂದ 2011–12ನೆಯ ಸಾಲಿನಿಂದ ನಗರ ಪಾಲಿಕೆಯ ಆಯವ್ಯಯ ಪಟ್ಟಿಯಲ್ಲಿ ವಾರ್ಷಿಕ ಅನುದಾನ ರೂ. 25.00 ಲಕ್ಷಗಳನ್ನೊದಗಿಸಿ ಬಿಡುಗಡೆ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 5.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *46]. ವಿಷಯದ ಸಂಖ್ಯೆ :–ತೆಆಸ್ಥಾಸ/337/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)56/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಯಮುನಾ ಗೋಪಿನಾಥ್, ಗೌರವ ಕಾರ್ಯದರ್ಶಿ, ಕಿಂಕಿಣಿ, 308, 10ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆ ನಡೆಸುವ ರಾಷ್ಟ್ರ ಮಟ್ಟದ ವಾರ್ಷಿಕ ನೃತ್ಯೋತ್ಸವ ರಾಜ್ಯದ/ರಾಷ್ಟ್ರದ ಪ್ರತಿಷ್ಠಿತ ಸಾಂಸ್ಕೃತಿ ಘಟನೆಗಳಲ್ಲೊಂದಾಗಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದ 28ನೇ ಕಿಂಕಿಣಿ ನೃತ್ಯೋತ್ಸವವನ್ನು ಜನವರಿ 2012 ರಲ್ಲಿ ಆಯೋಜಿಸಲಾಗಿದ್ದು, ಬೆಂಗಳೂರು ಮಹಾನಗರದಲ್ಲಿ ನಡೆಸುತ್ತಾ ಬಂದಿರುವ ಈ ವಾರ್ಷಿಕ ನೃತ್ಯೋತ್ಸವಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಾರ್ಷಿಕವಾಗಿ ಹಲವಾರು ವರ್ಷಗಳಿಂದ ಅನುದಾನ ನೀಡುತ್ತಾ ಬಂದಿದ್ದು, ಈ ಉತ್ಸವ ಸತತವಾಗಿ 28 ವರ್ಷಗಳಿಂದ ನಡೆಸುತ್ತಾ ಬಂದಿರುವುದಾಗಿ ತಿಳಿಸಿರುತ್ತಾರೆ. 28ನೆಯ ಕಿಂಕಿಣಿ ನೃತ್ಯೋತ್ಸವನ್ನು 2012 ರ ಜನವರಿ ತಿಂಗಳಿನಲ್ಲಿ 14 ಕಾರ್ಯಕ್ರಮಗಳನ್ನೊಳಗೊಂಡ 7 ದಿನಗಳ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಈ ಉತ್ಸವದ ಅಂದಾಜು ವೆಚ್ಚ ಸುಮಾರು ರೂ. 9.00 ಲಕ್ಷಕ್ಕಿಂತ ಅಧಿಕವಾಗಿರುವುದಾಗಿ ತಿಳಿಸಿ ಪಾಲಿಕೆ ಕಳೆದ ವರ್ಷದ 27ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 20,000/– ಅನುದಾನ ನೀಡಿದ್ದು, ಉತ್ಸವವನ್ನು ವಿಜೃಂಭಣೆಯಿಂದ ನಡೆಸಲು ಅನುವಾಗಿರುವುದಾಗಿ ತಿಳಿಸಿ, ವರ್ಷೇ ವರ್ಷೇ ಹೆಚ್ಚಾಗಿರುವ ವೆಚ್ಚ ಗಮನಿಸಿ ಜನವರಿ 2012 ರಲ್ಲಿ ಬೆಂಗಳೂರು ನಗರದಲ್ಲಿ ನಡೆಸುವ 28ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 50,000/– ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 20,000/– ಗಳ** ಅನುದಾನ / ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ:354:ಎಂಎನ್‌ವೈ:96 ದಿನಾಂಕ 14–10–1996 ರಲ್ಲಿ ಸದರಿ ಸಂಸ್ಥೆಗೆ ಪಾಲಿಕೆ ವತಿಯಿಂದ ವಾರ್ಷಿಕ ರೂ. 10,000/– ಗಳ ವಾರ್ಷಿಕ ಅನುದಾನ ಮಂಜೂರು ಮಾಡಲು ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## ***ಹೆಚ್ಚುವರಿ ವಿಷಯಗಳು :–***

## ***01]. ವಿಷಯದ ಸಂಖ್ಯೆ :–ತೆಆಸ್ಥಾಸ/340/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)88/2011–12, ದಿನಾಂಕ : 20–10–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ಸೋಮಶೇಕರ್, ಅಧ್ಯಕ್ಷರು ರಾಷ್ಟ್ರಕೂಟ ಕನ್ನಡ ಗೆಳೆಯರ ಬಳಗ (ರಿ), ನಂ. 135/ಎ, 40ನೇ ಅಡ್ಡರಸ್ತೆ, 5ನೇ ಬಡಾವಣೆ, ಜಯನಗರ, ಬೆಂಗಳೂರು – 560041 ರವರು ಮನವಿ ಸಲ್ಲಿಸಿ 'ರಾಷ್ಟ್ರಕೂಟ ಕನ್ನಡ ಗೆಳೆಯರ ಬಳಗ'ದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ದಿನಾಂಕ 28–10–2011 ರಂದು ಜೆ.ಎಸ್.ಎಸ್. ಸಭಾಂಗಣ ಜಯನಗರ 8ನೇ ಬ್ಲಾಕ್, ಬೆಂಗಳೂರು ಕನ್ನಡವೆಂದರೆ ಬರಿ ನುಡಿಯಲ್ಲ ಕನ್ನಡ ಸಾಹಿತ್ಯ, ಸಂಗೀತ ಸಾಂಸ್ಕೃತಿಕ ಸಿರಿವಂತಿಕೆ ಮತ್ತು ಭಾಷೆ ಅದರ ಘಮವನ್ನು ಉಳಿಸಿಕೊಂಡಿದೆ. ಇದೆಲ್ಲವನ್ನು ಒಟ್ಟು ಗೂಡಿಸಿ ಸಿರಿಗನ್ನಡದ ಕಂಪನ್ನು ಒಂದೇ ವೇದಿಕೆಯಲ್ಲಿ ಸಾದರ ಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಸದರಿ ಕಾರ್ಯಚಟುವಟಿಕೆಗಳಿಗಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು, ಈ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 20–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ರೂ.3,00,000/– ಲಕ್ಷ (ಮೂರು ಲಕ್ಷ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***02]. ವಿಷಯದ ಸಂಖ್ಯೆ :–ತೆಆಸ್ಥಾಸ/342/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 16–09–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ49/142, ಸುಂಕೇನಹಳ್ಳಿ ಬುಲ್ ಟೆಂಪಲ್ ರಸ್ತೆಯಲ್ಲಿರುವ ಉದಯಭಾನು ಕಲಾಸಂಘ ಆಟದ ಮೈದಾನವು ಪಾಲಿಕೆಯ ಸ್ವತ್ತಾಗಿದ್ದು, ಇಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೆಲ ಅಂತಸ್ತು ಮತ್ತು 1ನೇ ಅಂತಸ್ತಿನ ಎರಡು ಕ್ರೀಡಾ ಕೋಠಡಿಗಳನ್ನು ನಿರ್ಮಿಸಲಾಗಿದ್ದು, ಕಾಮಧೇನು ಯೂತ್ ಕ್ಲಬ್ (ರಿ) ರವರು ಕ್ರೀಡಾ

ಹಾಗೂ ಸಾಂಸ್ಕೃತಿಕ, ಸಮಾಜ ಸೇವಾ ಚಟುವಟಿಕೆ ನಡೆಸಲು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಉಚಿತವಾಗಿ ನೀಡಲು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ ವರದಿಯಲ್ಲಿ ಸದರಿ ಕಟ್ಟಡದ ಅಳತೆ ಪೂರ್ವ–ಪಶ್ಚಿಮ 33 ಅಡಿಗಳು, ಉತ್ತರ–ದಕ್ಷಿಣ 25 ಅಡಿಗಳಿದ್ದು, ಇದರಲ್ಲಿ ನೆಲ ಅಂತಸ್ತು ಮತ್ತು ಒಂದನೇ ಅಂತಸ್ತಿನ ಕಟ್ಟಡವಿದ್ದು, ಈ ಕಟ್ಟಡವನ್ನು ಈಗಾಗಲೇ ಕಾಮಧೇನು ಯೂತ್ ಕ್ಲಬ್ ರವರು ಕ್ರೀಡಾ ಚಟುವಟಿಕೆಗಾಗಿ ಉಪಯೋಗಿಸುತ್ತಿದ್ದು, ಗುತ್ತಿಗೆಗೆ ನೀಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ದಿನಾಂಕ:01–03–2002ರ ಆಯುಕ್ತರ ಸುತ್ತೋಲೆ ಕಲಂ (1)ರಲ್ಲಿ 12 ತಿಂಗಳಿಗೆ ಮೀರದ ಅವಧಿಗೆ ಗುತ್ತಿಗೆ ನೀಡುವ ಅಧಿಕಾರವು ಆಯುಕ್ತರಿಗಿದ್ದು, ಸ್ಥಾಯಿಸಮಿತಿಗಳಿಗೆ 3–ವರ್ಷ, ಪಾಲಿಕೆ ಸಭೆಗೆ 5 ವರ್ಷ ಹಾಗೂ 5 ವರ್ಷಗಳಿಗೆ ಮೇಲ್ಪಟ್ಟ ಅವಧಿಗೆ ಗುತ್ತಿಗೆಗೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದೆ. ಹಾಗೂ ಕಲಂ–7(4)ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10%ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗದಿಪಡಿಸಲು ಆದೇಶವಿರುತ್ತದೆ.

ಈ ನಿವೇಶನದಲ್ಲಿ ನಿರ್ಮಿಸಿರುವ ಕಟ್ಟಡದ ಬೆಲೆ ಚದರಡಿ 1ಕ್ಕೆ ರೂ.600/– ಗಳ ಪ್ರಕಾರ ರೂ.4,95,000/–ಗಳಾಗಿದ್ದು, ಶೇ1%ರಂತೆ ಸವಕಳಿ ರೂ.19,500/–ಗಳನ್ನು ಕಳೆದು ರೂ.4,75,497/–ಗಳಾಗುತ್ತದೆ. ಈ ರೀತಿ ನಿವೇಶನ ಹಾಗೂ ಕಟ್ಟಡದ ಬೆಲೆ ಒಟ್ಟು ರೂ. 17,95,497/–ಗಳಾಗುತ್ತದೆ. ಮಾರುಕಟ್ಟೆ ಬೆಲೆಯ ಕನಿಷ್ಠ ಶೇ:10% ರಷ್ಟು ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ರೂ.1,38,000/–ಗಳಾಗುತ್ತದೆ. ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಮತ್ತು ಧರ್ಮ ದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯ್ತಿಗಳನ್ನು ಪರಿಗಣಿಸಲು ಸ್ಥಾಯಿ ಸಮಿತಿಗಳಿಗೆ ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ದಿನಾಂಕ:02–06–2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಸಂಘದವರಿಗೆ ಪಾಲಿಕೆ ಕಟ್ಟಡವನ್ನು ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 16–09–2011 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಸಂಸ್ಥೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ ಉಳಿದ ಅವಧಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18–10–2011ರ ನಿರ್ಣಯ.

***ನಿರ್ಣಯ :*** **ದಿನಾಂಕ : 18–10–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/343/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/73/2011–12, ದಿನಾಂಕ : 27–08–2011ರಲ್ಲಿ ವಿವರಿಸಿರುವಂತೆ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯವರು ಪಾಲಿಕೆ ವ್ಯಾಪ್ತಿಯ ನಾಗಪುರ ವಾರ್ಡ್ ಪ್ರವೇಶದಲ್ಲಿ ನಂದಿನಿ ಮಳಿಗೆ ತೆರೆಯಲು 10 ಸಿ.ಎ.ಜಾಗಗಳನ್ನು ಮಂಜೂರು ಮಾಡುವಂತೆ ಕೋರಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪ ವಿಭಾಗದವರು 5 ಸ್ಥಳಗಳನ್ನು ಗುರುತಿಸಿ ನಕ್ಷೆ ತಯಾರಿಸಿ ಅಳತೆಯನ್ನು ನಮೂದಿಸಿ ಈ ಸ್ಥಳದಲ್ಲಿ ಸದರಿ ಮಳಿಗೆಗಳನ್ನು ತೆರೆದರೆ ಸಾರ್ವಜನಿಕರಿಗೆ ಯಾವುದೇ ತರಹ ಅಡಚಣೆ ಉಂಟಾಗುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಮಾನ್ಯ ಉಪ ಮಹಾಪೌರರು ಇದೇ ವಾರ್ಡ್ ನಂ.67ರ ನಗರಸಭಾ ಸದಸ್ಯರಾಗಿದ್ದು, ಸಂಬಂಧಪಟ್ಟ ಕಾಮಗಾರಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಪ್ರವೇಶದಲ್ಲಿ ನಂದಿನಿ ಮಳಿಗೆ ತೆರೆಯುವುದು ಅವಶ್ಯಕತೆ ಇದೆ ಎಂದು ತಿಳಿಸಿ ಆದಷ್ಟು ಬೇಗ ಮುಂದಿನ ಕ್ರಮಕ್ಕೈಗೊಳ್ಳುವಂತೆ ಮೌಖಿಕ ಆದೇಶ ನೀಡಿರುವುದರಿಂದ, ಸದರಿ ಸ್ಥಳಗಳಲ್ಲಿ ನಂದಿನಿ ಮಳಿಗೆ ತೆರೆಯುವುದರಿಂದ ಯಾವುದೇ ಅಡಚಣೆ ಉಂಟಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಕಾಮಗಾರಿ ಇಲಾಖೆಯವರು ನೀಡಿರುತ್ತಾರೆ.

ಗುರುತಿಸಿರುವ 5 ಸ್ಥಳಗಳಲ್ಲಿ ಒಂದು ಸ್ಥಳವು ಸಾರ್ವಜನಿಕ ಉದ್ಯಾನವನದಲ್ಲಿರುವುದರಿಂದ ಈ ಸ್ಥಳ ಹೊರತುಪಡಿಸಿ ಉಳಿದ 4 ಸ್ಥಳಗಳಲ್ಲಿ ಲಭ್ಯವಿರುವ ವಿವಿಧ ಅಳತೆಗಳಲ್ಲಿ ನಂದಿನಿ ಮಳಿಗೆ ತೆರೆಯಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯವರಿಗೆ ಜಾಗವನ್ನು ನೀಡಲು ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ. ಈ ಎಲ್ಲಾ ಸ್ಥಳಗಳು ಪಾಲಿಕೆಯ ನಾಗಪುರ ವಾರ್ಡ್ ಸಂಖ್ಯೆ 67ರ ವ್ಯಾಪ್ತಿಯಲ್ಲಿ ಬರಲಿದ್ದು, ಸದರಿ ಸ್ಥಳದಲ್ಲಿ ಸರ್ಕಾರದ ಮಾರ್ಗಸೂಚಿ ದರದನ್ವಯ ರೂ.1600/– ದರ ನಿಗದಿಪಡಿಸಲು ಉಲ್ಲೇಖಿಸಿದ್ದು, ಸ್ಥಳಗಳ ಅಳತೆಗಳಿಗೆ ಅನುಗುಣವಾಗಿ ಮಾಸಿಕ ಗುತ್ತಿಗೆ ದರ ನಿಗದಿಗೊಳಿಸಿರುವುದನ್ನು ಪಾಲಿಕೆಯ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ.

**ಕ್ರ.ಸಂ.1:–** ಪಶ್ಚಿಮ ಕಾರ್ಡ್‌ರಸ್ತೆ, 2ನೇ ಹಂತ, 6ನೇ ಮುಖ್ಯರಸ್ತೆ, (ನಂದಿನಿ ಚಿತ್ರ ಮಂದಿರದ ಎದುರು) ಯಲ್ಲಿರುವ ಖಾಲಿಜಾಗದ ಅಳತೆ 8X10=80 ಚ.ಅ ಮಾರ್ಗಸೂಚಿ ದರ ರೂ.1600/ ಇದ್ದು, ವಸತಿಯೇತರ ಶೇ 40% ಹೆಚ್ಚಿಸಿದಲ್ಲಿ 2240X80=1,79,200 ರೂ ಆಗುತ್ತದೆ. ಇದರಲ್ಲಿ ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.17920/– ಮಾಸಿಕ ರೂ.1493/– ಆಗುತ್ತದೆ.

**ಕ್ರ.ಸಂ.2:–** ಮಹಾಲಕ್ಷ್ಮೀ ಬಡಾವಣೆ, 12ನೇ ಅಡ್ಡರಸ್ತೆ, ಹಾಪ್‌ಕಾಮ್ಸ್ ಪಕ್ಕದಲ್ಲಿರುವ ಖಾಲಿಜಾಗ ಅಳತೆ 10X10=100 ಚ.ಅ. ಮಾರ್ಗಸೂಚಿ ದರ ರೂ.1600/– ಇದ್ದು, ವಸತಿಯೇತರ ಶೇ 40% ಹೆಚ್ಚಿಸಿದಲ್ಲಿ 2240X100=2,24,000/– ರೂ ಆಗುತ್ತದೆ. ಇದರಲ್ಲಿ ಶೇ 10% ರಂತೆ ವಾರ್ಷಿಕ ಗುತ್ತಿಗೆ ರೂ.22,400/– ಮಾಸಿಕ ರೂ.1867/– ಆಗುತ್ತದೆ.

**ಕ್ರ.ಸಂ.3:–** ಮಹಾಲಕ್ಷ್ಮೀ ಬಡಾವಣೆ ಕಮಲಮ್ಮನಗುಂಡಿ ಹತ್ತಿರವಿರುವ ಹಾಪ್‌ಕಾಮ್ಸ್ ಪಕ್ಕ ಖಾಲಿಜಾಗದ ಅಳತೆ 10X10=100 ಚ.ಅ ಮಾರ್ಗಸೂಚಿ ದರ ರೂ.1600/– ಇದ್ದು, ವಸತಿಯೇತರ ಶೇ 40% ಹೆಚ್ಚಿಸಿದಲ್ಲಿ 2240X100=2,24000/– ಇದರಲ್ಲಿ ಶೇ 10% ರಂತೆ ವಾರ್ಷಿಕ ಗುತ್ತಿಗೆ ರೂ.22,400/– ಮಾಸಿಕ ರೂ 1867/– ಆಗುತ್ತದೆ.

**ಕ್ರ.ಸಂ.4:–** 12ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಪಕ್ಕ 4ನೇ ಮುಖ್ಯರಸ್ತೆ ಪಶ್ಚಿಮ ಕಾರ್ಡ್‌ರಸ್ತೆ, 2ನೇ ಹಂತದಲ್ಲಿರುವ ಖಾಲಿಜಾಗ ಅಳತೆ 9X10=90ಚ.ಅ ಮಾರ್ಗಸೂಚಿ ದರ ರೂ.1600/–ಇದ್ದು ವಸತಿಯೇತರ ಶೇ 40% ಹೆಚ್ಚಿಸಿದಲ್ಲಿ 2240X90=2,01,600/– ಇದರಲ್ಲಿ ಶೇ 10% ರಂತೆ ವಾರ್ಷಿಕ ಗುತ್ತಿಗೆ ರೂ.20,160/– ಮಾಸಿಕ ರೂ 1680/– ಆಗುತ್ತದೆ.

**ಸರ್ಕಾರದ ಆದೇಶ ಸಂಖ್ಯೆ:**ನಇ/129 ಟಿಎಂಡಿ 2002, ದಿನಾಂಕ: 02–05–2003ರ ಸುತ್ತೋಲೆಯಂತೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಉಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಅಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿರುತ್ತದೆ.

ಮೇಲ್ಕಂಡ 4 ಸ್ಥಳಗಳಲ್ಲಿ ನಂದಿನಿ ಮಳಿಗೆ ಸ್ಥಾಪಿಸುವ ಸಲುವಾಗಿ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಗೆ ಸರ್ಕಾರದ ಮಾರ್ಗಸೂಚಿ ದರದಲ್ಲಿ ಮೇಲೆ ತಿಳಿಸಿರುವಂತೆ, ಸ್ಥಳದ ಲಭ್ಯತೆಗೆ ಅನುಗುಣವಾಗಿ ನಿಗದಿಪಡಿಸಿರುವ ದರದಲ್ಲಿ 5 ವರ್ಷದ ಅವಧಿಗೆ ಗುತ್ತಿಗೆ ನೀಡುವ ಕುರಿತು, ಪ್ರಸಕ್ತ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಗುತ್ತಿಗೆ ದರವನ್ನು ನಿಗದಿಪಡಿಸುವ ಷರತ್ತಿನೊಂದಿಗೆ 4 ಸ್ಥಳಗಳಲ್ಲಿ ಗುತ್ತಿಗೆಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ: 27–08–2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18–10–2011ರ ನಿರ್ಣಯ.

***ನಿರ್ಣಯ :*** **ದಿನಾಂಕ : 18–10–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/344/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಬಿ12(5ಜಿ)ಪಿಆರ್/206/11–12, ದಿನಾಂಕ ಃ 24–10–2011ರಲ್ಲಿ ವಿವರಿಸಿರುವಂತೆ, ಸರ್ಕಾರವು, ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 35 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 15–10–2011 ರ ಆದೇಶದಲ್ಲಿ ದಿನಾಂಕ : 01–07–2011 ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ಲಭ್ಯವಿರುವ ತುಟ್ಟಿ ಭತ್ಯೆ ದರವನ್ನು ಮೂಲ ವೇತನದ ಶೇಕಡ 62.5 ರಿಂದ ಶೇಕಡ 69.5ಕ್ಕೆ ಹೆಚ್ಚಿಸಿ ಮಂಜೂರಾತಿ ನೀಡಿರುತ್ತದೆ. ಸರ್ಕಾರವು, ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 35 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 15 10–2011 ರ ಆದೇಶದಲ್ಲಿ ತಿಳಿಸಿರುವಂತೆ ಮಂಜೂರಾಗಿರುವ ತುಟ್ಟಿ ಭತ್ಯೆಯನ್ನು ನಗದಾಗಿ ಮರು ಆದೇಶ ಹೊರಡಿಸುವವರೆಗೂ ಪಾವತಿಸಲು ಆದೇಶವಾಗಿರುತ್ತದೆ. (ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ)

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಅನುಕೂಲವಾಗುವಂತೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 35 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 15 10–2011 ರ ಸರ್ಕಾರಿ ಆದೇಶವನ್ನು ನಗರ ಪಾಲಿಕೆಯಲ್ಲಿ ತುಟ್ಟಿ ಭತ್ಯೆಯ ಹೆಚ್ಚುವರಿಯಾದ ಶೇಕಡ. 7.00ರ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ ಇತರೆ ಭತ್ಯೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ವರದಿ ದಿನಾಂಕ : 19–10–2011 ರಂತೆ ಮುಖ್ಯ ಲೆಕ್ಕಾಧಿಕಾರಿಯವರು ಈ ಕೆಳಕಂಡಂತೆ ಅಭಿಪ್ರಾಯ ವರದಿ ನೀಡಿರುತ್ತಾರೆ.

ಈ ಹೆಚ್ಚುವರಿ ತುಟ್ಟಿ ಭತ್ಯೆಯಿಂದಾಗಿ ಪಾಲಿಕೆಗೆ ರೂ.67,75,884–00 ಲಕ್ಷಗಳು ಆರ್ಥಿಕ ಹೊಣೆಗಾರಿಕೆ (Financial Implications) ಬೀಳಲಿದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ನೀಡಿರುವ ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 35 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 15 10–2011 ರ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ ಃ 22–10–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**ಜಿ. ಮಂಜುನಾಥ ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**